ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಲಾಲ್ ಸಲಾಂ ಎ.ಬಿ.ಬರ್ಧನ್



ಸಂಪುಟ 10 ಸಂಚಿಕೆ 3 | ಜನವರಿ 17, 2016 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಪ್ಯಾಲೆಸ್ತೀನ್ ವಿಮೋಚನೆ ಆಗದೆ ನಮ್ಮೆಲ್ಲರ ಸ್ವಾತಂತ್ರ್ಯ ಅಪೂರ್ಣ



2016 ಹೊಸ ಹೋರಾಟಗಳ ಮುನ್ಸೂಚನೆ

ಪಠಾಣ್‌ಕೋಟ್ ಪಾಠ

ಹಾಲಿನ ಬೆಲೆ ಏರಿಕೆ ಹಿಂತೆಗೆದುಕೊಳ್ಳಿ

ಬಿಡದಿ ಗುತ್ತಿಗೆ ಕಾರ್ಮಿಕರ ಹೋರಾಟ



ಹೊಸ ವರ್ಷ ಬಂದಿದೆ ಹೊಸ ಹೋರಾಟಗಳ ಮುನ್ಸೂಚನೆ ತಂದಿದೆ

ಪ್ರಕಾಶ ಕಾರಟ್



2015

- ಬಿಜೆಪಿ ಸರಕಾರ ಮತ್ತು ರೈತಾಪಿ ಜನಗಳ ನಡುವಿನ ವೈರುಧ್ಯ ಭೂಸ್ವಾಧೀನ ಕಾಯ್ದೆ ತಿದ್ದುಪಡಿಯ ವಿರುದ್ಧ ಯಶಸ್ವಿ ಹೋರಾಟದಲ್ಲಿ ವ್ಯಕ್ತಗೊಂಡ ವರ್ಷ.
- ಸರಕಾರ ಮತ್ತು ಕಾರ್ಮಿಕ ವರ್ಗದ ನಡುವಿನ ವೈರುಧ್ಯ ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸುವ ಪ್ರಯತ್ನದ ವಿರುದ್ಧ 15 ಕೋಟಿ ಕಾರ್ಮಿಕರು ಸಾರ್ವತ್ರಿಕ ಮುಷ್ಕರದ ಮೂಲಕ ಬಲಿಷ್ಟ ಹೋರಾಟವನ್ನು ಆರಂಭಿಸಿರುವ ವರ್ಷ.
- ಆಳುವ ಪಕ್ಷ ಮತ್ತು ಜನತೆಯ ನಡುವಿನ ಕಂದರವನ್ನು ಇನ್ನಷ್ಟು ಅಗಲಗೊಳಿಸಿ 'ಮೋದಿ ಅಲೆ' ಇಳಿಯಲಾರಂಭಿಸಿದ ವರ್ಷ
- ಜಾತ್ಯತೀತ–ಪ್ರಜಾಪ್ರಭುತ್ವವಾದಿ ಶಕ್ತಿಗಳು ಮತ್ತು ಹಿಂದುತ್ವದ ಶಕ್ತಿಗಳ ನಡುವಿನ ವೈರುಧ್ಯ ಅಸಹಿಷ್ಣುತೆಯ ವಿರುದ್ಧ ಸಾಹಿತಿಗಳು, ಕಲಾವಿದರು, ವಿಜ್ಞಾನಿಗಳು, ಚರಿತ್ರೆಕಾರರು ದನಿಯೆತ್ತುವ ಮೂಲಕ ವ್ಯಕ್ತಗೊಂಡ ವರ್ಷ.
- ವರ್ಷವಿಡೀ ಪಾಕಿಸ್ತಾನದೊಂದಿಗೆ ಎದುರಾಳಿ ನಿಲುವನ್ನು ತಳೆದ ನಂತರ, ವರ್ಷದ ಕೊನೆಯ ವೇಳೆಗೆ ಇದ್ದಕ್ಕಿದ್ದಂತೆ ಕಟು ವಾಸ್ತವತೆಯ ಎದುರಲ್ಲಿ ಮತ್ತು ಅಮೆರಿಕಾದ ಒತ್ತಡದಿಂದಾಗಿ ತಿಪ್ಪರಲಾಗ ಹಾಕಿರುವ ವರ್ಷ.
- ಅಮೆರಿಕಾದೊಂದಿಗೆ ಮೋದಿ ಸರಕಾರದ ಅಡಿಯಾಳು ಮೈತ್ರಿಯ ಫಲಿತಾಂಶವಾಗಿಯೇ ನೈರೋಬಿಯಲ್ಲಿ ಡಬ್ಲ್ಯುಟಿಒ ಮಂತ್ರಿಮಟ್ಟದ ಸಮ್ಮೇಳನದಲ್ಲಿ ಮತ್ತು ಪ್ಯಾರಿಸ್ ಹವಾಮಾನ ಶೃಂಗಸಭೆಯಲ್ಲಿ ಭಾರತ ಮುದುಡಿಕೊಂಡು ಶರಣಾಗುವಂತೆ ಮಾಡಿರುವ ವರ್ಷ

2016

ಹೆಚ್ಚು ತೀಕ್ಷ್ಣಗೊಳ್ಳುತ್ತಿರುವ ವರ್ಗ ಮತ್ತು ಸಾಮಾಜಿಕ ವೈರುಧ್ಯಗಳಿಂದಾಗಿ ಬಿಜೆಪಿ ಸರಕಾರಕ್ಕೆ ಮತ್ತು ಅದರ ಹಿಂದುತ್ವ ಪೋಷಕರಿಗೆ ಹೆಚ್ಚು ಪ್ರಕ್ಷುಬ್ಧಮಯವಾಗಲಿರುವ ವರ್ಷ.

2015 ಬಿಜೆಪಿ ಆಳ್ವಿಕೆಯಲ್ಲಿ ವಿವಿಧ ವೈರುಧ್ಯಗಳು ತೀಕ್ಷ್ಣಗೊಂಡುದನ್ನು ಕಂಡ ವರ್ಷ. ನವ–ಉದಾರವಾದಿ ಧೋರಣೆಗಳಿಗೆ ಸಂಬಂಧಪಟ್ಟಂತೇ ಆಗಲಿ, ಆಕ್ರಮಣಕಾರೀ ಕೋಮುವಾದದ ವಿಷಯದಲ್ಲೇ ಆಗಲಿ ಮೋದಿ ಸರಕಾರದ ಆಶ್ರಯದಲ್ಲಿ ಬಲಪಂಥೀಯ ದಾಳಿ ಅನಾವರಣಗೊಂಡಿತು. ಈ ದಾಳಿಗೆ ಪ್ರತಿರೋಧ ಮತ್ತು ವಿರೋಧ ಹೆಚ್ಚುತ್ತಿರುವುದನ್ನೂ ಈ ವರ್ಷ ಕಂಡಿತು.

ಆರ್ಥಿಕ ನಿಧಾನಗತಿ ಮುಂದುವರೆಯುತ್ತಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆ 8.5ಶೇ. ಇರುತ್ತದೆಂದು ಸರಕಾರ ಅಂದಾಜು ಮಾಡಿತ್ತು. ಆದರೆ ಇತ್ತೀಚಿನ ಮಧ್ಯಂತರ ವಿಮರ್ಶೆಯ ಪ್ರಕಾರ 2015–16ರ ಮೊದಲ ಆರು ತಿಂಗಳಲ್ಲಿ ಜಿಡಿಪಿ ಬೆಳವಣಿಗೆ ದರ 7.2ಶೇ, ಮಾತ್ರ ಇತ್ತು. ಅದಕ್ಕಿಂತಲೂ ಹೆಚ್ಚು ಗಂಭೀರವಾದ ಸಂಗತಿಯೆಂದರೆ 2014–15ರ ಮೊದಲ ಅರ್ಧವರ್ಷಕ್ಕೆ ಹೋಲಿಸಿದರೆ 2015–16ರ ಮೊದಲ ಅರ್ಧವರ್ಷದಲ್ಲಿ ಆದಾಯಗಳ ಬೆಳವಣಿಗೆ ದರ ಸುಮಾರು ಅರ್ಧಕ್ಕೆ ಇಳಿದಿದೆ. ಕೃಷಿ ಆದಾಯಗಳಲ್ಲಿ ಈ ವರ್ಷ ಬೆಳವಣಿಗೆ ದಾಖಲಿಸಿಲ್ಲ.. ಇದರ ಫಲಿತಾಂಶವೆಂದರೆ 2015ರಲ್ಲಿ ನಿರುದ್ಯೋಗ ಗಮನಾರ್ಹವಾಗಿ ಬೆಳೆದಿದೆ. ಆಹಾರಪದಾರ್ಥಗಳ ಬೆಲೆಗಳ ಏರಿಕೆ ನಿಂತಿಲ್ಲ. ಈರುಳ್ಳಿ, ಬೇಳೆ ಮತ್ತು ತರಕಾರಿಗಳ ಬೆಲೆಗಳು ಸಾಮಾನ್ಯರ ಬದುಕನ್ನು ಕಷ್ಟಕರಗೊಳಿಸಿವೆ.

2015–16ರ ಕೇಂದ್ರ ಬಜೆಟ್ ಈ ಸರಕಾರದ ದೊಡ್ಡ ವ್ಯಾಪಾರಸ್ಥರ–ಪರ, ಶ್ರೀಮಂತ–ಪರ ಸ್ವರೂಪವನ್ನು ದೃಢಪಡಿಸಿದೆ. ಅವರಿಗಾಗಿ ಕಾರ್ಪೊರೇಟ್ ತೆರಿಗೆಗಳನ್ನು ಇಳಿಸಲಾಯಿತು, ವಿದೇಶಿ ಬಂಡವಾಳಕ್ಕೆ ಹೆಚ್ಚಿನ ರಿಯಾಯ್ತಿಗಳನ್ನು ಕೊಡಲಾಯಿತು. ಅದರೊಂದಿಗೇ ಐಸಿಡಿಎಸ್, ಆರೋಗ್ಯ ಮತ್ತು ಶಿಕ್ಷಣಕ್ಕೆ ಮಾಡುವ ಸಾರ್ವಜನಿಕ ಖರ್ಚುಗಳನ್ನು ಕಡಿತ ಮಾಡಲಾಯಿತು.

ದೇಶ ಒಂದು ತೀವ್ರ ಕೃಷಿ ಬಿಕ್ಕಟ್ಟನ್ನು ಕಾಣುತ್ತಿದೆ. 29ರಲ್ಲಿ 18 ರಾಜ್ಯಗಳನ್ನು ಬರ ತಟ್ಟಿದೆ. ರೈತರ ಆತ್ಮಹತ್ಯೆಗಳು ತೀಕ್ಷ್ಣವಾಗಿ ಏರಿವೆ. ಕೇವಲ ಮಹಾರಾಷ್ಟ್ರವೊಂದರಲ್ಲೇ ಜನವರಿಯಿಂದ ಅಕ್ಟೋಬರ್ ನಡುವೆ 2580 ರೈತರು ಆತ್ಮಹತ್ಯೆ ಮಾಡಿಕೊಂಡರು. ಇದು 2001ರ ನಂತರದ ಅತಿ ದೊಡ್ಡ ಸಂಖ್ಯೆ. ಆದರೂ ಮೋದಿ ಸರಕಾರ ರೈತರ ಸಂಕಟವನ್ನು ಪರಿಹರಿಸಲು ಏನೂ ಮಾಡಲಿಲ್ಲ. ಬೆಳೆಗಳ ಕನಿಷ್ಟ ಬೆಂಬಲ ಬೆಲೆಗಳನ್ನು ಗಮನಾರ್ಹವಾಗಿ ಏರಿಸಲಿಲ್ಲ. ಗ್ರಾಮೀಣ ಸಂಕಟವನ್ನು ಪರಿಹರಿಸಲು ಗ್ರಾಮೀಣ ಉದ್ಯೋಗ ಕಾರ್ಯಕ್ರಮದ ಅಗತ್ಯ ಬಹಳಷ್ಟಿರುವಾಗ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾನೂನಿನ ಅಡಿಯಲ್ಲಿ ನೀಡಬೇಕಾದ ಮೊತ್ತಗಳನ್ನು ಹಿಂದಿನ ಮಟ್ಟದಲ್ಲೇ ಉಳಿಸಿದೆ.

ಇಂತಹ ಸಂಕಟದ ಸನ್ನಿವೇಶದಲ್ಲೇ ಮೋದಿ ಸರಕಾರ ಕಾರ್ಪೊರೇಟ್ ಮಂದಿ ಮತ್ತು ರಿಯಲ್ ಎಸ್ಟೇಟ್ ಡೆವಲಪರ್‌ಗಳ ಹಿತ ಈಡೇರಿಸಲು ರೈತರು ಮತ್ತು ಕೃಷಿಕೂಲಿಕಾರರ ಮೇಲೆ ಒಂದು ಗಂಭೀರ ದಾಳಿ ನಡೆಸಿತು. ಸಂಸತ್ತು 2013ರಲ್ಲಿ ಪಾಸು ಮಾಡಿದ ಭೂಸ್ವಾಧೀನ ಕಾನೂನನ್ನು ದುರ್ಬಲಗೊಳಸಲು ಅದು ಪ್ರಯತ್ನಿಸಿತು. ಅದಕ್ಕಾಗಿ ಯಾವ ಮಟ್ಟಕ್ಕೂ ಹೋಗಲೂ ಈ ಸರಕಾರ ಸಿದ್ಧವಾಯಿತು, ಒಂದಲ್ಲ, ಮೂರು ಬಾರಿ ಈ ಕಾನೂನನ್ನು ತಿದ್ದುಪಡಿ ಮಾಡಲು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿತು.

ಹೀಗೆ 2015ರಲ್ಲಿ ತೀಕ್ಷ್ಣಗೊಂಡಿರುವ ಮೊದಲ ವೈರುಧ್ಯವೆಂದರೆ ಬಿಜೆಪಿ ಸರಕಾರ ಮತ್ತು ರೈತಾಪಿ ಜನಗಳ ನಡುವಿನ ವೈರುಧ್ಯ. ಭೂಸ್ವಾಧೀನ ಸುಗ್ರೀವಾಜ್ಞೆ ವಿರುದ್ಧ ದೇಶವ್ಯಾಪೀ ಪ್ರತಿಭಟನಾ ಚಳುವಳಿ ನಡೆಯಿತು. ಸಂಸತ್ತಿನಲ್ಲಿ ಪ್ರತಿಪಕ್ಷಗಳೂ ಅದನ್ನು ವಿರೋಧಿಸಿದವು. ಇದರ ಫಲವಾಗಿ ಮೋದಿ ಸರಕಾರ ತನ್ನ ನಿಲುವನ್ನು ಹಿಂತೆಗೆದುಕೊಳ್ಳಬೇಕಾಗಿ ಬಂತು. ಸುಗ್ರೀವಾಜ್ಞೆ ಲೋಪಗೊಳ್ಳಲು ಬಿಡಬೇಕಾಯಿತು. ಇದು ಈ ಸರಕಾರ ಅಧಿಕಾರ ವಹಿಸಿಕೊಂಡ ಮೇಲೆ ಉಂಡ ಮೊದಲ ಸೋಲು.

ಉಲ್ಬಣಗೊಂಡ ಎರಡನೇ ವೈರುಧ್ಯ ಎಂದರೆ ಸರಕಾರ ಮತ್ತು ಕಾರ್ಮಿಕ ವರ್ಗದ ನಡುವಿನ ವೈರುಧ್ಯ. ಸರಕಾರ ದೇಶದ ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸಲು ಹೊರಟಿದೆ. ರಾಜಸ್ತಾನ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದ ಬಿಜೆಪಿ ರಾಜ್ಯ ಸರಕಾರಗಳು ಆಗಲೇ ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿ ತಂದು ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಿವೆ, ಅತ್ತ ಮಾಲಿಕರ ಕೈಮೇಲಾಗುವಂತೆ ಮಾಡಿವೆ. ಕಾರ್ಮಿಕರ ಮತ್ತು ಕಾರ್ಮಿಕ ಸಂಘಗಳ ಹಕ್ಕುಗಳ ಮೇಲಿನ ಈ ದಾಳಿಗಳ ವಿರುದ್ಧ ಒಂದು ದೀರ್ಘ ಹೋರಾಟ ಆರಂಭವಾಗಿದೆ. ಕೇಂದ್ರ ಕಾರ್ಮಿಕ ಸಂಘಗಳ ಕರೆಯ ಮೇರೆಗೆ ಸಪ್ಟಂಬರ್ 2ರ ಸಾರ್ವತ್ರಿಕ ಮುಷ್ಕರದಲ್ಲಿ 15 ಕೋಟಿ ಕಾರ್ಮಿಕರು ಭಾಗವಹಿಸಿದರು. ಇದು ಇತ್ತೀಚಿನ ವರ್ಷಗಳಲ್ಲಿ ನವ–ಉದಾರವಾದಿ ಧೋರಣೆಗಳ ವಿರುದ್ಧ ಕಾರ್ಮಿಕ ವರ್ಗದ ಅತಿ ದೊಡ್ಡ ಕಾರ್ಯಾಚರಣೆಯಾಗಿದೆ.

2015ರ ಬಲಪಂಥೀಯ ದಾಳಿಯ ಮತ್ತೊಂದು ಅಂಶವೆಂದರೆ ಕೋಮುವಾದಿ ಶಕ್ತಿಗಳ ಆಕ್ರಮಣಕಾರೀ ಚಟುವಟಿಕೆಗಳು. ಆರೆಸ್ಸೆಸ್ ನೇತೃತ್ವದ ಪಡೆಗಳು ಗೋಮಾಂಸದ ಪ್ರಶ್ನೆಯನ್ನು ಕ್ಷೋಭೆಗಳನ್ನು

ಪುಟ 7 ಕ್ಕೆ

ಕಾಮ್ರೇಡ್ ಎ.ಬಿ.ಬರ್ಧನ್ ನಿಧನ



ಭಾರತದ ಕಮ್ಯುನಿಸ್ಟ್ ಆಂದೋಲನ ಮತ್ತು ಕಾರ್ಮಿಕ ವರ್ಗದ ಆಂದೋಲನದ ಹಿರಿಯ ಮುಖಂಡ ಕಾಮ್ರೇಡ್ ಎ.ಬಿ.ಬರ್ಧನ್ ಜನವರಿ 3ರಂದು ನಿಧನರಾಗಿದ್ದಾರೆ.

ಸಪ್ಟಂಬರ್ 25, 1925ರಲ್ಲಿ ಈಗ ಬಾಂಗ್ಲಾದೇಶದಲ್ಲಿರುವ ಸಿಲ್ಹಟ್‌ನಲ್ಲಿ ಜನಿಸಿದ ಇವರು 1940ರಲ್ಲಿ ನಾಗಪುರ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣಕ್ಕೆ ಸೇರಿಕೊಂಡಾಗ ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ(ಎಐಎಸ್‌ಎಫ್)ದ ಸದಸ್ಯರಾದರು. ಸಾಮ್ರಾಜ್ಯಶಾಹಿ–ವಿರೊಧಿ ವಿದ್ಯಾರ್ಥಿ ಅಂದೋಲನದಲ್ಲಿ ಭಾಗವಹಿಸುತ್ತಲೇ ಅವರು ಕಮ್ಯುನಿಸ್ಟ್ ಪಕ್ಷ ಸೇರಿದರು. ಒಬ್ಬ ಕಾರ್ಮಿಕ ಸಂಘಟನೆಯ ಕಾರ್ಯಕರ್ತನಾಗಿ ಪೂರ್ಣಕಾಲ ಕ್ರಾಂತಿಕಾರಿ ಚಟುವಟಿಕೆಗಳನ್ನು ಆರಂಭಿಸಿದ ಇವರು ಅಖಿಲ ಭಾರತ ಟ್ರೇಡ್ ಯೂನಿಯನ್ ಮುಖಂಡರಾಗಿ ಕಾರ್ಮಿಕ ವರ್ಗದ ಸಂಘಟನೆಯಲ್ಲಿ ಮಹತ್ವದ ಕೊಡುಗೆಗಳನ್ನು ನೀಡಿದರು. ಹೋರಾಟಗಳ ನಡುವೆಯೇ ಮುಂದೆ ಇವರು ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಮತ್ತು ಎಲ್.ಎಲ್.ಬಿ. ಪದವಿಯನ್ನೂ ಗಳಿಸಿದರು.

ಭಾರತ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಇವರು ಎಡ ಐಕ್ಯತೆಯನ್ನು ಕಟ್ಟುವಲ್ಲಿ ನೆರವಾದವರು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ಶ್ರದ್ಧಾಂಜಲಿ ಅರ್ಪಿಸಿದೆ. ಅವರು ಸಿಪಿಐ(ಎಂ) ನೊಂದಿಗೆ ಸಂಬಂಧಗಳನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಕಾಮ್ರೇಡ್ ಬರ್ಧನರವರದ್ದು ಒಬ್ಬ ಸಮರ್ಪಿತ ಕಮುನಿಸ್ಟನ ಬದುಕು ಮತ್ತು ಕ್ರಿಯೆ. ಅವರ ನಿಧನದಿಂದ ಸಿಪಿಐ ಮತ್ತು ಎಡ ಆಂದೋಲನ ಒಬ್ಬ ಅಮೂಲ್ಯ ಮುಖಂಡನನ್ನು ಕಳೆದುಕೊಂಡಿದೆ ಎಂದು ತನ್ನ ಗೌರವಪೂರ್ಣ ಶ್ರದ್ಧಾಂಜಲಿ ಯನ್ನು ಅರ್ಪಿಸುತ್ತ ಹೇಳಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರ ಮಗಳು, ಮಗ ಮತ್ತು ಕುಟುಂಬದ ಇತರ ಸದಸ್ಯರಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.



ಗೌರವಾನ್ವಿತ ನೇತಾರ–ಸಿಐಟಿಯು ಶ್ರದ್ಧಾಂಜಲಿ


ಕಾಮ್ರೇಡ್ ಬರ್ಧನ್ ಎಐಟಿಯುಸಿಯ ಮುಂಚೂಣಿ ನಾಯಕರಾಗಿದ್ದರು ಎಂದು ಸಿಐಟಿಯು ಸ್ಮರಿಸಿಕೊಂಡಿದೆ. ರೈಲ್ವೇ, ಜವಳಿ ಮತ್ತು ರಕ್ಷಣೆ, ಮುಖ್ಯವಾಗಿ ವಿದ್ಯುಚ್ಛಕ್ತಿ ವಲಯದ ಉದ್ದಿಮೆ ಆಧಾರಿತ ಕಾರ್ಮಿಕ ಸಂಘಗಳೊಡನೆ ನಿಕಟ ಸಂಬಂಧ ಹೊಂದಿದ್ದರು. 1957ರಲ್ಲಿ ಮಹಾರಾಷ್ಟ್ರ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು.

ಎಐಟಿಯುಸಿ ಪ್ರಧಾನ ಕಾರ್ಯದರ್ಶಿಯಾಗಿ ಅವರು ಕಾರ್ಮಿಕ ವರ್ಗದ ಐಕ್ಯ ಚಳುವಳಿಯನ್ನು ಬೆಳೆಸುವಲ್ಲಿ ಅಪಾರ ಕೊಡುಗೆ ನೀಡಿದ್ದಾರೆ. 'ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ'(ಎನ್‌ಪಿಎಂಒ)ಯನ್ನು ನವ–ಉದಾರವಾದಿ ಧೋರಣೆಗಳ ವಿರುದ್ಧ ಸಾಮೂಹಿಕ ಸಂಘಟನೆಗಳು ಮತ್ತು ವರ್ಗ ಸಂಘಟನೆಗಳ ಒಂದು ವಿಶಾಲ ವೇದಿಕೆಯಾಗಿ ಬೆಳೆಸುವಲ್ಲಿ ಅವರು ಬಹಳ ಆಸಕ್ತಿ ತಳೆದಿದ್ದರು.

ಅವರೊಬ್ಬ ಬಹು ಗೌರವಾನ್ವಿತ ಮುಖಂಡರಾಗಿ ತಮ್ಮ ಬದುಕಿನ ಕೊನೆಯ ದಿನಗಳ ವರೆಗೂ ಸಕ್ರಿಯರಾಗಿ ಉಳಿದಿದ್ದರು ಎಂದು ಸಿಐಟಿಯು ಈ ಅಗಲಿದ ನೇತಾರನಿಗೆ ಶ್ರದ್ಧಾಂಜಲಿ ಅರ್ಪಿಸಿದೆ.

ಕಾಮ್ರೇಡ್ ಬರ್ಧನ್ ಅವರನ್ನು ತಮ್ಮ ಸರಳ, ತ್ಯಾಗಮಯ ಜೀವನ, ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು, ದಲಿತರು ಮತ್ತು ಅಲ್ಪಸಂಖ್ಯಾತರೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡು ಅವರ ವಿಶ್ವಾಸ ಮತ್ತು ಗೌರವವನ್ನು ಗಳಿಸಿದ್ದ ಕಮುನಿಸ್ಟ್ ಮುಖಂಡರ ಪೀಳಿಗೆಯವರಲ್ಲಿ ಒಬ್ಬರಾಗಿ ಕಾಣವುದಾಗಿ ಹೇಳಿರುವ **ಅಖಿಲ ಭಾರತ ಕೃಷಿಕೂಲಿಕಾರರ ಸಂಘ** ಈ ಪೀಳಿಗೆಯವರ ಶ್ರೀಮಂತ ಪರಂಪರೆಯನ್ನು ಈಗಿನ ಯುವ ಪೀಳಿಗೆಯವರು ತಮ್ಮ ಬದುಕು ಮತ್ತು ಹೋರಾಟಗಳಲ್ಲಿ ಅನುಕರಿಸುವುದೇ ಅವರಿಗೆ ನೀಡುವ ನೈಜ ಶ್ರದ್ಧಾಂಜಲಿ ಎಂದಿದೆ. ■

ªÀiÁvÉAzÀgÉ EzÀÄ



ಯಹೂದಿಗಳಿಗೆ ನಾಜಿಗಳು
ಏನು ಮಾಡಿದರೋ, ಅದನ್ನೇ
ಜಿಯೋನಿಸ್ಟ್ ಯಹೂದಿಗಳು
ಪ್ಯಾಲೆಸ್ಟೀನ್ ಅರಬರಿಗೆ ಮಾಡುವುದು
ನನಗೆ ಅತ್ಯಂತ ವಿಷಾದದ ಸಂಗತಿ

– ಅಲ್ಬರ್ಟ್ ಐನ್‌ಸ್ಟೀನ್

ಹಾಲು ದರ ಏರಿಕೆ ಹಿಂತೆಗೆದುಕೊಳ್ಳಿ !

ಸಂಪಾದಕೀಯ

ರಾಜ್ಯ ಸರಕಾರ ಮತ್ತು ಕರ್ನಾಟಕ ಹಾಲು ಒಕ್ಕೂಟಗಳು ಹಾಲಿನ ದರವನ್ನು ಜನವರಿ 5ರಿಂದ ಲೀಟರಿಗೆ ರೂ. 4 ಮತ್ತು ಮೊಸರಿನ ದರವನ್ನು ರೂ. 2 ರಂತೆ ಏರಿಸಿದೆ. ಎಲ್ಲಾ ಸರಕು ಸೇವೆಗಳ ಬೆಲೆ ಏರಿದೆ. ಆದ್ದರಿಂದ ಹಾಲಿನ ಉತ್ಪಾದನಾ ವೆಚ್ಚ ಏರಿದೆ. ನೀರಿನ ಬೆಲೆ ಒಂದು ಬಾಟಲಿಗೆ ರೂ.14ರಿಂದ 25 ಇದೆ. ಹಾಗಿರುವಾಗ ಹಾಲಿನ ಬೆಲೆ ಏರಿಕೆಗೆ ಗೋಣಗುವುದು ಸರಿಯಲ್ಲ. ಇತರ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ಹಾಲಿನ ಬೆಲೆ ಕಡಿಮೆ ಇದೆ. ಹಾಲು ಒಕ್ಕೂಟಗಳು ನಷ್ಟದಲ್ಲಿವೆ. ಬೆಲೆ ಏರಿಕೆಯಲ್ಲಿ ದೊಡ್ಡ ಪಾಲು ಹಾಲು ಉತ್ಪಾದಕ ರೈತರಿಗೆ ಹೋಗುತ್ತದೆ, ಎಂದೆಲ್ಲಾ ಸರಕಾರ ಮತ್ತು ಒಕ್ಕೂಟದ ವಕ್ತಾರರು ವಿವಿಧ 'ರೀತಿಯಲ್ಲಿ ದರೆ ಏರಿಕೆಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಹಾಲಿನ ದರಏರಿಕೆಗೆ ಟೀಕೆ ಬಂದಾಗಲೆಲ್ಲ ರೈತರನ್ನು ಗುರಾಣಿಯಾಗಿ ಬಳಸಲಾಗುತ್ತದೆ. ಬಳಕೆದಾರರನ್ನು ಮರೆತು ಬಿಡಲಾಗುತ್ತದೆ. ಹಾಲು ಬೆಲೆ ಏರಿದರೆ ಹೆಚ್ಚು ಕಡಿಮೆ ಎಲ್ಲರೂ ಸೇವಿಸುವ ಚಾ, ಕಾಫಿ, ಹಾಲಿನ ಉತ್ಪನ್ನಗಳ ಬೆಲೆ ಏರುತ್ತದೆ. ಹಾಲು ಮತ್ತು ಅದರ ಉತ್ಪನ್ನಗಳು ಮಕ್ಕಳ, ಶ್ರೀಸಾಮಾನ್ಯನ ಪೌಷ್ಟಿಕ ಆಹಾರದ ಒಂದು ಪ್ರಮುಖ ಅಂಗ. ಅದರ ಬೆಲೆ ಏರಿಕೆ ವ್ಯಾಪಕ ಪರಿಣಾಮ ಬೀರುತ್ತದೆ.

ಆದರೆ ಹಾಲು ಬೆಲೆ ಏರಿಕೆ ನಿಜವಾಗಿಯೂ ರೈತರ ಪರವಾದ ಕ್ರಮವೇ? ಹಲವರು ಆಪಾದಿಸಿರುವಂತೆ ಇದು ಪಂಚಾಯತ್ ಚುನಾವಣೆಗಳಲ್ಲಿ ರೈತರನ್ನು 'ಸಂಪ್ರೀತಗೊಳಿಸಲು' ಎಂಬುದು ನಿಜವೇ? ಇದು ಖಂಡಿತ ರೈತ-ಪರ ಕ್ರಮ ಅಲ್ಲ ಎನ್ನುತ್ತದೆ ಕರ್ನಾಟಕ ಪ್ರಾಂತ ರೈತ ಸಂಘದ(ಕೆ.ಪಿ.ಆರ್.ಎಸ್.)ಪತ್ರಿಕಾ ಹೇಳಿಕೆ. ಕಳೆದ ಜುಲೈಯಲ್ಲಷ್ಟೇ ಸರಕಾರ ಹಾಲು ಗುಣಮಟ್ಟ ನಿಯಂತ್ರಿಸುವ ಹೆಸರಲ್ಲಿ ಬೆಲೆ ಕಡಿಮೆ ಮಾಡುವ, ಪ್ರತಿ ಲೀಟರಿಗೆ 4 ರೂ. ಪ್ರೋತ್ಸಾಹ ಕಡಿತ ಮಾಡುವ ಸುತ್ತೋಲೆ ಹೊರಡಿಸಿದೆ. ಆಹಾರ ಮತ್ತು ಗುಣಮಟ್ಟ ನಿಯಂತ್ರಣ ಕಾಯಿದೆಯನ್ನು ಹಾಲಿಗೆ ಅಳವಡಿಸುವ ಭಾಗವಾಗಿ, ಕೊಬ್ಬು ಮತ್ತು ಎಸ್.ಎನ್.ಎಫ್. ಪ್ರಮಾಣವನ್ನು ನಿರ್ಧರಿಸಿದೆ. ಈ ಪ್ರಮಾಣ ಮುಟ್ಟದಿದ್ದರೆ ಕಡಿಮೆ ಬೆಲೆ ಕೊಡುವ, ಪ್ರೋತ್ಸಾಹಧನ ಕಡಿತ ಮಾಡುವ ಕ್ರಮದ ಬಗ್ಗೆ ಸುತ್ತೋಲೆ ಹೇಳುತ್ತದೆ. ಹಾಲಿನ ಗುಣಮಟ್ಟ ನಿರ್ಧರಿಸುವ ಎಲ್ಲಾ ಅಂಶಗಳು ರೈತರ ನಿಯಂತ್ರಣದಲ್ಲಿ ಇಲ್ಲ. ಹಾಲಿನ ಗುಣಮಟ್ಟದ ಬಗ್ಗೆ ರೈತರಿಗೆ ಅರಿವು ಇಲ್ಲ. ಆದ್ದರಿಂದ ಇದನ್ನು ಜಾರಿ ಮಾಡಲು ಕಾಲಾವಕಾಶ ಕೊಡಬೇಕು ಎಂದು ರಾಜ್ಯವ್ಯಾಪಿಯಾಗಿ ಹಾಲು ಉತ್ಪಾದಕ ರೈತರು ಪ್ರತಿಭಟಿಸಿದರೂ ಲೆಕ್ಕಿಸಿಲ್ಲ. ಈಗಾಗಲೇ ನಷ್ಟದಲ್ಲಿರುವ ರೈತರನ್ನು ಮತ್ತಷ್ಟು ಸಂಕಷ್ಟಕ್ಕೀಡು ಮಾಡಿದೆ.

ಪ್ರತಿ ಲೀಟರಿಗೆ ಮುಂಚೆ ಸಿಗುತ್ತಿದ್ದ ಬೆಲೆಗಳಲ್ಲಿ ರೂ 5-6 ಕಡಿತ ಮಾಡುವ ಕ್ರಮ ಕೈಗೊಂಡು, ರೂ. 4 ಬೆಲೆ ಏರಿಸಿ ರೂ. 2 ಉತ್ಪಾದಕರಿಗೆ ಕೊಡಲಾಗುವುದು ಎಂದು ಹೇಳುವುದು ಹಾಸ್ಯಾಸ್ಪದ. ಇದು ಪಂಚಾಯತ್ ಚುನಾವಣೆಯ ಸಂದರ್ಭದಲ್ಲಿ ಗ್ರಾಹಕರು ಮತ್ತು ರೈತರಿಬ್ಬರನ್ನೂ ಮರುಳು ಮಾಡುವ ತಂತ್ರ. ಎಂದು ಕೆ.ಪಿ.ಆರ್.ಎಸ್. ಹೇಳಿದೆ. ಹಾಲು ಒಕ್ಕೂಟಗಳ ನಿರ್ವಹಣಾ ವೆಚ್ಚ ಭರಿಸಲು ಮಾತ್ರ ಈ ಹೆಚ್ಚಳ ಮಾಡಲಾಗುತ್ತಿದೆ. ಇದರಿಂದ ರೈತರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಹಾಲು ಉತ್ಪಾದಕರ ಉತ್ಪಾದನಾ ವೆಚ್ಚ ವೈಜ್ಞಾನಿಕವಾಗಿ ನಿರ್ಧರಿಸಲಿ ಎಂದು ರೈತ ಸಂಘದ ಕೋಡಿಹಳ್ಳಿ ಚಂದ್ರಶೇಖರ್ ಹೇಳಿದ್ದಾರೆ.

ರೈತರ ಹಾಲು ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿದೆ. ಅವರಿಗೆ ನಷ್ಟವಾಗುತ್ತಿದೆ. ಅವರಿಗೆ ಹೆಚ್ಚಿನ ಬೆಲೆ ಕೊಟ್ಟರೆ ಹಾಲಿನ ಬೆಲೆ ಹೆಚ್ಚಿಸಬೇಕಾಗುತ್ತದೆ. ಇದರಿಂದ ಗ್ರಾಹಕರಿಗೆ ತೊಂದರೆ ಆಗುತ್ತದೆ. ಹಾಗಾದರೆ ಇದಕ್ಕೆ ಏನು ಪರಿಹಾರ? ರೈತರ ಮತ್ತು ಗ್ರಾಹಕರ ಬಗ್ಗೆ ಸರಕಾರಕ್ಕೆ ನಿಜವಾದ ಕಾಳಜಿ ಇದ್ದರೆ, ಹಾಲಿನ ಗುಣಮಟ್ಟ ಕಾಪಾಡದಿದ್ದರೆ, ಬೆಲೆ/ಪ್ರೋತ್ಸಾಹಧನಕಡಿತ ಮಾಡುವ ಬಗ್ಗೆ ಹೊರಡಿಸಿರುವ ಸುತ್ತೋಲೆ ಹಿಂತೆಗೆದುಕೊಳ್ಳಲಿ. ಪ್ರೋತ್ಸಾಹಧನವನ್ನು ರೂ. 15ಕ್ಕೆ ಹೆಚ್ಚಿಸಲಿ. ಆಗ ರೈತರಿಗೆ ನಷ್ಟವಾಗುವುದಿಲ್ಲ. ಗ್ರಾಹಕರಿಗೂ ತೊಂದರೆಯಾಗುವುದಿಲ್ಲ. ಇದನ್ನು ಮಾಡಿದರೆ ಹಾಲಿನ ಮಾರುಕಟ್ಟೆ ಸಹ ವಿಸ್ತಾರ ಆಗಿ, ರೈತರೂ ಮತ್ತು ಹಾಲಿನ ಸಹಕಾರಿ ಸಂಘಗಳೂ ಉಳಿಯಬಹುದು ಎಂದುಕೆ.ಪಿ.ಆರ್.ಎಸ್ ಸಲಹೆ ಮಾಡಿದೆ.

ಒಂದು ಲೀಟರ್ ಹಾಲಿನ ಉತ್ಪಾದನಾ ವೆಚ್ಚ ಸುಮಾರು ರೂ. 31 ರಿಂದ 35 ಇದೆ. ವೆಚ್ಚದ ಅರ್ಧ ಲಾಭಾಂಶ ಇರಬೇಕೆಂಬ ಡಾ. ಸ್ವಾಮಿನಾಥನ್ ಕಮಿಶನ್ ಶಿಫಾರಸಿನ ಪ್ರಕಾರ ಲೀಟರ್ ಹಾಲಿನ ಬೆಲೆ ರೂ. 45 ರಿಂದ 48 ಆಗುತ್ತದೆ. ಆದರೆ ರೈತ ಸಂಘ ಹಾಲಿನ ಬೆಲೆ ಏರಿಕೆಯ ಬೇಡಿಕೆ ಇಡುತ್ತಿಲ್ಲ. ಬದಲಾಗಿ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ನಿರ್ಧರಿಸಿ ಅದರ ಅರ್ಧದಷ್ಟು ಪ್ರೋತ್ಸಾಹಧನ ನೀಡಬೇಕೆಂದು ಕೇಳುತ್ತಿದೆ. ಇದರಿಂದ ಬಡವರು, ದಲಿತರು ಮಾತ್ರವಲ್ಲ ಹಾಲು ಉತ್ಪಾದಕ ರೈತರು ಸಹ ಹಾಲು ಬಳಸುವಂತಾಗುವುದು ಎಂದು ಕೆ.ಪಿ.ಆರ್.ಎಸ್ ಸಲಹೆ ಮಾಡಿದೆ.

ಆದರೆ ಸರಕಾರ ಈ ಕ್ರಮ ಕೈಗೊಳ್ಳುವುದೇ? ಅಂತಹ ಲಕ್ಷಣಗಳು ಕಾಣುತ್ತಿಲ್ಲ. ಸರಕಾರ ಬೆಲೆ ಏರಿಕೆಗೆ ಸಹಕಾರಿ ಮತ್ತು ಸಣ್ಣ ಹಾಲು ಉತ್ಪಾದಕರನ್ನು ದುರ್ಬಲಗೊಳಿಸುವ ಉದ್ದೇಶ ಇದ್ದ ಹಾಗೆ ಕಾಣುತ್ತದೆ. ಹೈನುಗಾರಿಕೆ ಕ್ಷೇತ್ರದಲ್ಲಿ ಮೇಘಾದಂತಹ ಖಾಸಗಿ ಡೈರಿಗಳಿಗೆ ಮಾರುಕಟ್ಟೆ ಒದಗಿಸುವ ಮತ್ತು ಅವರ ಲಾಭ ಹೆಚ್ಚಿಸುವ ಉದ್ದೇಶ ಕಾಣುತ್ತದೆ. ಹಾಲಿನ ಗುಣಮಟ್ಟದ ಸುತ್ತೋಲೆ, ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಸಂಬಂಧಿಸಿದ ಕಾನೂನಿಗೆ ತರುತ್ತಿರುವ ತಿದ್ದುಪಡಿಗಳು ಇಂತಹ ಸೂಚನೆ ನೀಡುತ್ತಿವೆ. ಒಂದು ಹಾಲಿನ ಸೊಸೈಟಿ ಇರುವ ವ್ಯಾಪ್ತಿಯಲ್ಲಿ ಮತ್ತೊಂದು ಸಂಸ್ಥೆಗೆ ಕೆಲಸ ಮಾಡಲು ಇದುವರೆಗೆ ಅವಕಾಶ ಇರಲಿಲ್ಲ. ಈಗ ಖಾಸಗಿ ಕಂಪನಿಗಳಿಗೆ ಅಂತಹ ಅವಕಾಶ ಮಾಡಿಕೊಡಲಾಗುತ್ತಿದೆ. ಖಾಸಗಿ ಡೈರಿಗಳ ಮತ್ತು ಕಂಪನಿಗಳ ಲಾಬಿ ಸಹಕಾರ ಆಧಾರಿತ ಡೈರಿ ವ್ಯವಸ್ಥೆಯನ್ನೇ ಅಲುಗಾಡಿಸಲು ಹೊರಟಿದೆ. ಇದು ಹಲವು ಕಾರಣಗಳಿಗೆ ಸರಕಾರದ ಅತ್ಯಂತ ಅಪಾಯಕಾರಿ ನಡೆ.

ಕೃಷಿ ರಂಗದಲ್ಲಿ ಹಲವು ಬೆಳೆಗಳು ಬಿಕ್ಕಟ್ಟಿಗೆ ಸಿಕ್ಕಿದ್ದು ಈ ವರೆಗೆ ಸಹಕಾರಿ ರಂಗದ ಹೈನುಗಾರಿಕೆ ಉದ್ಯಮ ಹಲವು ನ್ಯೂನ್ಯತೆಗಳ ನಡುವೆಯೂ ಸಾಕಷ್ಟು ಉತ್ತಮವಾಗಿ ಕೆಲಸ ಮಾಡುತ್ತಾ ಲಕ್ಷಾಂತರ ಗ್ರಾಮೀಣ ಕುಟುಂಬಗಳಿಗೆ ಜೀವನಾಧಾರವಾಗಿತ್ತು. ರಾಜ್ಯದಲ್ಲಿ ಒಟ್ಟು 14 ಜಿಲ್ಲಾ (ಕೆಲವು ನೆರೆಯ ಜಿಲ್ಲೆಗಳನ್ನು ಒಳಗೊಂಡು)ಹಾಲಿನ ಒಕ್ಕೂಟಗಳು ಇವೆ. ಸುಮಾರು 13 ಸಾವಿರ ಗ್ರಾಮ ಮಟ್ಟದ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರಿ ಸಂಘಗಳಿವೆ. ಇವುಗಳಡಿ ಸುಮಾರು 23 ಲಕ್ಷ ರೈತರು ಹೈನುಗಾರಿಕೆಯಲ್ಲಿ ತೊಡಗಿದ್ದು ಸುಮಾರು 70 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ದೇಶದಲ್ಲಿ ಜನಜೀವನದ ಒಂದು ಪ್ರಮುಖ ಅಗತ್ಯವಾದ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ದೊಡ್ಡ ಹೆಚ್ಚುತ್ತಿರುವ ಮಾರುಕಟ್ಟೆ ಇದೆ. ಅದರ ಮೇಲೆ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಕಾರ್ಪೊರೇಟ್‌ಗಳ ಕಣ್ಣು ಬಿದ್ದಿದೆ. ಆದ್ದರಿಂದ ಈ ಕ್ಷೇತ್ರದಲ್ಲಿ ಸಹಕಾರಿ ರಂಗವನ್ನು ದುರ್ಬಲಗೊಳಿಸಿ ಸಣ್ಣ ಉತ್ಪಾದಕರನ್ನು ಓಡಿಸಿ ಆ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳುವ ಹುನ್ನಾರ ಸಹ ಈ ಬೆಲೆ ಏರಿಕೆಯ ಹಿಂದೆ ಇದೆ. ಇದನ್ನು ಆಗಗೊಟ್ಟರೆ ಗ್ರಾಮೀಣ ಸಂಕಟವನ್ನು ಇದು ಇನ್ನಷ್ಟು ಹೆಚ್ಚಿಸುವ ತೀವ್ರ ಅಪಾಯಇದೆ. ಇದನ್ನು ವಿರೋಧಿಸಬೇಕಾಗಿದೆ.

ಆದ್ದರಿಂದ ಹಾಲಿನ ಬೆಲೆ ಏರಿಕೆ ಹಿಂತೆಗೆದುಕೊಳ್ಳಲು ಮತ್ತು ಡಾ. ಸ್ವಾಮಿನಾಥನ್ ಕಮಿಶನಿನ ಶಿಫಾರಸುಗಳನ್ನು ಹಾಲು ಉತ್ಪಾದಕರಿಗೆ ಅನ್ವಯಿಸಬೇಕೆಂಬ ಒತ್ತಾಯವನ್ನು ಬೆಂಬಲಿಸಿ ಸರಕಾರದ ಮೇಲೆ ಒತ್ತಡ ತರಬೇಕಾಗಿದೆ. •

ನಾಳಿನ ಕಾರ್ಯಕ್ರಮಗಳು

ಕಾ.ಪ್ರಸನ್ನಕುಮಾರ್

ಶ್ರದ್ಧಾಂಜಲಿ ಸಭೆ (ಜನವರಿ 22)

ಸೆಕ್ರೆಟಾರಿಯಟ್ ಕ್ಲಬ್, ಬೆಂಗಳೂರು

ಪ್ಯಾಲೆಸ್ಟೈನ್ ಫ್ರೀಡಂ ಜಾಥಾ

(ಫ್ರೀಡಂ ಥಿಯೇಟರ್-ಜನಮ್)

ಬೆಂಗಳೂರು

ನಾಟಕ, ಗೊಂಬೆಯಾಟ, ಜಾನಪದ ನೃತ್ಯ

ಜನವರಿ 13:

ಸಂಜೆ 5 ಚಿತ್ರಕಲಾ ಪರಿಷತ್

ಜನವರಿ 15:

11ಕ್ಕೆ ರಂಗ ಶಂಕರ, 5 ಕ್ಕೆ ಅಲ್ಯುಮಿನಿ ಅಸೋಶಿಯೇಶನ್, ಪೀಣ್ಯ ಕೈಗಾರಿಕಾ ಪ್ರದೇಶ

ಜನವರಿ 16:

11ಕ್ಕೆ ಜಾಥಾ ತಂಡದೊಂದಿಗೆ ಸಂವಾದ, ಬಾದಾಮಿ ಹೌಸ್

ಜನಶಕ್ತಿ
ಕನ್ನಡ ವಾರಪತ್ರಿಕೆ
janashakthi.co.in

ವೆಬ್ ಸೈಟಿನಲ್ಲಿ ಏನಿದೆ?

ಜನಶಕ್ತಿ ವೆಬ್ ಸೈಟು ಆರಂಭವಾಗಿದೆ. ಅದರಲ್ಲಿ ಏನಿದೆ? ವೆಬ್ ಸೈಟ್ ವಾರಕ್ಕೊಮ್ಮೆ ಬರುವ ಜನಶಕ್ತಿಯ ಪ್ರಿಂಟ್ ಆವೃತ್ತಿಯ ಬರಹಗಳು ನೆಟ್‌ನಲ್ಲಿ ಸಿಗುವಂತೆ ಮಾಡುತ್ತದೆ. ವೆಬ್ ಸೈಟ್ ಎರಡು ಪ್ರಿಂಟ್ ಆವೃತ್ತಿಗಳ ನಡುವೆ ಪ್ರಮುಖ ವಿದ್ಯಮಾನಗಳಿಗೂ ಸ್ಪಂದಿಸುತ್ತದೆ. ಪ್ರಮುಖ ಸುದ್ದಿ ಮಾಹಿತಿಗಳನ್ನು ಕೊಡುತ್ತದೆ. ಹಾಗೆನೇ ನಮಗೆ ಬರುವ ಸುದ್ದಿ, ಮಾಹಿತಿ, ಲೇಖನ ಎಲ್ಲವನ್ನೂ ನಮ್ಮ 16 ಪುಟಗಳ ಮಿತಿಯಲ್ಲಿ ಕೊಡಲು ಸಾಧ್ಯವಾಗುತ್ತಿಲ್ಲ. ಕೆಲವನ್ನು ವೆಬ್ ಸೈಟಿನಲ್ಲಿ ಮಾತ್ರ ಹಾಕುತ್ತೇವೆ. ಕೆಲವನ್ನು ಚುಟುಕಾಗಿ ಪ್ರಿಂಟ್ ಆವೃತ್ತಿಯಲ್ಲಿ ಹಾಕಿ ಪೂರ್ಣ ಬರಹವನ್ನು ವೆಬ್ ಸೈಟಿನಲ್ಲಿ ಹಾಕುತ್ತೇವೆ. ಇವುಗಳಲ್ಲಿ ಹಲವು ಜನಶಕ್ತಿ ಫೇಸ್ ಬುಕ್ ಪುಟದಲ್ಲೂ ಪ್ರಕಟವಾಗುತ್ತವೆ.

ಈ ವಾರ ವೆಬ್ ಸೈಟಿನಲ್ಲಿ ಮಾತ್ರ ಹಾಕಿರುವ ಬರಹಗಳು:

* ವಿವಿಧ ಕಡೆ ನಡೆದ ಕಾ. ಪ್ರಸನ್ನ ಶ್ರದ್ಧಾಂಜಲಿ ಸಭೆಗಳು;
* ಯುದ್ಧಗಳಿಲ್ಲದ ನೆಮ್ಮದಿಯ ದಿನಗಳು ನಮ್ಮದಾಗಲು ಕೆಲಸ ಮಾಡೋಣ (ಕಾರವಾರದ ಯುದ್ಧನೌಕೆ ಬಳಿ ನಡೆದ ಕಾವ್ಯ ಸ್ಪಂದನ;
* ಪ್ರಜಾಪ್ರಭುತ್ವದ ನೆರಳಿನಲ್ಲಿ "ಸಹಿಷ್ಣುತೆ-ಅಸಹಿಷ್ಣುತೆ" – ಹಾಸನದಲ್ಲಿ ಚರ್ಚಾ ವೇದಿಕೆ;

60 ವರ್ಷಗಳ ಹಿಂದೆ

"ಈ ದಿನ ಬೆಂಗಳೂರಿನಲ್ಲಿರುವ ಕಾಂಗ್ರೆಸ್ ಭವನದ ಮುಂದೆ ನೂರಾರು ಬಿಳಿ ಟೋಪಿಧಾರಿಗಳು ಕಾಣಿಸಿಕೊಳ್ಳುತ್ತಿದ್ದಾರೆ. ರಾಜ್ಯದ ಮೂಲೆಮೂಲೆಗಳಿಂದ ಚುನಾವಣಾ ಅಭ್ಯರ್ಥಿಗಳೂ, ಅವರ ನಂಟರೂ, ಭಂಟರೂ, ಅನುಯಾಯಿಗಳೂ, ಶಿಫಾರಸುದಾರರು ಬಂದಿರುವುದರಿಂದ ಬೆಂಗಳೂರಿನ ಒಂದು ಹೋಟೇಲಿನಲ್ಲೂ ಜಾಗವಿಲ್ಲದಾಗಿದೆ." ಇದು1957ರ ಜನವರಿ ಮೊದಲ ವಾರದ ಸಂಚಿಕೆಯಲ್ಲಿ ಗಮನ ಸೆಳೆಯುವ ವರದಿಯ ಭಾಗ. ವರದಿಯತಲೆಬರಹ 'ಕಾಂಗ್ರೆಸ್ ಪುಢಾರಿಗಳಲ್ಲಿ ಟಿಕೆಟ್ಟಿಗಾಗಿಕ್ಕಾಟ', 'ಹಿಂದಿನ ಕಾಂಗ್ರೆಸ್ ವಿರೋಧಿ ಇಂದಿನ ಬಾಪೂಭಕ್ತ'. 1957 ಫೆಬ್ರುವರಿ 25ರಂದು ಮಹಾಚುನಾವಣೆಗಳ ಘೋಷಣೆಯ ಹಿನ್ನೆಲೆಯಲ್ಲಿಹೈಕಮಾಂಡಿನ ತ್ರಿಮೂರ್ತಿಗಳ ಮುಂದೆ ಸೀಟಿಗಾಗಿ ಅಹವಾಲು ಸಲ್ಲಿಸಲು ಆಕಾಂಕ್ಷಿಗಳ ನೂಕುನುಗ್ಗಲಿನ ಬಗ್ಗೆ ಇದೆ ಈ ವರದಿ. ಹೈಕಮಾಂಡ್‌ಕಲ್ಚರ್ ಮತ್ತು ಗುಂಪುಗಾರಿಕೆ ಕಾಂಗ್ರೆಸಿನಲ್ಲಿ 1950ರ ದಶಕದಿಂದಲೇ ಇದೆ ಎಂದು ಗೊತ್ತಿಲ್ಲದವರಿಗೆ ಅದನ್ನು ಸ್ಪಷ್ಟ ಪಡಿಸುವ ವರದಿ. ಮುಖ್ಯಮಂತ್ರಿ ನಿಜಲಿಂಗಪ್ಪ, ಮಾಜಿ ಮುಖ್ಯಮಂತ್ರಿಕೆಂಗಲ್ ಹನುಮಂತಯ್ಯ, ಕೆ ಸಿ ರೆಡ್ಡಿಯವರ ಗುಂಪುಗಳ ನಡುವೆತಿಕ್ಕಾಟದ ವಿವರಗಳೂ ಇವೆ. ಇಡೀ ವರದಿ ಜನಶಕ್ತಿ ವೆಬ್ ಸೈಟಿನಲ್ಲಿದೆ. ಓದಿ.

ಇದೇ ಸಂಚಿಕೆಯಲ್ಲಿ ಜನಶಕ್ತಿ ಪ್ರಕಾಶನ ಪ್ರಕಟಿಸಿದ 'ನಾನು ಕಂಡ ರಶ್ಯಾ'ದ ಮತ್ತು ಹೆಗ್ಗೋಡು ನಾಟ್ಯಸಂಘ ಪ್ರಕಟಿಸಿದ ಅ.ನ.ಸುಬ್ಬರಾಯರ 'ವರ್ಗ ಕಲಹವನ್ನುಚಿತ್ರಿಸುವ ಪ್ರಚಂಡ ಕ್ರಾಂತಿಕಾರಿ ನಾಟಕ' 'ಕೂಲಿ' ಪುಸ್ತಕಗಳ ಆಸಕ್ತಿಕಾರಕ ಜಾಹೀರಾತು ಸಹ ಇದೆ.

ಟ್ಯಾಂಕರ್ ಚಾಲಕರ ಹೋರಾಟಕ್ಕೆ ಜತೆಗೂಡಿದ ಡಿವೈಎಫ್ಐ:

ವಾಸುದೇವ ಉಚ್ಚಿಲ್



ಮಂಗಳೂರಿನ ಎಚ್‌ಪಿಸಿಎಲ್ ತೈಲ ಸಂಕೀರ್ಣದಿಂದ ತೈಲ ಸಾಗಣೆ ಮಾಡುವ ನೂರಾರು ಟ್ಯಾಂಕರುಗಳಲ್ಲಿ ಒಂದರ ಚಾಲಕ ನಿರ್ವಾಹಕರ ಆಂಧ್ರಪ್ರದೇಶದಲ್ಲಿ ಹಲ್ಲೆ ನಡೆದ ಪ್ರಕರಣದಲ್ಲಿ ಚಾಲಕ ಶರವಣನ್ ಮೃತರಾಗಿದ್ದಾರೆ. ಇನ್ನೊಬ್ಬಾತ ಗಂಭೀರ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ. ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಕರ್ನಾಟಕದಲ್ಲಿ ತೈಲ ಸಾಗಣೆ ಚಾಲಕರು ಮೃತ ಚಾಲಕನ ಕುಟುಂಬಕ್ಕೆ ರೂ.10ಲಕ್ಷ ಪರಿಹಾರ ನೀಡಬೇಕೆಂದೂ, ಗಾಯಾಳುವಿನ ಶುಶ್ರೂಷ ವೆಚ್ಚ ನೀಡಬೇಕೆಂದೂ ಆಗ್ರಹಿಸಿ ತೈಲ ಸಾಗಾಟ ವಾಹನ ಮಾಲಕರ ಸಂಘ ಹಾಗೂ ಎಚ್‌ಪಿಸಿಎಲ್ ಉದ್ಯಮದ ವಿರುದ್ಧ ಸಾಗಣೆ ನಿಲ್ಲಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಮಂಗಳೂರಿನ ಎಚ್‌ಪಿಸಿಎಲ್ ಘಟಕದ ಮುಂದೆ ನಡೆದ ಹೋರಾಟಕ್ಕೆ ಸಿಐಟಿಯು ನೇತೃತ್ವ ನೀಡಿದ್ದು, ದ.ಕ.ಡಿವೈಎಫ್ಐ ಘಟಕ ಸಕ್ರಿಯವಾಗಿ ಹೋರಾಟಕ್ಕೆ ಬೆಂಬಲಿಸಿದೆ. 4 ದಿನ ಬಳಿಕ ವಾಹನ ಮಾಲಕರು ಸಂಘದ ಪದಾಧಿಕಾರಿಗಳು ಸ್ಥಳಕ್ಕೆ ಆಗಮಿಸಿದ್ದರೂ ಪೋಲೀಸು ರಕ್ಷಣೆಯಲ್ಲಿ ಬದಲೀ ಚಾಲಕರನ್ನು ಬಳಸಿ ಸಾಗಣೆಗೆ ಎಚ್‌ಪಿಸಿಎಲ್ ಹಾಗೂ ವಾಹನ ಮಾಲಕರು ಪ್ರಯತ್ನಿಸಿದ್ದಾರೆ. ಇದಕ್ಕೆ ತಡೆಯೊಡ್ಡಲು ಪ್ರಯತ್ನಿಸಿದ 40 ಮಂದಿ ಚಾಲಕರು ಹಾಗೂ ಡಿವೈಎಫ್ಐ ಕಾರ್ಯಕರ್ತರನ್ನು ಸುರತ್ಕಲ್ ಠಾಣೆ ಪೋಲೀಸರು ಬಂಧಿಸಿದ್ದಾರೆ. ಅಲ್ಲದೆ ಲಾಠೀಚಾರ್ಜ್ ಮಾಡಿ ಪ್ರತಿಭಟನಾಕಾರರನ್ನು ಚದುರಿಸಲಾಗಿದೆ. ಪ್ರತಿಭಟನಾಕಾರರ ಶಾಮೀಯಾನ ಕಿತ್ತುಹಾಕಲಾಗಿದೆ.

ಪೊಲೀಸರ ಈ ದೌರ್ಜನ್ಯವನ್ನು ಖಂಡಿಸಿ ಡಿವೈಎಫ್ಐ ಕಾರ್ಯಕರ್ತರು ಜನವರಿ 3 ರಂದು ಸುರತ್ಕಲ್ ಠಾಣೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಮಂಗಳೂರು ಉತ್ತರ ಸಮಿತಿ ಅದ–ಧ್ಯಕ್ಷ ಬಿ.ಕೆ.ಇಮ್ತಿಯಾಜ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುತ್ತಾ ಪ್ರತಿಭಟನಾಕಾರರ ಮೇಲೆ ದೌರ್ಜನ್ಯವೆಸಗಿದ ಪೋಲೀಸ್ ಅಧಿಕಾರಿಗಳ ಮೇಲೆ ನ್ಯಾಯಾಂಗ ತನಿಖೆ ನಡೆಸಿ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದರು.

6 ದಿನಗಳವರೆಗೂ ಬಿರುಸಾಗಿ ಸಾಗಿದ ಪ್ರತಿಭಟನೆಯಲ್ಲಿ ವಿವಿಧ ಹಂತಗಳಲ್ಲಿ ಡಿವೈಎಫ್ಐ ದ.ಕ.ಜಿಲ್ಲಾ ಮುಖಂಡರಾದ ಸಂತೋಷ್ ಬಜಾಲ್, ದಯಾನಂದ ಶೆಟ್ಟಿ, ನವೀನ್ ಕೊಂಚಾಡಿ, ಯೋಗೀಶ್ ಜಪ್ಪಿನಮೊಗರು, ಸಂತೋಷ್ ಶಕ್ತಿನಗರ, ಜೀವನ್‌ರಾಜ್ ಕುತ್ತಾರ್, ಸಾದಿಕ್ ಕಣ್ಣೂರು, ಶ್ರೀನಾಥ್ ಕಾಟಿಪಳ್ಳ ಭಾಗವಹಿಸಿದ್ದರು.

ಶ್ರೀಮತಿ ಧರ್ಣಮ್ಮರ ನಿಧನಕ್ಕೆ ಶ್ರದ್ಧಾಂಜಲಿ

ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿ ಸದಸ್ಯರೂ, ಹಿರಿಯ ರೈತ ಮುಖಂಡರೂ ಆಗಿರುವ ಸಂಗಾತಿ ಲಕ್ಷ್ಮಣಗೌಡರ ತಾಯಿ ಕಳೆಂಜ ಗ್ರಾಮದ ಕಾಯರ್ತಡ್ಕ ಪಾಂಗಳ ದಿವಂಗತ ಲಿಂಗಪ್ಪಗೌಡರ ಪತ್ನಿ ಶ್ರೀಮತಿ ಧರ್ಣಮ್ಮ ಅವರು ತನ್ನ 90ನೇ ವರ್ಷ ಪ್ರಾಯದಲ್ಲಿ ದಿನಾಂಕ 01–01–2016 ರಂದು ನಿಧನರಾದರು.

ಎಡ ಪಂಥೀಯ ನಾಯಕರ ಮೇಲೆ ಅಪಾರ ಗೌರವವಿದ್ದ ಇವರು ತಮ್ಮ ಮನೆಯ ಗೋಡೆಗಳ ತುಂಬಾ ಪಕ್ಷದ ದೇಶ ಮಟ್ಟದ ನಾಯಕರುಗಳ, ಕಾರ್ಲ್‌ಮಾರ್ಕ್ಸ್, ಲೆನಿನ್ ಮೊದಲಾದವರ ಫೋಟೋಗಳನ್ನೇ ನೇತು ಹಾಕಿಸಿದ್ದರು. ಇವರ ಮಕ್ಕಳಲ್ಲಿ ಹೆಚ್ಚಿನವರು ಎಡಪಂಥೀಯ ದಾರಿಯಲ್ಲೇ ಮುನ್ನಡೆಯಲು ಇವರ ಹಾರೈಕೆ ಸದಾ ಇತ್ತು ಎಂದು ಲಕ್ಷ್ಮಣಗೌಡರು ನೆನಪಿಸಿಕೊಳ್ಳುತ್ತಾರೆ.. ಆರು ಹೆಣ್ಣು ಮಕ್ಕಳೂ ಸೇರಿ ಒಟ್ಟು 10 ಜನ ಮಕ್ಕಳ ತಾಯಿಯಾದ ಇವರ ಎಲ್ಲಾ ಮಕ್ಕಳೂ ಪಕ್ಷದ ಹಿತೈಷಿಗಳಾಗಿಯೇ ಇದ್ದಾರೆ. ಸಿಪಿಐ(ಎಂ) ಪಕ್ಷದ ರಾಜ್ಯ, ರಾಷ್ಟ್ರ ಮಟ್ಟದ ನಾಯಕರುಗಳಿಗೂ ತನ್ನ ಮನೆಯಲ್ಲೇ ಅನ್ನ ಬಡಿಸಿದ ಹಿರಿಯ ಚೇತನ ಶ್ರೀಮತಿ ಧರ್ಣಮ್ಮ ಎಂದು ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿ ಶ್ರದ್ಧಾಂಜಲಿ ಅರ್ಪಿಸಿದೆ.

ಕುಂದಾಪುರ : ಶಾಸಕರ ನಿಧಿ ದುರ್ಬಳಕೆ ತನಿಖೆಗೆ ಸಿಪಿಐ(ಎಂ) ಆಗ್ರಹ



ನಾಡ–ಸೇನಾಪುರ ರಸ್ತೆ ಮರು ಡಾಂಬರೀಕರಣ ಕಾಮಗಾರಿಯು ಕಳಪೆಯಾಗಿದ್ದು, ಶಾಸಕರ ನಿಧಿ ಹಣ ದುರುಪಯೋಗ ಪಡಿಸಲಾಗಿದೆ ಎಂದು ಸಿಪಿಐ(ಎಂ) ಬೈಂದೂರು ವಲಯ ಸಮಿತಿ ಆಕ್ರೋಶ ವ್ಯಕ್ತಪಡಿಸಿದೆ.

ಕಳೆದ ಹಲವಾರು ಸಮಯದಿಂದ ನಾಡ–ಸೇನಾಪುರ ರಸ್ತೆ ನಾದುರಸ್ತಿಯಲ್ಲಿದ್ದು ಗ್ರಾಮದ ಜನರು ಪ್ರಯಾಣ ಮಾಡಲು ಚಿತ್ರಹಿಂಸೆ ಅನುಭವಿಸುತ್ತಿದ್ದರು. ಸಮಸ್ಯೆ ಪರಿಹರಿಸುವಂತೆ ಒತ್ತಾಯಿಸಿ ಹೋರಾಟ ನಡೆಸಿ ಮನವಿ ನೀಡಿದ ನಂತರ ಶಾಸಕರ ನಿಧಿಯಿಂದ ಮರು ಡಾಂಬರೀಕರಣ ಕಾಮಗಾರಿ ನಡೆಸಲಾಗುತ್ತಿದೆ. ಕಾಮಗಾರಿಗೆ 20 ಎಂಎಂ, 10 ಎಂಎಂ ಹಾಗೂ 06 ಎಂಎಂ ಜೆಲ್ಲಿ ಮಿಶ್ರಣ ಮಾಡಿ ಮಾಡಬೇಕಾದ ರಸ್ತೆ ಕಾಮಗಾರಿಯನ್ನು ಕೇವಲ 10 ಎಂಎಂ ಮತ್ತು 06 ಎಂಎಂ ಮಾತ್ರ ಮಿಶ್ರಣ ಮಾಡಿ ಕಳಪೆ ಕಾಮಗಾರಿ ಮಾಡಿ ಜನರ ಹಣ ಲೂಟಿ ಮಾಡಲಾಗುತ್ತಿದೆ. ಈ ಹಿನ್ನಲೆಯಲ್ಲಿ ಸಂಬಂಧಪಟ್ಟ ಇಲಾಖೆಯು ನಿಧಿ ದುರ್ಬಳಕೆಯ ಬಗ್ಗೆ ಸೂಕ್ತ ತನಿಖೆ ನಡೆಸಬೇಕು ಇಲ್ಲವಾದಲ್ಲಿ ಸಿಪಿಐ(ಎಂ) ಪಕ್ಷ ಹೋರಾಟ ಹಮ್ಮಿಕೊಳ್ಳಲಿದೆ ಎಂದು ತಿಳಿಸಿದೆ.

ನಿಯಮ ಬಾಹಿರ ಸಮೃದ್ಧ ಜೀವನ್ ಕಚೇರಿಗೆ ಡಿವೈಎಫ್ಐ ದಾಳಿ:

ರಿಸರ್ವ್ ಬ್ಯಾಂಕಿನ ಹಣವಹಿವಾಟು ನಿಯಮಗಳನ್ನು ಉಲ್ಲೇಖಿಸಿ ಜನರಿಂದ ಠೇವಣಿ ಇರಿಸಿದ್ದ ಸಮೃದ್ಧ ಜೀವನ್ ಎಂಬ ಬಹುರಾಜ್ಯ ಸಹಕಾರಿ ಸಂಘದ ಮಂಗಳೂರು ಕಚೇರಿಯ ಮೇಲೆ ಡಿವೈಎಫ್ಐ ಮಂಗಳೂರು ಕಾರ್ಯಕರ್ತರು ಜನವರಿ 4 ರಂದು ದಾಳಿ ನಡೆಸಿ ಪ್ರತಿಭಟನೆ ನಡೆಸಿದರು.

ಹಣ ದುಪ್ಪಟ್ಟಾಗುವ ಪ್ರೇರಣೆ ನೀಡಿ ಹಣ ಚಲಾವಣೆ ಕಾಯ್ದೆಗೆ ವಿರುದ್ಧವಾಗಿ ವ್ಯವಹಾರ ಮಾಡುತ್ತಿದ್ದ ಈ ಸಂಸ್ಥೆಯ ವಿರುದ್ಧ ಒಂದು ವರ್ಷಕ್ಕೂ ಹಿಂದೆ ಡಿವೈಎಫ್ಐ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಆಗ ಅಲ್ಲಿನ ಸಿಬ್ಬಂದಿ ನೀಡಿದ ದೂರಿನ ಮೇಲೆ ಕೆಲವು ಡಿವೈಎಫ್ಐ ಕಾರ್ಯಕರ್ತರ ಮೇಲೆ ಪೋಲೀಸರು ಪ್ರಕರಣ ದಾಖಲಿಸಿದ್ದರು.

ಪುಣೆ ಮೂಲಕ ಸಮೃದ್ಧ ಜೀವನ್ ಸಂಸ್ಥೆಯ ಮುಖ್ಯಸ್ಥ ಮಹೇಶ್ ಮೋತೇವಾರ್ ಎಂಬಾತನನ್ನು ವಂಚನೆ ಪ್ರಕರಣದಲ್ಲಿ ಪೋಲೀಸರು ಬಂಧಿಸಿರುವುದು ಈಚೆಗಷ್ಟೇ ಮಾಧ್ಯಮಗಳಲ್ಲಿ ವರದಿಯಾಗಿದ್ದು, ಈ ಹಿನ್ನೆಲೆಯಲ್ಲಿ ಇನ್ನೂ ಕಾರ್ಯಾಚರಿಸುತ್ತಿರುವ ಸಂಸ್ಥೆಯ ಕಚೇರಿಯನ್ನು ಮುಚ್ಚಿಸಲು ಜನವರಿ 4 ರಂದು ಡಿವೈಎಫ್ಐ ಮಂಗಳೂರು ನಗರ ಕಾರ್ಯಕರ್ತರು ದಾಳಿ ನಡೆಸಿ, ಸಂಸ್ಥೆಯ ಅಧಿಕೃತ ಮಾನ್ಯತೆಯ ಬಗ್ಗೆ ಸಿಬ್ಬಂದಿಗಳಲ್ಲಿ ತಕರಾರು ಎತ್ತಿದರು. ಆದರೆ ಸಿಬ್ಬಂದಿ ಡಿವೈಎಫ್ಐ ಕಾರ್ಯಕರ್ತರ ಮೇಲೆ ದೂರು ನೀಡಿದ ಹಿನ್ನೆಲೆಯಲ್ಲಿ ತಕ್ಷಣ ಸ್ಥಳಕ್ಕೆ ಬಂದ ಪೋಲೀಸರು ಡಿವೈಎಫ್ಐ ಕಾರ್ಯಕರ್ತರನ್ನು ಬಂಧಿಸಿ 6 ಮಂದಿಯ ಮೇಲೆ ಪ್ರಕರಣ ದಾಖಲು ಮಾಡಿದ್ದಾರೆ.

ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಉಪಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಜಿಲ್ಲಾ ಸಮಿತಿಯ ಸಾದಿಕ್ ಕಣ್ಣೂರು, ಮತ್ತು ಕಾರ್ಯಕರ್ತರಾದ ರಿಯಾಜ್ ಬೆಂಗ್ರೆ, ಹನೀಫ್ ಬೆಂಗ್ರೆ, ಎಸ್‌ಎಫ್ಐನ ನಿತಿನ್ ಕುತ್ತಾರ್ ಇವರ ಮೇಲೆ ಪ್ರಕರಣ ದಾಖಲಾಗಿದೆ. ನವೀನ್ ಕೊಂಚಾಡಿ, ಯೋಗೀಶ್ ಜಪ್ಪಿನಮೊಗರು ಅವರೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಇವತ್ತು ಕ್ಯಾಪಿಟಲಿಸಂನ ಹೊಸ ರೂಪವಾದ ಕಾರ್ಪೊರೇಟಿಸಂ ತರುವ ಅಪಾಯಗಳನ್ನು ಕಮ್ಯುನಿಸ್ಟರಷ್ಟು ಸಮರ್ಥವಾಗಿ ವಿವರಿಸಬಲ್ಲ ಸಿದ್ಧತೆ ಇನ್ನಿತರ ಬಹುತೇಕ ಬುದ್ಧಿಜೀವಿಗಳಲ್ಲಿಲ್ಲ. ..ಇವತ್ತು ಒಂದಲ್ಲ ಒಂದು ಹಂತದಲ್ಲಿ ಮಾರ್ಕ್ಸ್‌ವಾದಿ ಚಿಂತನೆಗಳನ್ನು ಅರಿಯದವರು ವ್ಯವಸ್ಥೆಯನ್ನು ವಿಮರ್ಶಿಸುವ ದೊಡ್ಡ ಚಿಂತನೆಗಳನ್ನು ರೂಪಿಸಲಾರರು; ಗಂಭೀರ ಬುದ್ಧಿಜೀವಿಗಳಾಗಿ ವಿಕಾಸಗೊಳ್ಳಲಾರರು. ಹಾಗೆಯೇ, ಖಾಸಗೀಕರಣದ ಈ ಕಾಲದಲ್ಲಿ ಕೋಟ್ಯಂತರ ಉದ್ಯೋಗಿಗಳ, ಶ್ರಮಿಕರ ಹಿತಾಸಕ್ತಿಯನ್ನು ಕಮ್ಯುನಿಸ್ಟ್ ಸಂಘಟನೆಗಳಲ್ಲದೆ ಬೇರಾವ ಸಂಘಟನೆಗಳೂ ಕಾಯಲಾರವು. ಆರ್ಥಿಕ ವಿಚಾರಗಳ ಬಗ್ಗೆ, ಅಮೆರಿಕ ಹಾಗೂ ಇನ್ನಿತರ ಯುರೋಪಿಯನ್ ರಾಷ್ಟ್ರಗಳು ಇಂಡಿಯಾವನ್ನು ನವವಸಾಹತುವನ್ನಾಗಿ ಮಾಡುತ್ತಿರುವುದರ ಬಗ್ಗೆ ಕಮ್ಯುನಿಸ್ಟರಷ್ಟು ಸ್ಪಷ್ಟ ಅರಿವುಳ್ಳವರು ಇಂಡಿಯಾದಲ್ಲಿ ತೀರ ಕಡಿಮೆಯಿದ್ದಾರೆ.

– ನಟರಾಜ್ ಹುಳಿಯಾರ್



ಮಹಾಂತೇಶ್ ಕೆ

ಕನಿಷ್ಟ ವೇತನ ಅಧಿಸೂಚನೆ ಹಾಗೂ ಹಲವು ಕಾರ್ಮಿಕ ಕಾನೂನುಗಳ ತಿದ್ದುಪಡಿಗೆ ಮಾಲೀಕರ ಒತ್ತಡ

ಅಸೋಚಾಮ್ ಕೋರಿಕೆ ತಿರಸ್ಕರಿಸಲು ಸಿಐಟಿಯು ಆಗ್ರಹ

ರಾಜ್ಯದ ಕಾರ್ಮಿಕ ಆಯುಕ್ತರು ವಿವಿಧ ಕಾರ್ಮಿಕ ಕಾಯ್ದೆಗಳಡಿ ತಿದ್ದುಪಡಿಯನ್ನು ಪ್ರಸ್ತಾಪಿಸಿ ಮಾಲಕರ ಸಂಘಟನೆ Assocham (ಅಸೋಚಾಂ) ಸರ್ಕಾರ–ಕ್ಕೆ ಕಳುಹಿಸಿರುವ ಮನವಿ ಪತ್ರವನ್ನು ಅಭಿಪ್ರಾಯ ಸೂಚಿಸಲಿಕ್ಕಾಗಿ ಸಿಐಟಿಯು ಕರ್ನಾಟಕ ರಾಜ್ಯಸಮಿತಿಗೆ ಕಳಿಸಿದ್ದರು. ಈ ಬಗ್ಗೆ ತನ್ನ ಅಭಿಪ್ರಾಯ ತಿಳಿಸುತ್ತ ಇದು 'ಚಾಲ್ತಿಯಲ್ಲಿರುವ ಕಾರ್ಮಿಕ ಕಾನೂನುಗಳು ಸಮರ್ಪಕವಾಗಿ ಜಾರಿ ಮಾಡದೆ ಇರುವ ಮಾಲೀಕರ ಅಹವಾಲು', ಮತ್ತು ಇದರ ಭಾಗವಾಗಿ ನೀಡಿರುವ ಸೂಚನೆಗಳು ಎಂದು ಅಭಿಪ್ರಾಯ ಪಟ್ಟಿದೆ. ಕೈಗಾರಿ–ಕೆಯ ಉತ್ಪಾದನೆಗೆ, ಸಾಮಾಜಿಕ ಬೆಳವಣಿಗೆಗೆ ತಮ್ಮ ದುಡಿಮೆಯನ್ನು ಅರ್ಪಿಸುವ ಕಾರ್ಮಿಕ ವರ್ಗವನ್ನು ದುರ್ಬಲಗೊಳಿಸುವ ಪ್ರಯತ್ನ ಇದಾಗಿದೆ. ಇದನ್ನು ತಿರಸ್ಕರಿಸಬೇಕು ಎಂದು ಸಿಐಟಿಯು ಕಾರ್ಮಿಕ ಆಯುಕ್ತರನ್ನು ಆಗ್ರಹಿಸಿದೆ.

ಪ್ರಮುಖವಾಗಿ ಕೈಗಾರಿಕಾ ವಿವಾದಗಳ ಕಾಯ್ದೆ 1947 ರ ಹಲವು ಸೆಕ್ಷನ್‌ಗಳಿಗೆ ಅವರು ಪ್ರಸ್ತಾಪಿಸಿರುವ ತಿದ್ದುಪಡಿಗಳು ಮತ್ತಷ್ಟು ಕೈಗಾರಿಕಾ ಅಶಾಂತಿಗೆ ಮತ್ತು ಸಾಮಾಜಿಕ ಅಶಾಂತಿಗೆ ಕಾರಣವಾಗುತ್ತವೆ ಎನ್ನುತ್ತ ಅದು ವಿವಿಧ ಸೆಕ್ಷನ್‌ಗಳಿಗೆ ಸೂಚಿಸಿರುವ ತಿದ್ದುಪಡಿಗಳು ಏಕೆ ಅಗತ್ಯವಿಲ್ಲ ಎಂಬುದನ್ನು ಸೆಕ್ಷನ್‌ವಾರಾಗಿ ಸಿಐಟಿಯು ತನ್ನ ಪತ್ರದಲ್ಲಿ ವಿವರಿಸಿದೆ. Assocham ನವರು ಸೂಚಿಸಿರುವ ಬದಲಾವಣೆಗಳು ಮಾಲೀಕರಿಗೆ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಲು ಸಂಪೂರ್ಣ ಅಧಿಕಾರವನ್ನು ಖಾತ್ರಿಗೊಳಿಸುವಂತಿವೆ, ಜಗತ್ತಿನ ಎದುರು ಅಮಾನವೀಯ ಶೋಷಣೆಗೆ ಅವಕಾಶ ನೀಡಿರುವ ದೇಶವೆಂದು ನಮ್ಮ ದೇಶವನ್ನು ಗುರುತಿಸುವಂತೆ ಮಾಡುವ, ಮತ್ತೆ ದುಡಿಯುವ ವರ್ಗವನ್ನು ಗುಲಾಮಗಿರಿಗೆ ತಳ್ಳುವ ಯತ್ನವಾಗಿದೆ ಎಂದಿರುವ ಸಿಐಟಿಯು ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಕಂಡುಬರುವ ಕೈಗಾರಿಕಾ ಅಶಾಂತಿಗೆ ಕರ್ನಾಟಕ ರಾಜ್ಯವನ್ನೂ ಕೊಂಡೊಯ್ಯುತ್ತದೆ ಎಂದು ಎಚ್ಚರಿಸಿದೆ.

ಯಾವುದೇ ಉದ್ದಿಮೆ ಹಾಗು ಕೈಗಾರಿಕೆಗಳಿಗೆ ಕಾನೂನುಗಳಿಂದ ವಿನಾಯಿತಿ ಕರ್ನಾಟಕ ರಾಜ್ಯ ಕೈಗಾರಿಕಾ ಶಾಂತಿಗೆ ಹೆಸರಾದಲ್ಲಿ ಮಾತ್ರವೇ ಬಂಡವಾಳ ಆಕರ್ಷಣೆ ಸಾಧ್ಯವಾಗುತ್ತದೆ. ಸಾಮಾಜಿಕ ಅಶಾಂತಿಗೆ ಕಾರಣವಾಗಬಹುದಾದ ಮುಕ್ತ ಶೋಷಣೆಗೆ ಯಾವುದೇ ಉದ್ದಿಮೆಗೂ ಅವಕಾಶ ನೀಡಬಾರದು ಎಂದು ಸಿಐಟಿಯು ಕರ್ನಾಟಕ ರಾಜ್ಯಸಮಿತಿ ಆಗ್ರಹಿಸಿದೆ.


ಈ ನಿಟ್ಟಿನಲ್ಲಿ, ಅಸೋಚಾಮ್‌ನ ಸೂಚನೆಗಳ ಹಿನ್ನೆಲೆಲಯಲ್ಲಿ ಸಿಐಟಿಯು ಈ ಕೆಳಗಿನಂತೆ ತನ್ನ ನಿಲುವುಗಳನ್ನು ಪುನರುಚ್ಚರಿಸಿದೆ:

- ಕಾರ್ಮಿಕ ಸಂಘಟನೆಗಳಿಗೆ ಮಾನ್ಯತೆ ನೀಡುವುದನ್ನು ಕಡ್ಡಾಯಗೊಳಿಸುವ ಕಾನೂನು ಜಾರಿಗೆ ಕಾರ್ಮಿಕ ಸಂಘಗಳು ಬೇಡಿಕೆ ಇಡುತ್ತಿವೆ. ಕಾರ್ಮಿಕರ ಅಭಿಪ್ರಾಯಕ್ಕೆ ಹಾಗು ಆಯ್ಕೆಯಂತೆ ಮಾಡಿಕೊಳ್ಳುವ ಕಾನೂನು ಬದ್ಧ ಕಾರ್ಮಿಕ ಸಂಘಟನೆಗಳಿಗೆ ಮಾಲೀಕರು ಮಾನ್ಯತೆ ನೀಡದೆ ಇರುವುದೇ ಹಲವು ಕೈಗಾರಿಕಾ ವಿವಾದಗಳಿಗೆ ಕಾರಣವಾಗುತ್ತಿದೆ.
- ಕೆಲಸದ ಅವಧಿಯನ್ನು ಹೆಚ್ಚುಮಾಡುವುದು, ಓವರ್ ಟೈಂ ಕೆಲಸಕ್ಕೆ ಮುಕ್ತ ಅವಕಾಶಕೊಡಬೇಕು, ಓವರ್ ಟೈಂ ವೇತನವನ್ನು ಕಡಿತಗೊಳಿಸಬೇಕು ಎಂಬೆಲ್ಲಾ ಅಸೋಚಾಮ್ ಸೂಚನೆಗಳು "ಲಾಭ ಮಾತ್ರ ಮಾಲೀಕರಿಗೆ, ಕಷ್ಟ ಮಾತ್ರ ಸಮಾಜಕ್ಕೆ " ಎಂಬ ಅವರ ಕಣ್ಣೋಟವನ್ನು ಪ್ರದಶಿಸುತ್ತದೆ. ಇದು ವ್ಯಾಪಾರ ಹಾಗು ಲಾಭ ಹೆಚ್ಚಾಗುವಾಲೇ ನಿರುದ್ಯೋಗವೂ ಹೆಚ್ಚಾಗುವುದಕ್ಕೆ ಅವಕಾಶ ಕಲ್ಪಿಸುತ್ತದೆ.
- ಅಂತರರಾಷ್ಟ್ರೀಯ ಮಾರುಕಟ್ಟೆಯ ಒತ್ತಡಗಳನ್ನು, ಹಾಗು ಬೇಡಿಕೆಯನ್ನು ಈಡೇರಿಸಲು ದಿನದ 24 ಗಂಟೆಗಳು, ಎಲ್ಲಾ ದಿನಗಳು ಉತ್ಪಾದನೆ ನಡೆಸಲು ಉದ್ಯೋಗ ಅವಕಾಶಗಳನ್ನು ಸೃಷ್ಟಿಮಾಡಬೇಕು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ತನ್ನ ಅಧಿಕಾರವನ್ನು ಬಳಿಸಿ ಕೆಲಸದ ಅವಧಿಯನ್ನು ಪಾಳಿಗೆ 6 ಗಂಟೆಗಳು ಹಾಗು ದಿನಕ್ಕೆ ನಾಲ್ಕು ಪಾಳಿಗಳು, ವಾರದಲ್ಲಿ 36 ಗಂಟೆಗಳ ಕೆಲಸ ಎಂದು ಸೂಚಿಸಿದರೆ ಕೈಗಾರಿಕೆ ಹಾಗು ಕಾರ್ಮಿಕರಿಗೆ ಮಾತ್ರವಲ್ಲದೆ ಸಮಾಜಕ್ಕೂ ಅನುಕೂಲವಾಗುತ್ತದೆ.
- ಇತ್ತೀಚಿನ ತಂತ್ರಜ್ಞಾನದ ಅಭಿವೃದ್ದಿಯಿಂದ ಅತಿ ಕಡಿಮೆ ಕಾರ್ಮಿಕರನ್ನು ನೇಮಕ ಮಾಡಿಕೊಂಡು ಅತಿಹೆಚ್ಚು ವ್ಯಾಪಾರ ವಹಿವಾಟು ಮಾಡಲು ಸಾಧ್ಯವಾಗುತ್ತಿರುವ ಹಿನ್ನೆಲೆಯಲ್ಲಿ ಕಾರ್ಮಿಕರ ಸಂಖ್ಯೆ ಆಧಾರದಲ್ಲಿ ಯಾವುದೇ ಉದ್ದಿಮೆಯನ್ನು ಸಣ್ಣ ಕೈಗಾರಿಕೆಗಳೆಂದು ನಿರ್ಧರಿಸಲು ಮತ್ತು ಆ ಕಾರಣ ಕೊಟ್ಟು ಅದ–ಕ್ಕೆ ಕಾರ್ಮಿಕ ಕಾನೂನುಗಳಿಂದ ವಿನಾಯ್ತಿ ಕೊಡಲುಸಾಧ್ಯವಿಲ್ಲ.
- ಮಹಿಳೆಯರಿಗೆ ನೀಡಬೇಕಾದ ರಕ್ಷಣೆಯನ್ನು ಆಡಳಿತವರ್ಗಗಳು ಸಂಪೂರ್ಣವಾಗಿ ವಹಿಸಲೇಬೇಕು.. ಮಹಿಳಾ ಕಾರ್ಮಿಕರಿಗೆ ರಕ್ಷಣೆ ನೀಡುವ ಹೊಣೆಯಿಂದ ಮಾಲೀಕರಿಗೆ ಯಾವುದೇ ವಿನಾಯಿತಿ ನೀಡಬಾರದು.
- ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ರದ್ದುಗೊಳಿಸುವ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕು.

ಸ್ಕೀಂ ನೌಕರರ ರಾಷ್ಟ್ರೀಯ ಸಮಾವೇಶ: ಎರಡು ಹಂತಗಳ ಕಾರ್ಯಾಚರಣೆಗೆ ಕರೆ

ಭಾರತ ಸರ್ಕಾರದ ವಿವಿಧ ಇಲಾಖೆಗಳಡಿಯಲ್ಲಿನ ಸ್ಕೀಂಗಳಲ್ಲಿ ದುಡಿಯುತ್ತಿರುವ ನೌಕರರ ಸಂಕಟಮಯವಾದ ಬಗ್ಗೆ ಗಮನ ಸೆಳೆದು ಐಕ್ಯ ಚಳುವಳಿ ಬೆಳೆಸಲು ಪೂರಕವಾಗಿ ಡಿಸೆಂಬರ್–10, 2015 ರಂದು ಸಿಐಟಿಯು ಮುತುವರ್ಜಿಯಲ್ಲಿ ಸ್ಕೀಂ ನೌಕರರ ರಾಷ್ಟ್ರೀಯ ಸಮಾವೇಶವು ನವದೆಹಲಿಯಲ್ಲಿ ಜರುಗಿತು. 11 ವಿವಿಧ ಸ್ಕೀಂಗಳಾದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಆಶಾ, 104 ಸೇವೆ, ನರ್ಸ್ ಮತ್ತು ಸೂಲಗಿತ್ತಿಯರು ಮಧ್ಯಾಹ್ನದ ಬಿಸಿಯೂಟ ಯೋಜನೆ, ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ (ಎನ್‌ಸಿಎಲ್‌ಡಿ), ರಾಷ್ಟ್ರೀಯ ಗ್ರಾಮೀಣ ಜೀವನ ನಿರ್ವಹಣೆ ಮಿಷನ್ (ಎನ್‌ಆರ್‌ಸಿಎಮ್), ಅರೆ ಕಾಲಿಕ ಶಿಕ್ಷಕರು, ಸರ್ವ ಶಿಕ್ಷಣ ಅಭಿಯಾನದ ಕಸ್ತೂರಿಬಾ ಗಾಂಧಿ ಬಾಲಿಕಾ ವಿದ್ಯಾಲಯ, ಮಹತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ (ಎಮ್‌ಜಿಎನ್‌ಆರ್‌ಇಜಿಎ)ಗಳಲ್ಲಿ ಕೆಲಸ ಮಾಡುವ 18 ರಾಜ್ಯಗಳ 300ಜನ ನೌಕರರು ಭಾಗವಹಿಸಿದ್ದರು.

ಸಮಾವೇಶವನ್ನು ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಎ.ಕೆ.ಪದ್ಮನಾಭನ್ ಅವರು ಉದ್ಘಾಟಿಸಿ ಮಾತನಾಡಿದರು. ಕೇಂದ್ರ ಸರ್ಕಾರ ಸ್ಕೀಂ ನೌಕರರನ್ನು ಕಾರ್ಮಿಕರೆಂದು ಪರಿಗಣಿಸಿ ಹಕ್ಕು ನೀಡಲು ನಿರಾಕರಿಸಿದ್ದು ಈ ನೀತಿಯ ವಿರುದ್ಧ, ಐಕ್ಯ ಚಳುವಳಿ ಅಗತ್ಯವೆಂದರು. ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿಗಳಾದ ತಪನ್‌ಸೇನ್ ಸಮಾವೇಶಕ್ಕೆ ಶುಭಕೋರಿದರು. ರಾಜ್ಯ ಮಟ್ಟದಲ್ಲಿ ಬಲಿಷ್ಠ ಚಳುವಳಿಯೊಂದನ್ನು ಆರಂಭಿಸಿ ರಾಷ್ಟ್ರ ಮಟ್ಟದ ಹೋರಾಟಕ್ಕೆ ಅಣಿಯಾಗಬೇಕೆಂದರು.



ಸಿಐಟಿಯು ತನ್ನ ಸಂಪೂರ್ಣ ಬೆಂಬಲ ನೀಡುವುದಾಗಿ ರಾಷ್ಟ್ರ ಮಟ್ಟದ ಚಳುವಳಿಗೆ ಕಾರ್ಯ ಪ್ರವೃತರಾಗುವುದಾಗಿ ತಿಳಿಸಿದರು. ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿಗಳಾದ ಹೇಮಲತಾ ಅವರು ಸಮಾವೇಶದ ನಿರ್ಣಯವನ್ನು ಮಂಡಿಸಿದರು ಚರ್ಚೆಯ ನಂತರ ಅದನ್ನು ಅಂಗೀಕರಿಸಲಾಯಿತು. ಸಮಾವೇಶವು 4 ಬೇಡಿಕೆಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು.

1) 2016–17ನೇ ಬಜೇಟ್‌ನಲ್ಲಿ ಬಡ ಜನರಿಗಿರುವ ಎಲ್ಲಾ ಯೋಜನೆಗಳಿಗೆ ಅಗತ್ಯ ಅನುದಾನ ನೀಡಬೇಕು,
2) ಎಲ್ಲಾ ಸ್ಕೀಂಗಳಲ್ಲಿ ದುಡಿಯುತ್ತಿರುವವರನ್ನು ಕಾರ್ಮಿಕರೆಂದು ಪರಿಗಣಿಸಬೇಕು.
3) ಕನಿಷ್ಠ ವೇತನ ಮಾಸಿಕ 15000 ನಿಗದಿಗೊಳಿಸಬೇಕು ಹಾಗು ಬೆಲೆ ಏರಿಕೆ ಸೂಚ್ಯಂಕವನ್ನು ಒಳಗೊಳ್ಳಬೇಕು.
4) ಎಲ್ಲಾ ಯೋಜನಾ ಕಾರ್ಮಿಕರಿಗೆ (ಸ್ಕೀಂ ವರ್ಕರ್ಸ್) ಪಿಂಚಣಿ, ಉಪಧನ, ಭವಿಷ್ಯ ನಿಧಿ (ಪಿಎಫ್) ವೈದ್ಯಕೀಯ ಸೌಲಭ್ಯ ಮತ್ತು ಇತ–ರೆ ಸಾಮಾಜಿಕ ಭದ್ರತೆ ಯೋಜನೆಗಳನ್ನು ಜಾರಿಗೊಳಿಸಬೇಕು.

ಸಮಾವೇಶದಲ್ಲಿ 2 ಹಂತದ ಕಾರ್ಯಾಚರಣೆಗೆ ತೀರ್ಮಾನಿಸಲಾಯಿತು. 1) ವಿವಿಧ ಇಲಾಖೆಗಳಲ್ಲಿ ವಿವಿಧ ಯೋಜನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ಸಂಘಟಿಸುವುದು ಹಾಗು ಫಲಾನುಭವಿಗಳನ್ನು ಕಂಡು ಹೋರಾಟಕ್ಕೆ ಅವರ ಬೆಂಬಲವನ್ನು ಪಡೆಯುವುದು. 2) ಈ ಪ್ರಚಾರದ ಭಾಗವಾಗಿ ಒಂದು ದಿನದ "ಅಖಿಲ ಭಾರತ ಬೇಡಿಕೆ ದಿನ" ಆಚರಿಸಲು ಕರೆನೀಡಲಾಗಿದೆ. ರಾಜ್ಯದಿಂದಲೂ ಅಂಗನವಾಡಿ, ಬಿಸಿಯೂಟ, ಹಾಗೂ ಆಶಾ ಸಂಘಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಾರಿಗೆ ನಿಗಮಗಳ ನೌಕರರ ವೇತನ ಪರಿಷ್ಕರಣೆ : 'ಪ್ರಜಾಪ್ರಭುತ್ವ ವಿಧಾನದ ಮೂಲಕ ಕೈಗಾರಿಕಾ ಒಪ್ಪಂದ' –ಸಿಐಟಿಯು ಆಗ್ರಹ

ಕರ್ನಾಟಕ ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ 1 ಲಕ್ಷದ 20 ಸಾವಿರ ನೌಕರರು ದುಡಿಯುತ್ತಿದ್ದಾರೆ. ಕಳೆದ ಎರಡು ದಶಕಗಳಿಂದ ರಾಜ್ಯ ಸರಕಾರ ಮತ್ತು ಸಾರಿಗೆ ನಿಗಮಗಳ ಆಡಳಿತ ಮಂಡಳಿಗಳು ನೌಕರರ ವೇತನ ಪರಿಷ್ಕರಣೆ ಮತ್ತು ಸೇವಾ ಸೌಲಭ್ಯಗಳ ವಿಚಾರದಲ್ಲಿ ಅತ್ಯಂತ ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ಅನುಸರಿಸುತ್ತಾ ಏಕ ಪಕ್ಷೀಯವಾಗಿ ಕೇವಲ ವೇತನದಲ್ಲಿಅಲ್ಪ ಸ್ವಲ್ಪ ಹೆಚ್ಚಳವನ್ನು ನಾಲ್ಕು ವರ್ಷಗಳಿಗೆ ಒಂದು ಬಾರಿ ಪ್ರಕಟಿಸುತ್ತಿದ್ದಾರೆ. ಇಂತಹ ಏಕಪಕ್ಷೀಯ ಆಡಳಿತ ವ್ಯವಸ್ಥೆಯ ಕಾರಣದಿಂದ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರು ಬಹಳ ಕಠಿಣವಾದ ಪರಿಸ್ಥಿತಿಗಳನ್ನು ಎದುರಿಸಿ ಸಂಕಷ್ಟದಲ್ಲಿ ಜೀವನ ನಡೆಸುತ್ತಿದ್ದಾರೆ. ಅಲ್ಲದೇ ಪ್ರಜಾಪ್ರಭುತ್ವ ರಹಿತ ಆಡಳಿತ ವಿಧಾನದಿಂದಾಗಿ ರಾಜ್ಯದ ಹಲವು ಡಿಪೋಗಳಲ್ಲಿ ನೌಕರರು ಆತ್ಮಹತ್ಯೆಗಳಿಗೆ ಒಳಗಾಗುವ ದುಸ್ಥಿತಿಗಳು ಉಂಟಾಗುತ್ತಿವೆ.

ನಾಲ್ಕು ಸಾರಿಗೆ ನಿಗಮಗಳ ನೌಕರರ ವೇತನ ಪರಿಷ್ಕರಣೆಯು ದಿನಾಂಕ 1–1–2016 ರಿಂದ ಅನ್ವಯವಾಗುವಂತೆ ಆಗಬೇಕಾಗಿದೆ. ನೌಕರರ ನ್ಯಾಯಯುತವಾಗಿರುವ ಬೇಡಿಕೆಗಳನ್ನು ಈಡೇರಿಸಲು ಸರಕಾರ ಮತ್ತು ಸಾರಿಗೆ ನಿಗಮಗಳ ಆಡಳಿತ ಮಂಡಳಿಗಳು ಸಾರಿಗೆ ನಿಗಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಪ್ರಜಾಪ್ರಭುತ್ವ ವಿಧಾನದಲ್ಲಿ ಕೈಗಾರಿಕಾ ಒಪ್ಪಂದವನ್ನು ಮಾಡಬೇಕೆಂದು ಸಿಐಟಿಯು ಫೆಡರೇಷನ್ ಒತ್ತಾಯಿಸಿದೆ.

ಪ್ರಾಯೋಜಿತ ಆಚರಣೆಗಳ ಅಪಾಯಕಾರಿ ಬೆಳವಣಿಗೆ



ಪ್ರೊ॥ ರಾಜೇಂದ್ರ ಚೆನ್ನಿ

ವಿವೇಕಾನಂದರ ಚಿಂತನೆಯ ಒಂದು ಅರ್ಥಪೂರ್ಣವಾದ ಭಾಗವು ಅವರ ಕಾಲದ ಭಾರತದ ಸಾಮಾಜಿಕ ಸ್ಥಿತಿಗಳ ಬಗ್ಗೆ ಇದೆ. ಅದರ ಬಗ್ಗೆ ಅವರ ತೀವ್ರವಾದ ವಿಮರ್ಶೆ, ಬದಲಾವಣೆಯನ್ನು ಬಯಸುವ ಬದ್ಧತೆ ಇವುಗಳು ಅಪೂರ್ವವಾಗಿವೆ. ಪ್ರಶ್ನೆಯೆಂದರೆ ಸದ್ಯದ ಸ್ಥಿತಿಯಲ್ಲಿ ನಾವು ವಿವೇಕಾನಂದರ ವ್ಯಕ್ತಿತ್ವದ ಈ ಮುಖವನ್ನು ಪ್ರಬಲವಾಗಿ ಬಿಂಬಿಸುವ ಸಿದ್ಧತೆ ಮಾಡಿಕೊಂಡಿದ್ದೇವೆಯೆ? ಇಲ್ಲದಿದ್ದರೆ ವಿವೇಕಾನಂದರ "ಬಲಿಷ್ಠ ಭಾರತ, ಧೈರ್ಯಶಾಲಿ ಶೂರ ಹಿಂದೂ" ಈ ಪರಿಕಲ್ಪನೆಗಳೇ ಹೆಚ್ಚಿನ ಪ್ರಚಾರ ಪಡೆದು ಬಲಪಂಥೀಯ ಸಿದ್ಧಾಂತಗಳಿಗೆ ಸಮರ್ಥನೆ ನೀಡುವ ಅಪಾಯಗಳೇ ಹೆಚ್ಚು.

ಇತ್ತೀಚಿನ ದಿನಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ರಾಜ್ಯ ಸರಕಾರ ಪ್ರಾಯೋಜಿತ ಆಚರಣೆಗಳು ಉಂಟುಮಾಡಿದ ವಿವಾದಗಳು, ಗಲಭೆ ಹಾಗೂ ಹಿಂಸೆಯ ಬಗ್ಗೆ ಗಂಭೀರವಾಗಿ ನಾವು ಯೋಚಿಸಬೇಕಿದೆ. ಇವುಗಳನ್ನು ಒಂದೊಂದಾಗಿ ಚರ್ಚಿಸಬಹುದು; ಆದರೆ ಇವೆಲ್ಲವೂ ಸೇರಿ ಒಂದು ಅಪಾಯಕಾರಿಯಾದ ಬೆಳವಣಿಗೆಯನ್ನು ಸೂಚಿಸುತ್ತವೆ. ಅದೇನೆಂದರೆ ಪ್ರಭುತ್ವವು ಧರ್ಮ, ಇತಿಹಾಸ ಹಾಗೂ ಸಂಸ್ಕೃತಿಯ ವಿಷಯಗಳಲ್ಲಿ ಅತಿಕ್ರಮ ಪ್ರವೇಶವನ್ನು ಮಾಡುತ್ತಿದೆ. ಮತ್ತು ಅದರಿಂದಾಗಿ ತನ್ನ ಸೆಕ್ಯೂಲರ್ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಒಂದು ಸಮಾಜವು ಆರೋಗ್ಯಕರವಾಗಿರಬೇಕೆಂದರೆ ಪ್ರಭುತ್ವದ ಸಂಸ್ಥೆಗಳು ಹಾಗೂ ಅಧಿಕಾರದ ಆಚೆಗೆ ಇರುವ ನಾಗರೀಕ ಸಮುದಾಯವು ಧರ್ಮ, ಇತಿಹಾಸ, ಸಾಹಿತ್ಯ ಹಾಗೂ ಸಂಸ್ಕೃತಿಯ ವಲಯಗಳ ಬಗ್ಗೆ ಸಾರ್ವಜನಿಕ ಚರ್ಚೆ, ಸಂವಾದ ಇವುಗಳ ಮೂಲಕ ತನ್ನ ನಿಲುವುಗಳನ್ನು ಸ್ವತಂತ್ರವಾಗಿ ರೂಪಿಸಿಕೊಳ್ಳುವಂತಿರಬೇಕು.

ಜನಮಾನಸದ ನೆನಪುಗಳನ್ನು ಮರೆತ ಟಿಪ್ಪು ಜಯಂತಿ

ಈಗ ಕರ್ನಾಟಕದಲ್ಲಿ ಆಗುತ್ತಿರುವುದೆಂದರೆ ಪ್ರಭುತ್ವವೇ ಈ ವಲಯಗಳಲ್ಲಿ ನಿರ್ದೇಶನಗಳನ್ನು ಕೊಡುತ್ತಿದೆ. ಅದೂ ಆಚರಣೆಗಳನ್ನು ನಡೆಸಬೇಕು ಎನ್ನುವ ಆದೇಶಗಳ ಮೂಲಕ. ಉದಾಹರಣೆಗೆ ಟಿಪ್ಪೂ ಜಯಂತಿಯ ವಿವಾದವನ್ನು ನೋಡೋಣ. ಟಿಪ್ಪೂನನ್ನು ಕುರಿತ ವಿವಾದಗಳು ಹೊಸದೇನಲ್ಲ. ಬ್ರಿಟಿಷ್ ವಸಾಹತುಶಾಹಿಗೆ ಅವನು ನಿದ್ದೆಯಲ್ಲೂ ತಲ್ಲಣಗೊಳಿಸುವ ದುಃಸ್ವಪ್ನನಂತಾಗಿದ್ದ. ಬ್ರಿಟಿಷ್ ಆಡಳಿತಗಾರರು, ಸೈನಿಕರು, ಪಾದ್ರಿಗಳು, ಇತಿಹಾಸಕಾರರು, ಕಾದಂಬರಿಕಾರರು, ಚಿತ್ರಕಲಾವಿದರು ಅವನು ಬದುಕಿದ ಕಾಲದಲ್ಲಿ ಮತ್ತು ಆನಂತರ ಅವನನ್ನು ಒಂದು ಗೀಳಾಗಿಸಿಕೊಂಡಿದ್ದರು. ಅವನನ್ನು ಮನುಷ್ಯರೂಪದ ರಾಕ್ಷಸನನ್ನಾಗಿ ಒಂದು ದಂತಕತೆಯನ್ನೇ ನಿರ್ಮಿಸಿಬಿಟ್ಟರು. ಅದರ ಸಮರ್ಥನೆಗಾಗಿ ಚರಿತ್ರೆಯನ್ನೇ ಸೃಷ್ಟಿಸಿದರು. ಅವರ ಭಯಗಳು, ಆತಂಕಗಳು ಚರಿತ್ರೆಯ ರೂಪವನ್ನು ತಾಳಿ ನಮ್ಮ ವಸಾಹತು ಪ್ರಜ್ಞೆಯನ್ನು ಪ್ರವೇಶಮಾಡಿದವು. ಇದು ಸಾಲದು ಎನ್ನುವಂತೆ ಕ್ರಿಶ್ಚಿಯನ್ ಹಾಗೂ ಹಿಂದೂ ಧಾರ್ಮಿಕ ನೆಲೆಗಳಿಂದಲೂ ಟಿಪ್ಪುವಿನ ಬಗ್ಗೆ ಇದೇ ಬಗೆಯ ಕರಾಳ ಚಿತ್ರಣಗಳು ಚಾಲ್ತಿಗೆ ಬಂದವು. ಅದೇ ಹೊತ್ತಿಗೆ ಕನ್ನಡ ನಾಡಿನ ಲಾವಣಿಗಳಲ್ಲಿ, ಹಾಡುಗಳಲ್ಲಿ ಈ ಚಿತ್ರಣಕ್ಕೆ ವಿರುದ್ಧವಾದ, ಅವನನ್ನು ಧೀರ ನಾಯಕನನ್ನಾಗಿ ಹಾಗೂ ದುರಂತ ಪಾತ್ರವಾಗಿ ಬಿಂಬಿಸಲಾಯಿತು.

ಇತ್ತೀಚಿನ ಟಿಪ್ಪೂ ವಿವಾದದಲ್ಲಿ ಪರ ಹಾಗೂ ವಿರೋಧವಾಗಿ ಬರೆದ, ಮಾತನಾಡಿದ ಇತಿಹಾಸಕಾರರು ಸಂಪೂರ್ಣವಾಗಿ ಹೊರಗಿಟ್ಟಿದ್ದೆಂದರೆ ಈ ಬಗೆಯ ಮೌಖಿಕ ಇತಿಹಾಸ ಹಾಗೂ ಜನಮಾನಸದ ನೆನಪುಗಳನ್ನು, ಇರಲಿ. ನಾನು ಇಲ್ಲಿ ಚರ್ಚೆ ಮಾಡುತ್ತಿರುವುದು ಪ್ರಭುತ್ವ (ಸರಕಾರವು) ಆದೇಶದ ಮೂಲಕ ಟಿಪ್ಪೂ ಜಯಂತಿಯನ್ನು ಆಚರಿಸುವ ಫರ್ಮಾನು ಹೊರಡಿಸಿದ್ದು. ಈ ತೀರ್ಮಾನ ಅವಸರದ್ದು ಹಾಗೂ ಸಿನಿಕತನದ್ದು ಎಂದು ನನಗೆ ಅನ್ನಿಸಿದೆ. ಅದೊಂದು ರಾಜಕಾರಣದ ಕ್ರಮವಾಗಿತ್ತು. ಟಿಪ್ಪೂವಿನ ಬಗೆಗಿನ ದ್ವೇಷವನ್ನು ಕೋಮುರಾಜಕಾರಣಕ್ಕಾಗಿ ಬಲಪಂಥೀಯ ಸಂಘಟನೆಗಳ ಬಳಸಿಕೊಳ್ಳುತ್ತ ಬಂದಿರುವುದು ಸರಕಾರಕ್ಕೆ ಗೊತ್ತಿಲ್ಲವೆ?

1999 ರಲ್ಲಿ ಶಿವಮೊಗ್ಗೆಯಲ್ಲಿ ಟಿಪ್ಪೂವಿನ ಬಗ್ಗೆ ಒಂದು ಕಾರ್ಯಕ್ರಮವನ್ನು ರೂಪಿಸಿದಾಗ ಅದರ ಹಿಂದಿನ ದಿನ ನನ್ನ ಮನೆಗೇ ಪೋಲೀಸರ ಒಂದು ದೊಡ್ಡ ಟೀಮ್ ಬಂದು, ನಾನು ಭಾಷಣ ಮಾಡಬಾರದೆಂದು ಬುದ್ಧಿ ಹೇಳಲು ಪ್ರಯತ್ನಿಸಿತು. ಕಾರ್ಯಕ್ರಮದ ಮುಖ್ಯ ರೂವಾರಿಯಾಗಿದ್ದ ಗೆಳೆಯ ಸುಂದರ್ ಅವರಿಗೂ ಎಚ್ಚರಿಕೆ ಕೊಡಲಾಗಿತ್ತು. ಇಂಥ ಘಟನೆಗಳು ಕರ್ನಾಟಕದ ಉದ್ದಕ್ಕೂ ನಡೆದಿದ್ದವು. ಆ ವಿವಾದದ ನಂತರ ಸರಕಾರದ ಯಾವುದೇ ಸಂಸ್ಥೆಗಳು (ಅಂದರೆ ಅಕಾಡೆಮಿಗಳು, ಪುಸ್ತಕ ಪ್ರಾಧಿಕಾರ ಇತ್ಯಾದಿಗಳು) ಟಿಪ್ಪೂನ ಬಗ್ಗೆ ವಸ್ತುನಿಷ್ಠ ಇತಿಹಾಸದ ಬರಹಗಳನ್ನು ಪ್ರೋತ್ಸಾಹಿಸಲಿಲ್ಲ. ಈಗ ದಿಢೀರನೆ ಟಿಪ್ಪೂ ಜಯಂತಿಯನ್ನು ಆಚರಿಸುವಂತೆ ಫರ್ಮಾನು ಹೊರಡಿಸಿದ್ದು ರಾಜಕಾರಣ ಮಾತ್ರ. ಸರಕಾರವೇ ಅದು ಮುಸ್ಲಿಮರ ಕಾರ್ಯಕ್ರಮವೆನ್ನುವ ಧೋರಣೆಯನ್ನು ತನ್ನ ನೌಕರಶಾಹಿಯ ಮೂಲಕ ತೋರಿಸಿತು. ನಿರೀಕ್ಷೆಯಂತೆಯೇ ಬಲಪಂಥೀಯ ಸಂಘಟನೆಗಳು ಇದನ್ನು ಹಿಂಸೆಗೆ ಪರಿವರ್ತಿಸಿದವು. ಅನೇಕ ವರ್ಷಗಳಿಂದ ಬಲಪಂಥೀಯ ಸಿದ್ಧಾಂತದ ವಿರುದ್ಧ ಗಟ್ಟಿಯಾಗಿ ಮಾತನಾಡುತ್ತ ಬಂದಿರುವ ಗಿರೀಶ್ ಕಾರ್ನಾಡರ ಮೇಲೆ ರಾಜ್ಯದ ಬಲಾಢ್ಯ ಜಾತಿಯೊಂದನ್ನು ಬಳಸಿಕೊಂಡು ಹಗೆ ತೀರಿಸಿಕೊಂಡವು.

ಆಚರಣೆ ಬಿಂಬಿಸಿದ 'ಅನುಭಾವಿ ಋಷಿ' ಕುವೆಂಪು

ಇದಾದ ಕೂಡಲೇ ಅಷ್ಟೇ ಅವಸರವಾಗಿ ಕುವೆಂಪು ಅವರ ಜನ್ಮದಿನೋತ್ಸವವನ್ನು ವಿಶ್ವಮಾನವ ದಿನಾಚರಣೆಯನ್ನಾಗಿ ಆಚರಿಸಲು ಆದೇಶ ಹೊರಟಿತು. ಕುವೆಂಪು ಕನ್ನಡ ಮನಸ್ಸಿನ ಅತ್ಯಂತ ಮುಖ್ಯ ಭಾಗವೇ ಆಗಿರುವುದರಿಂದ ಅವರು ಬರೆಯಲು ಆರಂಭಿಸಿದ ಕಾಲದಿಂದಲೇ ಕನ್ನಡ ಸಮಾಜವು ಅವರನ್ನು ಓದುತ್ತ, ಚರ್ಚಿಸುತ್ತ ಬಂದಿದೆ. ನಮ್ಮ ಎಲ್ಲಾ ತಲೆಮಾರುಗಳಿಗೆ ಕುವೆಂಪು ಅರ್ಥಪೂರ್ಣವಾದ ಸಾಂಸ್ಕೃತಿಕ ಬಂಡಾಯದ ಮಹಾನ್ ಸಂಕೇತವಾಗಿದ್ದಾರೆ. ವೈಚಾರಿಕ ಸ್ವಾತಂತ್ರ್ಯದ ರೂಪಕವಾಗಿದ್ದಾರೆ. ಆದರೆ ನಾನು ನೋಡಿದ ಹಾಗೆ "ವಿಶ್ವಮಾನವ ಆಚರಣೆ"ಗಾಗಿ ಅವಸರದಲ್ಲಿ ಏರ್ಪಾಡಾದ ಅನೇಕ ಕಾರ್ಯಕ್ರಮಗಳಲ್ಲಿ ಕುವೆಂಪು ಅವರನ್ನು ಕೇವಲ ಆಧ್ಯಾತ್ಮಕ್ಕೆ, ಅನುಭಾವಕ್ಕೆ ಇಳಿಸಿ ಒಬ್ಬ ಋಷಿಯಾಗಿ ಬಿಂಬಿಸಲಾಯಿತು. ನಮ್ಮ ಚರಿತ್ರೆಯನ್ನು ಬಾಧಿಸಿದ ವರ್ಣ, ಜಾತಿ, ಮೂಢನಂಬಿಕೆ, ಅಸಮಾನತೆ, ಪುರೋಹಿತಶಾಹಿ ಇವುಗಳ ವಿರುದ್ಧ ಅವರ ಬರಹವು ಅತ್ಯಂತ ಪ್ರಬಲವಾದ ಪ್ರತಿರೋಧವಾಗಿತ್ತು ಎನ್ನುವುದನ್ನು ಪ್ರಧಾನವಾಗಿ ಚರ್ಚಿಸಲಾಗಲಿಲ್ಲ. ನಮ್ಮ ವಿಶ್ವವಿದ್ಯಾನಿಲಯದಲ್ಲಿಯೇ ಮಾತನಾಡಿದ ಪ್ರಖ್ಯಾತ ವಿದ್ವಾಂಸರೊಬ್ಬರು ರಾಮಕೃಷ್ಣ ಪರಮಹಂಸರು, ಉಪನಿಷತ್ತುಗಳು ಇವುಗಳ ಪ್ರಭಾವದಲ್ಲಿ ಕುವೆಂಪು "ಹಿಂದೂ ರಾಷ್ಟ್ರಕ್ಕೆ" ಸಮನ್ವಯತೆಯನ್ನು ತಂದು-ಕೊಟ್ಟರೆಂದು ವಾದಿಸಿದರು.

ಈಗಾಗಲೇ ಇಡೀ ಒಂದು ವಾರದವರೆಗೆ ವಿವೇಕಾನಂದರ ಕುರಿತು ಎಲ್ಲಾ ವಿಶ್ವವಿದ್ಯಾನಿಲಯಗಳು ಹಾಗೂ ಕಾಲೇಜುಗಳಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕೆಂದು ಇನ್ನೊಂದು ಫರ್ಮಾನು ಬಂದಿದೆ. ಭಾರತದ ಶ್ರೇಷ್ಠ ವ್ಯಕ್ತಿತ್ವಗಳಲ್ಲಿ ವಿವೇಕಾನಂದರು ಒಬ್ಬರು ಎನ್ನುವುದು ನಿರ್ವಿವಾದ. ಆದರೆ ಬಲಪಂಥೀಯ ಸಂಘಟನೆಗಳು ವಿವೇಕಾನಂದರ ಸಮಾಜಮುಖಿಯಾದ ಹಾಗೂ ಪುರೋಹಿತಶಾಹಿ ವಿರುದ್ಧವಾದ ಚಿಂತನೆಯನ್ನು ಮರೆಮಾಚಿ ಅವರನ್ನು ಬಲಿಷ್ಠ ಹಿಂದೂ ರಾಷ್ಟ್ರದ ವಕ್ತಾರರನ್ನಾಗಿ, ಬಲಪಂಥೀಯ ಯುವಕರಿಗೆ ಒಂದು ಮೂರ್ತಿಯಾಗಿ (ಐಕಾನ್) ಪರಿವರ್ತಿಸಿಬಿಟ್ಟಿವೆ. ಈ ಹಿಂದೆ ಬಿ.ಜೆ.ಪಿ. ಅಧಿಕಾರದಲ್ಲಿದ್ದಾಗ ಕಾಲೇಜು ಶಿಕ್ಷಣ ಇಲಾಖೆಯ ಸುತ್ತೋಲೆಯಲ್ಲಿ ವಿವೇಕಾನಂದರ ಭಾವಚಿತ್ರವನ್ನು ಎಲ್ಲಿಡಬೇಕು, ಹೇಗೆ ಎಲ್ಲರೂ ಹೂವಿನ ಪಕಳೆಗಳನ್ನು ಹೇಗೆ ಅರ್ಪಿಸಬೇಕು ಎನ್ನುವ ವಿವರಗಳನ್ನು ಕೊಡಲಾಗಿತ್ತು. ಈಗ ಸರಕಾರ ಪ್ರಾಯೋಜಿತ ಒಂದು ವಾರದ ಕಾರ್ಯಕ್ರಮಗಳಲ್ಲಿ ಬಲಪಂಥೀಯ ವಾಗ್ಮಿಗಳು ಮಿಂಚಲಿದ್ದಾರೆ. ವಿವೇಕಾನಂದರ ಬಗ್ಗೆ ಸಮಗ್ರವಾದ ಓದು, ಚರ್ಚೆ ಇವುಗಳು ಅಸಾಧ್ಯ. ಏಕೆಂದರೆ ಸರಕಾರಕ್ಕೆ ಕೂಡ ಬೇಕಾಗಿರುವುದು ಆಚರಣೆಗಳು ಮಾತ್ರ.

ವಿವೇಕಾನಂದರ ಪರ್ಯಾಯ ಪ್ರತಿಮೆಗೆ ಪೂರ್ವಸಿದ್ಧತೆ ಇದೆಯೇ?

ಕಾಲೇಜುಗಳು, ವಿಶ್ವವಿದ್ಯಾನಿಲಯಗಳು ಯಾವುದನ್ನು ಆಚರಿಸಬೇಕು ಎನ್ನುವ ನಿರ್ದೇಶನಗಳನ್ನು ಯಾವ ಅಧಿಕಾರದ ಮೇಲೆ ನೀಡುತ್ತದೆಯೆನ್ನುವುದು ಅರ್ಥವಾಗದ ವಿಷಯ. ಅದರಲ್ಲೂ ಸೂಚನೆಯಲ್ಲ, ಅದೇಶದ ರೀತಿಯಲ್ಲಿ. ವಿವೇಕಾನಂದರ ಕುರಿತು ಕಾರ್ಯಕ್ರಮಗಳನ್ನು ನೇರವಾಗಿ ಮುಖ್ಯಮಂತ್ರಿಗಳೇ ಉಸ್ತುವಾರಿ ವಹಿಸುತ್ತಾರೆ, ತಕ್ಷಣ ಕಾರ್ಯಕ್ರಮದ ವಿವರಗಳನ್ನು ತಿಳಿಸಿ ಎಂದು ಆದೇಶ ಬಂದಿದೆ. ಇಲ್ಲಿರುವ ತಾತ್ವಿಕ ಪ್ರಶ್ನೆಗಳೆಂದರೆ, ವಿವೇಕಾನಂದರನ್ನು ಬಲಪಂಥೀಯ ಸಿದ್ಧಾಂತಗಳ ಪ್ರತಿಮೆಯನ್ನಾಗಿ ಪರಿವರ್ತಿಸಲಾಗಿದೆಯಾದ್ದರಿಂದ ಅದನ್ನು ಮುಖ್ಯಮಂತ್ರಿಗಳು ಅಮೂಲಾಗ್ರವಾಗಿ ಬದಲಾಯಿಸುವ ಸಿದ್ಧತೆ ಮಾಡಿಕೊಂಡಿದ್ದಾರೆಯೆ? ಅದಕ್ಕಾಗಿ ಯಾವುದೇ ಪೂರ್ವಸಿದ್ಧತೆಗಳನ್ನು ಯಾಕೆ ಮಾಡಿರಲಿಲ್ಲ? 'ಬಲಿಷ್ಠ ಹಿಂದೂ ರಾಷ್ಟ್ರ', 'ವಿಶ್ವದ ನಾಗರೀಕತೆಗಳಿಗೆ ಆಧ್ಯಾತ್ಮಿಕ ಗುರುವಾದ ಭಾರತ' ಇಂಥ ಸಂಕಥನಗಳಿಗೆ ಸುಲಭವಾಗಿ ದಕ್ಕುವ ವಿವೇಕಾನಂದರ ಯಾವ ಪರ್ಯಾಯವಾದ ಪ್ರತಿಮೆಯನ್ನು ಕೊಡಲು ಸರಕಾರವು ಸಿದ್ಧವಾಗಿದೆ? ಈ ಸಿದ್ಧತೆಯಿಲ್ಲದ್ದರಿಂದ ಬಲಪಂಥೀಯ ಧೋರಣೆಗಳಿಗೆ ಸುಲಭವಾದ, ಪ್ರಭಾವಶಾಲಿಯಾದ ವೇದಿಕೆಯನ್ನು ಕಾಂಗ್ರೆಸ್ ಸರಕಾರ ಯಾಕೆ ನಿರ್ಮಿಸಿಕೊಡುತ್ತಿದೆ? ಮುಖ್ಯವಾಗಿ, ವಿಶ್ವವಿದ್ಯಾನಿಲಯಗಳು, ಕಾಲೇಜುಗಳು, ನಮ್ಮ ಅವಿವೇಕಿ ಸರಕಾರಿ ಅಧಿಕಾರಿಗಳಿಗೆ ಸಾಫ್ಟ್ ಟಾರ್ಗೆಟ್ ಆಗುವುದನ್ನು ನಿಲ್ಲಿಸುವುದು ಹೇಗೆ? ಶಿಕ್ಷಣ ಸಂಸ್ಥೆಗಳು ಇರುವುದು ಸಂಶೋಧನೆ, ಚರ್ಚೆಗಳಿಗೆ ಹೊರತು ಆಚರಣೆಗಳಿಗಲ್ಲ.

ಇತಿಹಾಸದ ವ್ಯಕ್ತಿತ್ವಗಳನ್ನು ನಮ್ಮ ಇಂದಿನ ಸಿದ್ಧಾಂತಗಳಿಗೆ ತಕ್ಕಂತೆ ಅಥವಾ ಸದ್ಯದ ತುರ್ತುಗಳಿಗೆ ತಕ್ಕಂತೆ ಮರುಸೃಷ್ಟಿಸಿಕೊಳ್ಳುವುದು ಅಪ್ರೋಪ್ರಿಯೇಟ್ (appropriate) ಮಾಡಿಕೊಳ್ಳುವುದು ನಿರಂತರವಾಗಿ ನಡೆಯುವ ಕೆಲಸವಾಗಿದೆ. ಚರಿತ್ರೆಯ ವಸ್ತುನಿಷ್ಠತೆಯ ಬಗ್ಗೆ ನಾವು ಏನೇ ವಾದಿಸಿದರೂ ಈ ಕೆಲಸವನ್ನು ನಿಲ್ಲಿಸುವುದು ಅಸಾಧ್ಯ. ಆದರೆ ಅಪಾಯಕಾರಿಯಾದ ನಿಲುವುಗಳು ಹಾಗೂ ಕ್ರಿಯೆಗಳ ಸಮರ್ಥನೆಗಾಗಿ ಇತಿಹಾಸವನ್ನು ಬಳಸಿಕೊಂಡಾಗ ಅದಕ್ಕೆ ಪ್ರತಿರೋಧವು ಅವಶ್ಯಕವಾಗುತ್ತದೆ. ಪ್ರತಿರೋಧವು ಒಂದು ಇತ್ಯಾತ್ಮಕವಾದ ಸಾಂಸ್ಕೃತಿಕ ರಾಜಕಾರಣದ ಸ್ವರೂಪದ್ದಾಗಿರಬೇಕಾಗುತ್ತದೆ. ಹಾಗೂ ಇದಕ್ಕೆ ಖಚಿತವಾದ ರಾಜಕೀಯದ ಬೆಂಬಲವಿರಬೇಕಾಗುತ್ತದೆ. ಈಗ ಎದ್ದು ಕಾಣುತ್ತಿರುವುದು ಇವುಗಳ ಕೊರತೆ.

ವಿವೇಕಾನಂದರ ಬಗ್ಗೆ ಬಂದಿರುವ ಅತ್ಯುತ್ತಮ ಸಂಶೋಧನೆಯನ್ನು ಓದಿದರೆ ಅವರ ಬರಹ ಹಾಗೂ ವ್ಯಕ್ತಿತ್ವಗಳನ್ನು ಸದ್ಯದ ಕೋಮುವಾದಿ ಹಾಗೂ ಅಸಹಿಷ್ಣುತೆಯ ಸಂದರ್ಭದಲ್ಲಿ ಇತ್ಯಾತ್ಮಕವಾಗಿ ಬಳಸಿಕೊಳ್ಳುವುದು ಕಷ್ಟಕರವೆಂದು ತೋರುತ್ತದೆ. ಅವರ ಚಿಂತನೆಯು ಬಹುಪಾಲು ಓರಿಯಂಟಲಿಸ್ಟ್ ವೈಚಾರಿಕತೆಯ ಆಧಾರವಾದ ಪೂರ್ವ-ವರ್ಸಸ್-ಪಶ್ಚಿಮದ ಆಕೃತಿಯನ್ನು ಅವಲಂಬಿಸಿತ್ತು. ಹೀಗಾಗಿ ಭಾರತವು ಆಧ್ಯಾತ್ಮಿಕತೆ ಹಾಗೂ ಧಾರ್ಮಿಕತೆಯ ತಾಯಿಯೆಂದೂ ಹಾಗೂ ಪಶ್ಚಿಮವು ಇವುಗಳನ್ನು ಭಾರತದಿಂದ ಕಲಿಯಬೇಕೆಂದು ಅವರು ವಾದಿಸಿದರು. ಅದೇ ಹೊತ್ತಿಗೆ ತಮ್ಮ ಕಾಲದ ವಾಸ್ತವಿಕ ಭಾರತವು ದುರ್ಬಲವಾಗಿದೆ, ಪುರೋಹಿತಶಾಹಿಯಿಂದ, ಅಸ್ಪೃಶ್ಯತೆಯಿಂದಾಗಿ ದುಸ್ಥಿತಿಯಲ್ಲಿದೆ ಎಂದೂ ವಾದಿಸಿದರು. ಇಷ್ಟಾದರೂ ಅಂತಿಮವಾಗಿ ಅದ್ವೈತ, ಆಧ್ಯಾತ್ಮಿಕತೆಗಳಿಂದಲೇ ಪ್ರಬಲ ಭಾರತವನ್ನು ಕಟ್ಟಬಹುದೆಂದು ನಂಬಿದ್ದರು.

ಅವರ ಚಿಂತನೆಯ ಒಂದು ಅರ್ಥಪೂರ್ಣವಾದ ಭಾಗವು ಅವರ ಕಾಲದ ಭಾರತದ ಸಾಮಾಜಿಕ ಸ್ಥಿತಿಗಳ ಬಗ್ಗೆ ಇದೆ. ಅದರ ಬಗ್ಗೆ ಅವರ ತೀವ್ರವಾದ ವಿಮರ್ಶೆ, ಬದಲಾವಣೆಯನ್ನು ಬಯಸುವ ಬದ್ಧತೆ ಇವುಗಳು ಅಪೂರ್ವವಾಗಿವೆ. ಪ್ರಶ್ನೆಯೆಂದರೆ ಸದ್ಯದ ಸ್ಥಿತಿಯಲ್ಲಿ ನಾವು ವಿವೇಕಾನಂದರ ವ್ಯಕ್ತಿತ್ವದ ಈ ಮುಖವನ್ನು ಪ್ರಬಲವಾಗಿ ಬಿಂಬಿಸುವ ಸಿದ್ಧತೆ ಮಾಡಿಕೊಂಡಿದ್ದೇವೆಯೆ? ಇಲ್ಲದಿದ್ದರೆ ವಿವೇಕಾನಂದರ "ಬಲಿಷ್ಠ ಭಾರತ, ಧೈರ್ಯಶಾಲಿ ಶೂರ ಹಿಂದೂ" ಈ ಪರಿಕಲ್ಪನೆಗಳೇ ಹೆಚ್ಚಿನ ಪ್ರಚಾರ ಪಡೆದು ಬಲಪಂಥೀಯ ಸಿದ್ಧಾಂತಗಳಿಗೆ ಸಮರ್ಥನೆ ನೀಡುವ ಅಪಾಯಗಳೇ ಹೆಚ್ಚು. ಈ ಸೂಕ್ಷ್ಮಗಳನ್ನು ನೋಡಬಲ್ಲವರಿಗೆ ಕರ್ನಾಟಕ ಸರಕಾರ ಪ್ರಾಯೋಜನ ವಿವೇಕಾನಂದ ಸಪ್ತಾಹದ ಆಚರಣೆಯ ಬಗ್ಗೆ ಆತಂಕಗಳು ಇರುವುದು ಸಹಜವೇ ಆಗಿದೆ. ●

ಪಠಾಣಕೋಟ್ ಪಾಠ

ಮೋದಿ ಸರಕಾರ ಎಡವಟ್ಟಾಗಿದೆ ಎಂಬುದನ್ನು ಸ್ವೀಕರಿಸಬೇಕು. ಇದು ಕೂಡ ಹಲವು ಕಳವಳಕಾರಿ ಪ್ರಶ್ನೆಗಳನ್ನು ಎತ್ತುತ್ತದೆ. ಇದನ್ನು ಪ್ರತಿಷ್ಠೆಯ ವಿಷಯವಾಗಿ ಮಾಡದೆ ಕೊರತೆಯನ್ನು ಒಪ್ಪಿಕೊಳ್ಳಬೇಕು ಮತ್ತು ಇಂತಹ ತಪ್ಪು ಇನ್ನು ಮುಂದೆ ಪುನರಾವರ್ತನೆಗೊಳ್ಳದಂತಾಗಲು ಒಂದು ಸೂಕ್ತವಾದ ತನಿಖೆ ನಡೆಸಬೇಕು .

ಇಸ್ಲಾಮಾಬಾದ್‌ಗೆ ಸುಷ್ಮಾ ಸ್ವರಾಜ್ ಅವರ ಭೇಟಿಯ ವೇಳೆಗೆ ಪಾಕಿಸ್ತಾನದೊಡನೆ ಮಾತುಕತೆಗಳು ಮತ್ತೆ ಆರಂಭಗೊಂಡಿವೆ ಎಂದು ಪ್ರಕಟಿಸಿ ನಾಲ್ಕು ವಾರಗಳೂ ಕಳೆದಿಲ್ಲ. ಅಷ್ಟರಲ್ಲೇ ಪಠಾಣಕೋಟ್‌ನಲ್ಲಿ ಭಯೋತ್ಪಾದಕ ದಾಳಿ ನಡೆದಿದೆ. ಇಂತಹ ಒಂದು ದಾಳಿ ನಡೆಯಬಹುದೆಂದು ಗಡಿಯ ಆಚೆಯೂ ಈಚೆ–ಯೂ ಹಲವು ವೀಕ್ಷಕರು ಮೊದಲೇ ಯೋಚಿಸಿದ್ದರು. ಲಾಹೋರಿಗೆ ಮೋದಿ ಭೇಟಿ ಬಹುಶಃ ದಾಳಿಯ ಯೋಜನೆಯನ್ನು ತ್ವರಿತಗೊಳಿಸಿತು.

ಪಠಾಣಕೋಟ್‌ನ್ ಭಾರತೀಯ ವೈಮಾನಿಕ ಪಡೆಯ ನೆಲೆಯ ಮೇಲಿನ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ ನಡೆಸಿರುವ ಕಾರ್ಯಾಚರಣೆಯಲ್ಲಿ ಏಳು ರಕ್ಷಣಾ ಮತ್ತು ಭದ್ರತಾ ಸಿಬ್ಬಂದಿಯ ಸಾವು ಸಂಭವಿಸಿದೆ. ಒಳಹೊಕ್ಕ ಆರು ಸಶಸ್ತ್ರ ಮಂದಿಯನ್ನು ಹೊರಗೆಳೆದು ಮುಗಿಸಲು ಮೂರೂವರೆ ದಿನಗಳು ಬೇಕಾದವು. ಕಳೆದ ವರ್ಷದಲ್ಲಿ ಎರಡು ಬಾರಿ ಮಾತುಕತೆಗಳನ್ನು ಹಿಂದಕ್ಕೆ ತಗೊಂಡ ನಂತರ ಮಾತುಕತೆಗಳನ್ನು ಪುನರಾರಂಭಿಸುವ ನಿಲುವಿನತ್ತ ಬಂದಿರುವ ಬಿಜೆಪಿ ಸರಕಾರ ಈಗ ಈ ದಾರಿಯಲ್ಲೇ ಮುಂದುವರೆಯಬೇಕು, ಉಗ್ರಗಾಮಿ–ಜಿಹಾದಿ ಗುಂಪುಗಳ ಕೈಮೇಲಾಗಲು ಬಿಡಬಾರದು.

ನಿಜ ಹೇಳಬೇಕೆಂದರೆ, ಪಠಾಣಕೋಟ್ ಘಟನೆ ಸರಕಾರದ ಕೈಗಳನ್ನು ಬಲಪಡಿಸಿದೆ, ಮಾತುಕತೆಗಳ ಅಜೆಂಡಾದಲ್ಲಿ ಭಯೋತ್ಪಾದನೆಯ ಪ್ರಶ್ನೆಯಲ್ಲಿ ಇದನ್ನು ಎತ್ತಿಕೊಳ್ಳಬಹುದು. ಪಾಕಿಸ್ತಾನೀ ಪ್ರಭುತ್ವ ಅಲ್ಲಿನ ಬೇಹುಗಾರಿಕೆ ಮತ್ತು ಭದ್ರತಾ ವ್ಯವಸ್ಥೆಯಲ್ಲಿನ ಕೆಲವು ವಿಭಾಗಗಳ ಕೃಪಾಪೋಷಣೆ ಹೊಂದಿರುವ ಆ ಜಿಹಾದಿ ಗುಂಪುಗಳ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿದೆ ಎಂಬುದನ್ನು ಈ ಘಟನೆ ಮತ್ತೆ ತೋರಿಸಿದೆ.

ಈಗಾಗಲೇ ರೂಪಿಸಿರುವ ಮಾತುಕತೆಗಳ ವೇಳಾ ಪಟ್ಟಿಗೆ ಬದ್ಧವಾಗಿರಬೇಕು. ಇದರಲ್ಲಿ ಭಯೋತ್ಪಾದನೆಯ ಪ್ರಶ್ನೆ ಆದ್ಯತೆ ಪಡೆಯುವಂತೆ ಮಾಡಬೇಕು. ಮಾತುಕತೆಗಳಿಂದ ಹಿಂದೆ ಸರಿದರೆ,



ಪ್ರಕಾಶ ಕಾರಟ್

ಅದು ಭಾರತದ ಸಾಮರಿಕ ಆಯ್ಕೆಗಳನ್ನು ಕುಂಠಿತಗೊಳಿಸುತ್ತದೆ ಮತ್ತು ಘರ್ಷಣೆಗಳು ಮತ್ತೆ ಆರಂಭವಾದರೆ ಅವು ಭಾರತದ ಆರ್ಥಿಕ ಚೇತರಿಕೆ ಮತ್ತು ಪ್ರಗತಿಗೆ ಬಾಧಕವಾಗುತ್ತವೆ.

ಇದು ಅಂಗೀಕರಿಸಬೇಕಾದ ಹೊರಗಣ ನಿಲುವಾದರೆ, ಈ ಭಯೋತ್ಪಾದನಾ ಕ್ರಿಯೆಗೆ ಗಲಿಬಿಲಿಯ ಮತ್ತು ನಿರ್ದಿಷ್ಟ ಗಮನವಿಲ್ಲದ ರೀತಿಯ ಪ್ರತಿಕ್ರಿಯೆಯ ವಿಮರ್ಶೆ ತುರ್ತಾಗಿ ಆಗಬೇಕಾಗಿದೆ. ಕೆಲವು ಭದ್ರತಾ ಪರಿಣಿತರು ಇದೊಂದು ಪತನ ಎಂದೇ ಹೇಳಿದ್ದಾರೆ. ಈ ಇಡೀ ಕಾರ್ಯಾಚರಣೆಯ ಬಗ್ಗೆ ಹಲವಾರು ಪ್ರಶ್ನೆಗಳು ಎದ್ದಿವೆ.

ಮೊದಲನೆಯದಾಗಿ, ಈ ದಾಳಿಯ ಬಗ್ಗೆ ಸಾಕಷ್ಟು ಮುನ್ನೆಚ್ಚರಿಕೆ ಬಂದಿತ್ತು. ಭಯೋತ್ಪಾದಕ ತಂಡ ಒಬ್ಬ ಪೊಲೀಸ್ ಸೂಪರಿಂಟೆಂಡೆಂಟ್ ಕಾರನ್ನು ಹೈಜಾಕ್ ಮಾಡಿತ್ತು, ಆ ಎಸ್‌ಪಿ ಈ ಘಟನೆಯ ಬಗ್ಗೆ ಪೊಲೀಸ್ ಅಧಿಕಾರಿಗಳನ್ನು ಎಚ್ಚರಿಸಿದ್ದರು. ಇದನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರರ(ಎನ್‌ಎಸ್‌ಎ) ಮಟ್ಟದಲ್ಲಿ ಎತ್ತಿಕೊಳ್ಳಲು ಸಾಕಷ್ಟು ಸಮಯವಿತ್ತು. ವಾಯುನೆಲೆಯಲ್ಲಿ ಎಚ್ಚರಿಕೆಯ ಗಂಟೆ ಬಾರಿಸಿ ಎನ್‌ಎಸ್‌ಎ ಅಜಿತ್ ದೋವಲ್‌ರವರ ಸೂಚನೆಯಂತೆ ಎನ್‌ಎಸ್‌ಜಿ ಕಮಾಂಡೋಗಳನ್ನು ವಿಮಾನದಲ್ಲಿ ಕರೆ ತರಲಾಯಿತು.

ಆದರೂ ಆರು ಭಯೋತ್ಪಾದಕರಿಗೆ ವಾಯುನೆಲೆಯ ಹೊರ ಆವರಣವನ್ನು ದಾಟಿ ಪ್ರವೇಶಿಲು ಸಾಧ್ಯವಾಗಿತ್ತು. ಪಠಾಣಕೋಟ್‌ನಲ್ಲಿ ಒಂದು ದೊಡ್ಡ ಸೇನಾನೆಲೆ ಇರುವಾಗ ಭಯೋತ್ಪಾದಕರ ಪತ್ತೆ ಕಾರ್ಯಾಚರಣೆಗೆ ಅವರನ್ನೇಕೆ ಕರೆಯಲಿಲ್ಲ? ಹೊರಾವರಣದ ರಕ್ಷಣೆಯ ಕೆಲಸವನ್ನು ನಿವೃತ್ತ ಮಿಲಿಟರಿ ಸಿಬ್ಬಂದಿ ಇರುವ ರಕ್ಷಣಾ ಭದ್ರತಾ ತಂಡಕ್ಕೆ ವಹಿಸಲಾಗಿದೆ. ಈ ದಾಳಿಯಲ್ಲಿ ಅತಿ ಹೆಚ್ಚು ಸಾವು–ನೋವು ಕಂಡದ್ದು ಈ ತಂಡವೇ. ವಿವಿಧ ಪಡೆಗಳು ಮತ್ತು ಏಜೆನ್ಸಿಗಳ ನಡುವೆ ಸರಿಯಾದ ಸಂಯೋಜನೆ ಇದ್ದಂತಿರಲಿಲ್ಲ. ಗೃಹ ಮಂತ್ರಿಗಳು ಮೊದಲ ದಿನದ ನಂತರ ಕಾರ್ಯಾಚರಣೆ ಯಶಸ್ವಿಯಾಗಿ ಮುಗಿದಿದೆ ಎಂದು ಘೋಷಿಸಿದರು. ನಂತರ ಅವರು ತನ್ನ ಈ ಟ್ವೀಟನ್ನು ಹಿಂತೆಗೆದುಕೊಳ್ಳಬೇಕಾಯಿತು. ಇದೇ ಈ ಸಮಸ್ತ ಕಾರ್ಯಾಚರಣೆಯನ್ನು ಹೇಗೆ ದಡ್ಡತನದಿಂದ ನಡೆಸಲಾಗಿದೆ ಎಂಬುದನ್ನು ತೋರಿಸುತ್ತದೆ.

ಮೋದಿ ಸರಕಾರ ಎಡವಟ್ಟಾಗಿದೆ ಎಂಬುದನ್ನು ಸ್ವೀಕರಿಸಬೇಕು, ಇದು ಕೂಡ ಹಲವು ಕಳವಳಕಾರಿ ಪ್ರಶ್ನೆಗಳನ್ನು ಎತ್ತುತ್ತದೆ. ಇದನ್ನು ಪ್ರತಿಷ್ಠೆಯ ವಿಷಯವಾಗಿ ಮಾಡದೆ ಕೊರತೆಯನ್ನು ಒಪ್ಪಿಕೊಳ್ಳಬೇಕು ಮತ್ತು ಇಂತಹ ತಪ್ಪು ಇನ್ನು ಮುಂದೆ ಪುನರಾವರ್ತನೆಗೊಳ್ಳದಂತಾಗಲು ಒಂದು ಸೂಕ್ತವಾದ ತನಿಖೆ ನಡೆಸಬೇಕು. ●



ಪಠಾಣ್‌ಕೋಟ್ ಭಯೋತ್ಪಾದಕ ದಾಳಿ: ಸಿಪಿಐ(ಎಂ)ಖಂಡನೆ

ಪಂಜಾಬಿನ ಪಠಾಣಕೋಟ್‌ನಲ್ಲಿರುವ ಭಾರತೀಯ ವಿಮಾನ ಪಡೆಯ ನೆಲೆಯ ಮೇಲೆ ಜನವರಿ 2ರ ಮುಂಜಾವಿನಲ್ಲಿ ಆರಂಭವಾದ ಭಯೋತ್ಪಾದಕ ದಾಳಿಯನ್ನು 36 ಗಂಟೆಗಳ ಕಾರ್ಯಾಚರಣೆಯ ನಂತರ ನಿಗ್ರಹಿಸಲಾಗಿದೆ ಎಂದು ಮಂಗಳವಾರದಂದು ಅಧಿಕೃತವಾಗಿ ಪ್ರಕಟಿಸಲಾಗಿದೆ. ಭಯೋತ್ಪಾದಕರ ವಿರುದ್ಧದ ಈ ಕಾರ್ಯಾಚರಣೆಯಲ್ಲಿ ಏಳು ಮಂದಿ ರಕ್ಷಣಾ ಮತ್ತು ಭದ್ರತಾ ಸಿಬ್ಬಂದಿ ಅಸು ನೀಗಿದ್ದಾರೆ. ಎಲ್ಲ ಆರು ಭಯೋತ್ಪಾದಕರು ಕೊಲ್ಲಲ್ಪಟ್ಟಿದ್ದಾರೆ ಎಂದೂ ತಿಳಿಸಲಾಗಿದೆ. ಈ ಮೊದಲು ಜನವರಿ 2ರ ರಾತ್ರಿಯ ಮೊದಲೇ ಕಾರ್ಯಾಚರಣೆ ಮುಗಿದಿದೆ ಎಂದು ಪ್ರಕಟಿಸಲಾಗಿತ್ತು. ಆದರೆ ಕಾರ್ಯಾಚರಣೆ ನಾಲ್ಕನೇ ದಿನದ ವರೆಗೂ ಮುಂದುವರೆಯಿತು.

ಈ ಭಯೋತ್ಪಾದಕ ದಾಳಿಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ ಹಾಗೂ ತಮ್ಮ ಕರ್ತವ್ಯ ನೆರವೇರಿಸುತ್ತ ಪ್ರಾಣಾರ್ಪಣೆ ಮಾಡಿದ ಧೀರರ ಕುಟುಂಬಗಳಿಗೆ ಅದು ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸಿದೆ.

ಪಾಕಿಸ್ತಾನದೊಂದಿಗೆ ಮಾತುಕತೆಗಳನ್ನು ಪುನರಾರಂಭಿಸಿರುವ ನಿರ್ಣಯ ಕೈಗೊಂಡ ಬೆನ್ನ ಹಿಂದೆಯೇ ಈ ದಾಳಿ ಹೊಮ್ಮಿ ಬಂದಿದೆ. ಸಂವಾದದ ಪ್ರಕ್ರಿಯೆಯನ್ನು ಛಿದ್ರಗೊಳಿಸುವುದೇ ಇದರ ಆಶಯ ಎಂಬುದು ಸ್ವಯಂವೇದ್ಯ ಎಂದಿರುವ ಸಿಪಿಐ(ಎಂ) ಇಂತಹ ಛಿದ್ರಕಾರಿಗಳ ಹುನ್ನಾರಗಳನ್ನು ಸೋಲಿಸಬೇಕು, ಕೇಂದ್ರ ಸರಕಾರ ಸಂವಾದದ ಹಾದಿಯಲ್ಲಿ ಮುಂದುವರೆಯಬೇಕು ಎಂದು ಅಭಿಪ್ರಾಯ ಪಟ್ಟಿದೆ.

ಈ ಭಯೋತ್ಪಾದಕ ದಾಳಿಯನ್ನು ನಿರ್ವಹಿಸಿದ ರೀತಿಯ ಬಗ್ಗೆ ಹಲವಾರು ಪ್ರಶ್ನೆಗಳು ಎದ್ದಿವೆ. ಈ ದಾಳಿ ಸಂಭವಿಸಬಹುದು ಎಂಬ ಬಗ್ಗೆ ಸಾಕಷ್ಟು ಗುಪ್ತಚರ ಮಾಹಿತಿಗಳನ್ನು ಒದಗಿಸಲಾಗಿತ್ತು, ಎಚ್ಚರವಾಗಿರಲೂ ಹೇಳಲಾಗಿತ್ತು ಎಂದು ತಿಳಿದು ಬಂದಿದೆ. ಆದರೂ ಭಯೋತ್ಪಾದಕ ತಂಡಕ್ಕೆ ವೈಮಾನಿಕ ನೆಲೆಯ ಆವರಣದಲ್ಲಿ ಪ್ರವೇಶಿಸುವುದು ಸಾಧ್ಯವಾಯಿತು. ಭಯೋತ್ಪಾದಕ ದಾಳಿಯನ್ನು ನಿಗ್ರಹಿಸಲು ನಾಲ್ಕು ದಿನಗಳು ಬೇಕಾದವು. ಈ ನಡುವೆ ಉನ್ನತ ಅಧಿಕಾರಸ್ಥರಿಂದ ಗೊಂದಲಕಾರಿ ಹೇಳಿಕೆಗಳು ಪರಿಸ್ಥಿತಿಯನ್ನು ಮಸುಕುಗೊಳಿಸಿದವು. ಈ ಬಗ್ಗೆ ಪೂರ್ಣ ಪ್ರಮಾಣದ ತನಿಖೆ ಆಗಬೇಕಾಗಿದೆ ಮತ್ತು ಈ ಘಟನೆಯಿಂದ ಪಾಠ ಕಲಿಯಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಹೇಳಿದೆ.

ಹೊಸ ವರ್ಷ ಬಂದಿದೆ, ಹೊಸ ಹೋರಾಟಗಳ ಮುನ್ಸೂಚನೆ ತಂದಿದೆ

ಪುಟ 2 ರಿಂದ

ಸೃಷ್ಟಿಸಲು, ಅಲ್ಪಸಂಖ್ಯಾತರ ಮೇಲೆ ಗುರಿಯಿಡಲು ಬಳಸಿಕೊಂಡವು. ಅಲ್ಪಸಂಖ್ಯಾತರ ವಿರುದ್ಧ ಈ ವಿಷಪೂರಿತ ಪ್ರಚಾರ ದಾದ್ರಿಯಲ್ಲಿ ಸಪ್ಟಂಬರ್ 30ರಂದು ಮಹಮ್ಮದ್ ಅಖ್ಲಾಕ್‌ನ ಭೀಕರ ಕೊಲೆಗೆ ಹಾದಿ ಮಾಡಿಕೊಟ್ಟಿತು.

ಬಿಜೆಪಿ ಸರಕಾರ ಶಿಕ್ಷಣವನ್ನು, ಸಾಂಸ್ಕೃತಿಕ ಧೋರಣೆಗಳನ್ನು ಕೋಮುಗ್ರಸ್ತಗೊಳಿಸುವ ತನ್ನ ಪ್ರಯತ್ನಗಳನ್ನು ಮುಂದುವರೆಸಿದೆ. ಹಿಂದುತ್ವ ಪಡೆಗಳು ಜಾತ್ಯತೀತ ಮತ್ತು ಪ್ರಗತಿಪರ ಮೌಲ್ಯಗಳನ್ನು ಅಂಗೀಕರಿಸಿರುವ ಮತ್ತು ಕೋಮುವಾದಿ ತತ್ವಗಳನ್ನು ವಿರೋಧಿಸುವ ಬುದ್ಧಿಜೀವಿಗಳು, ಲೇಖಕರು ಮತ್ತು ಕಲಾವಿದರ ವಿರುದ್ಧ ವಿಷಪೂರಿತ ಪ್ರಚಾರವನ್ನು ನಡೆಸಿದವು. 2015 ಇಬ್ಬರು ಇಂತಹ ಬುದ್ಧಜೀವಿಗಳ, ಫೆಬ್ರುವರಿಯಲ್ಲಿ ಗೋವಿಂದ ಪನ್ಸಾರೆ ಅವರ, ಮತ್ತು ಆಗಸ್ಟ್‌ನಲ್ಲಿ ಪ್ರೊ. ಕಲ್ಬುರ್ಗಿ ಅವರ ಹತ್ಯೆಗಳು ನಡೆದ ವರ್ಷವೆಂದು ದಾಖಲಾಗುತ್ತದೆ.

ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಂಸ್ಕೃತಿಕ ವೈವಿಧ್ಯತೆಯ ಮೇಲಿನ ಈ ದಾಳಿಗಳು ಸಾಹಿತಿಗಳು ಮತ್ತು ಕಲಾವಿದರಿಂದ ಭಾರೀ ಪ್ರತಿರೋಧವನ್ನು ಎದುರಿಸಬೇಕಾಗಿ ಬಂದಿದೆ. ದೇಶಾದ್ಯಂತ, ವಿವಿಧ ಭಾಷೆಗಳ ಸಾಹಿತಿಗಳು ಪ್ರತಿಭಟನೆಯ ದನಿಯೆತ್ತಿ, ತಮ್ಮ ಕೃತಿಗಳಿಗೆ ನೀಡಲಾದ ಪ್ರಶಸ್ತಿಗಳನ್ನು ಹಿಂದಿರುಗಿಸಿದರು. ಇವರನ್ನನುಸರಿಸಿ ಚರಿತ್ರೆಕಾರರು, ಸಮಾಜ ವಿಜ್ಞಾನಿಗಳು ಈ ಅಸಹಿಷ್ಣು ದಾಳಿಗಳನ್ನು ಪ್ರತಿಭಟಿಸಿ ಹೇಳಿಕೆಗಳಿಗೆ ಸಹಿ ಹಾಕಿದರು. 600 ವಿಜ್ಞಾನಿಗಳು, ಅದರಲ್ಲೂ ಉನ್ನತ ವೈಜ್ಞಾನಿಕ ಸಾಧನೆ ಮಾಡಿದವರು ವೈಜ್ಞಾನಿಕ ಚಿಂತನೆ ಮತ್ತು ವಿಚಾರವಾದದ ರಕ್ಷಣೆಗೆ ಮುಂದಾದದ್ದು ಬಹಳ ಮಹತ್ವದ ಸಂಗತಿ. ಜಾತ್ಯತೀತ–ಪ್ರಜಾಪ್ರಭುತ್ವವಾದಿ ಶಕ್ತಿಗಳು ಮತ್ತು ಹಿಂದುತ್ವದ ಶಕ್ತಿಗಳ ನಡುವೆ ಹೋರಾಟ ತೀವ್ರಗೊಳ್ಳುತ್ತಿದೆ.

2015 ಮೋದಿ ಸರಕಾರ ಅಮೆರಿಕಾ ಸಂಯುಕ್ತ ಸಂಸ್ಥಾನಗಳೊಂದಿಗೆ ಮೈತ್ರಿಯನ್ನು ಬಲಪಡಿಸಿರುವುದನ್ನೂ ಕಂಡಿದೆ. ಜನವರಿ ತಿಂಗಳಲ್ಲಿ ಒಬಾಮ ಭೇಟಿಯೊಂದಿಗೆ ಇದು ಆರಂಭಗೊಂಡಿತು. ಏಶ್ಯ–ಶಾಂತಸಾಗರ ಪ್ರದೇಶದಲ್ಲಿ ಅಮೆರಿಕಾದ ರಣನೀತಿಯೊಂದಿಗೆ ಭಾರತದ ಧೋರಣೆಯನ್ನು ತಳುಕು ಹಾಕುವ ಒಂದು ಜಂಟಿ ಹೇಳಿಕೆಗೆ ಅಮೆರಿಕಾದೊಂದಿಗೆ ಭಾರತ ಸಹಿ ಹಾಕಿದೆ. ಈ ಒಬಾಮ ಭೇಟಿ ಕಾಲದಲ್ಲಿ ಭಾರತ–ಅಮೆರಿಕಾ ರಕ್ಷಣಾ ಚೌಕಟ್ಟು ಒಪ್ಪಂದವನ್ನು ಇನ್ನೂ ಹತ್ತು ವರ್ಷಗಳಿಗೆ ನವೀಕರಿಸುವುದಾಗಿ ಪ್ರಕಟಿಸಲಾಯಿತು. ಅಮೆರಿಕಾದ ನಿರ್ದೇಶನದಂತೆ ಜಪಾನ್ ಮತ್ತು ಅಮೆರಿಕಾದೊಮದಿಗೆ ಒಂದು ತ್ರಿಪಕ್ಷೀಯ ಮೈತ್ರಿಕೂಟವನ್ನು ಭಾರತ ಸೇರಿಕೊಂಡಿದೆ. ಅಮೆರಿಕಾದ ಪೂರ್ಣ ಪ್ರಮಾಣದ ಮಿಲಿಟರಿ ಮತ್ತು ಸಾಮರಿಕ ಮಿತ್ರನಾಗುವತ್ತ ಭಾರತವನ್ನು ಮೋದಿ ಸರಕಾರ ಭರದಿಂದ ಒಯ್ಯುತ್ತಿದೆ. ಇದು ಭಾರತದ ವಿದೇಶಾಂಗ ಧೋರಣೆ ಮತ್ತು ಆಂತರಿಕ ಧೋರಣೆಗಳ ಮೇಲೂ ಗಂಭೀರ ದುಷ್ಪರಿಣಾಮಗಳನ್ನು ಬೀರಲಿದೆ. ಈ ಅಡಿಯಾಳು ಮೈತ್ರಿಯ ಫಲಿತಾಂಶವಾಗಿಯೇ ನೈರೋಬಿಯಲ್ಲಿ ಡಬ್ಲ್ಯುಟಿಒ ಮಂತ್ರಿಮಟ್ಟದ ಸಮ್ಮೇಳನದಲ್ಲಿ ಮತ್ತು ಪ್ಯಾರಿಸ್ ಹವಾಮಾನ ಶೃಂಗಸಭೆಯಲ್ಲಿ ಭಾರತ ಮುದುಡಿಕೊಂಡು ಶರಣಾಗುವಂತಾಗಿದೆ.

ವರ್ಷವಿಡೀ ಪಾಕಿಸ್ತಾನದೊಂದಿಗೆ ಎದುರಾಳಿ ನಿಲುವನ್ನು ತಳೆದ ನಂತರ, ವರ್ಷದ ಕೊನೆಯ ವೇಳೆಗೆ ಇದ್ದಕ್ಕಿದ್ದಂತೆ ತಿಪ್ಪರಲಾಗ ಹಾಕಿ ಪಾಕಿಸ್ತಾನದೊಂದಿಗೆ ಒಂದು ಸಮಗ್ರ ಸಂವಾದಕ್ಕೆ ಮೋದಿ ಸರಕಾರ ಒಪ್ಪಿಕೊಂಡಿದೆ. ಈ ಬದಲಾವಣೆ ಕಟು ವಾಸ್ತವತೆಯ ಎದುರಲ್ಲಿ ಮತ್ತು ಅಮೆರಿಕಾದ ಒತ್ತಡದಿಂದಾಗಿ ಬಂದಿರುವಂತದ್ದು.

ಬಿಜೆಪಿ–ಆರೆಸ್ಸೆಸ್‌ನ ಕೋಮುವಾದಿ ಅಜೆಂಡಾ ಮತ್ತು ಜನತೆ ಅನುಭವಿಸುತ್ತಿರುವ ಆರ್ಥಿಕ ಸಂಕಷ್ಟಗಳು ಆಳುವ ಪಕ್ಷ ಮತ್ತು ಜನತೆಯ ನಡುವಿನ ಕಂದರವನ್ನು ಇನ್ನಷ್ಟು ಅಗಲಗೊಳಿಸುತ್ತಿವೆ.

2015 'ಮೋದಿ ಅಲೆ' ಇಳಿಯಲಾರಂಭಿಸಿದ ವರ್ಷ ಎಂದು ದಾಖಲಾಗುತ್ತದೆ. ಲೋಕಸಭಾ ಚುನಾವಣೆಗಳಲ್ಲಿ ನರೇಂದ್ರ ಮೋದಿ ಮತ್ತು ಬಿಜೆಪಿ 'ಅಭಿವೃದ್ಧಿ' ಅಜೆಂಡಾವನ್ನು ಮುಂದಿಟ್ಟು, ನಿರ್ದಿಷ್ಟವಾಗಿ ಯುವಜನರಿಗೆ ಉದ್ಯೋಗದ ಭರವಸೆ ನೀಡಿ ವ್ಯಾಪಕ ಬೆಂಬಲವನ್ನು ಪಡೆದರು. ಮೇ 2015ರಲ್ಲಿ ಮೋದಿ ಸರಕಾರಕ್ಕೆ ಒಂದು ವರ್ಷವಾಗುವಷ್ಟರಲ್ಲಿ ಜನಗಳ ನಿರೀಕ್ಷೆಗಳು ಹುಸಿಯಾಗಲಾರಂಭಿಸಿದವು. ಇದು ಎರಡು ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ, ಫೆಬ್ರುವರಿಯಲ್ಲಿ ದಿಲ್ಲಿ ಚುನಾವಣೆಗಳಲ್ಲಿ ಮತ್ತು ನವೆಂಬರ್‌ನಲ್ಲಿ ಬಿಹಾರ ಚುನಾವಣೆಗಳಲ್ಲಿ ಪ್ರತಿಫಲನಗೊಂಡಿತು. ಎರಡರಲ್ಲೂ ಬಿಜೆಪಿ ನೆಲಕಚ್ಚುವ ಸೋಲು ಅನುಭವಿಸಿತು.

ಹೊಸವರ್ಷದಲ್ಲಿ ಕೆಲವು ತಿಂಗಳೊಳಗೆ ಪಶ್ಚಿಮ ಬಂಗಾಲ, ಕೇರಳ, ತಮಿಳುನಾಡು, ಪುದುಚೇರಿ ಮತ್ತು ಅಸ್ಸಾಂನಲ್ಲಿ ವಿಧಾನ ಸಭಾ ಚುನಾವಣೆಗಳು ನಡೆಯಲಿವೆ. ಸಿಪಿಐ(ಎಂ)ಗೆ ಮತ್ತು ಎಡಪಕ್ಷಗಳಿಗೆ, ತಮ್ಮ ಬಲಿಷ್ಟ ನೆಲೆಗಳಾದ ಪಶ್ಚಿಮ ಬಂಗಾಲ ಮತ್ತು ಕೇರಳದ ಚುನಾವಣೆಗಳು ಮಹತ್ವದ್ದಾಗಿವೆ. ಸಿಪಿಐ(ಎಂ) ಈ ನಿರ್ಣಾಯಕ ಚುನಾವಣಾ ಸಮರಗಳಿಗೆ ಸಜ್ಜುಗೊಳ್ಳುತ್ತಿದೆ.

ಹೊಸ ವರ್ಷ ಜನಸಾಮಾನ್ಯರ ಜೀವನಾಧಾರಗಳ ರಕ್ಷಣೆಗಾಗಿ ಮತ್ತು ಜಾತ್ಯಾತೀತತೆ ಹಾಗೂ ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ದಾಳಿಗಳಿಗೆ ವಿರುದ್ಧವಾಗಿ ದುಡಿಯುವ ಜನಗಳ ಮತ್ತು ಜನತಾ ಆಂದೋಲನಗಳ ಹೊಸ ಹೋರಾಟಗಳನ್ನು ಕಾಣಲಿದೆ. ಹೆಚ್ಚು ತೀಕ್ಷ್ಣಗೊಳ್ಳುತ್ತಿರುವ ವರ್ಗ ಮತ್ತು ಸಾಮಾಜಿಕ ವೈರುಧ್ಯಗಳು 2016ನ್ನು ಬಿಜೆಪಿ ಸರಕಾರಕ್ಕೆ ಮತ್ತು ಅದರ ಹಿಂದುತ್ವ ಪೋಷಕರಿಗೆ ಹೆಚ್ಚು ಪ್ರಕ್ಷುಬ್ಧಮಯ ವರ್ಷವಾಗಿ ಮಾಡಲಿವೆ. ●

ಪ್ಯಾಲೇಸ್ತೀನ್ ಸ್ವಾತಂತ್ರ್ಯ ಸಾಧಿಸದೆ ನಮ್ಮ ಸ್ವಾತಂತ್ರ್ಯ ಅಪೂರ್ಣ ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ.

– ನೆಲ್ಸನ್ ಮಂಡೇಲಾ

ಹೌದು. ಪ್ಯಾಲೇಸ್ತೀನ್ ಸ್ವಾತಂತ್ರ್ಯ ಸಾಧಿಸದೆ ನಮ್ಮೆಲ್ಲರ ಸ್ವಾತಂತ್ರ್ಯವೂ ಅಪೂರ್ಣ



ಪ್ಯಾಲೇಸ್ತೀನ್ ಪ್ರಶ್ನೆ–ಸಂಕ್ಷಿಪ್ತ ಇತಿಹಾಸ

ಮೊದಲ ಮಹಾಯುದ್ಧಕ್ಕೆ ಮುನ್ನ: ಒಟೋಮನ್ ಸಾಮ್ರಾಜ್ಯದ ಭಾಗ

ಮೊದಲ ಮಹಾಯುದ್ಧದ ಸಮಯದಲ್ಲಿ –ಬ್ರಿಟಿಶರಿಂದ ಅರಬರಿಗೂ, ಜಿಯೋನಿಸ್ಟರಿಗೂ (ಬಾಲ್‌ಫೋರ್ ಘೋಷಣೆ – 1917) ಪೊಳ್ಳು ಭರವಸೆಗಳು; ಸಾಮ್ರಾಜ್ಯಶಾಹಿಗಳ ನಡುವೆ ರಹಸ್ಯ (1916ರ ಸೈಕ್ಸ್–ಪಿಕೊಟ್) ಒಪ್ಪಂದ;

1917–1948 : ಲೀಗ್ ಆರ್ಫ ನೇಶನ್ಸ್ ಮಧ್ಯಸ್ತಿಕೆಯಿಂದ ಬಂದ ಬ್ರಿಟಿಷ್ ಮ್ಯಾನ್ ಡೇಟ್

1933 – ಹಿಟ್ಲರ್ ಅಧಿಕಾರಕ್ಕೆ ಬಂದ ನಂತರ ಯೆಹೂದಿಗಳ ವಲಸೆ ಮತ್ತು ವಸತಿ ವಿಪರೀತ ಏರಿಕೆ

1936–39 : ಬ್ರಿಟಷ್ ಆಡಳಿತ ಮತ್ತು ಯೆಹೂದಿಗಳ ವಲಸೆ ಮತ್ತು ವಸತಿ ವಿರುದ್ಧ ಅರಬ್ ದಂಗೆಗಳು

1948 : ವಿಶ್ವಸಂಸ್ಥೆಯ 'ಎರಡು ದೇಶಗಳ ಪರಿಹಾರ' (ಆಗ ಕೇವಲ ಶೇ.30 ರಷ್ಟಿದ್ದ ಮತ್ತು ಶೇ. 7 ಮಾತ್ರ ಭೂಮಿ ಹೊಂದಿದ್ದ) ಜಿಯೋನಿಸ್ಟ ಯೆಹೂದಿಯರ ಹೊಸ ದೇಶಕ್ಕೆ ಪ್ಯಾಲೆಸ್ಟೈನ್ನಿನ ಶೇ. 55 ಭೂಮಿ ಕೊಡಲು ಪ್ರಸ್ತಾವ; ಪ್ಯಾಲೆಸ್ಟೀನ್ನರ ಮತ್ತು ಅರಬ್ ದೇಶಗಳ ವಿರೋಧ

ಮೇ 15, 1948 – ಜಿಯೋನಿಸ್ಟ ಯೆಹೂದಿಯರ ಹೊಸ ದೇಶ ಇಸ್ರೇಲಿನ ಘೋಷಣೆ

1948 : ನಕ್ಬಾ (ಮಹಾಪ್ರಕೋಪ) ಮೊದಲ ಇಸ್ರೇಲಿ–ಅರಬ್ ಯುದ್ಧದಲ್ಲಿ 532 ಹಳ್ಳಿಗಳ ಪೂರ್ಣ ನಾಶ, 7.5 ಲಕ್ಷ ಪ್ಯಾಲೆಸ್ಟೀನ್ನರು ದೇಶಾಂತರ ಹೋಗಿ ನಿರಾಶ್ರಿತರಾದರು. 35 ಸಾವಿರ ಇಸ್ರೇಲ್ ಒಳಗೆ ಆಂತರಿಕ ನಿರಾಶ್ರಿತರಾದರು.

1949 : ಕದನ ವಿರಾಮ ಒಪ್ಪಂದದ ಫಲವಾಗಿ ಇಸ್ರೇಲ್ ವಶದಲ್ಲಿ ಶೇ.78 ಭೂಪ್ರದೇಶ

1964 : ಪಿ.ಎಲ್.ಒ. (ಪ್ಯಾಲೆಸ್ಟೈನ್ ವಿಮೋಚನಾ ಸಂಘಟನೆ) ಸ್ಥಾಪನೆ;

1964–1971 : ಜೋರ್ಡಾನಿನ ನೆಲೆಗಳಿಂದ ಇಸ್ರೇಲ್ ವಿರುದ್ಧ ಪಿ.ಎಲ್.ಒ. ಸಶಸ್ತ್ರ ವಿಮೋಚನಾ ಗೆರಿಲ್ಲಾ ಹೋರಾಟ; ಇಸ್ರೇಲ್ ವಿರುದ್ಧ ದೇಶದೊಳಗೂ ಹೊರಗೂ ಗೆರಿಲ್ಲಾ ದಾಳಿಗಳು; 1971ರಲ್ಲಿ 'ಬ್ಲಾಕ್ ಸೆಪ್ಟೆಂಬರ್' ಪ್ರಕರಣ ನಂತರ ಜೋರ್ಡಾನಿನಿಂದ ಪಿ.ಎಲ್.ಒ. ಉಚ್ಚಾಟನೆ; ಲೆಬನಾನಿನಿಂದ ಹೋರಾಟ ಮುಂದುವರಿಕೆ

1967 ಜೂನ್ : ಎರಡನೇ ಅರಬ್–ಇಸ್ರೇಲಿ ಯುದ್ಧ: ಇಡೀ ಪ್ಯಾಲೆಸ್ಟೀನ್ ಮತ್ತು ಈಜಿಪ್ಟಿನ ಸಿನಾಯ್ ಮತ್ತು ಸಿರಿಯಾದ ಗೋಲನ್ ಶಿಖರ ಇಸ್ರೇಲ್ ವಶ; 4 ಲಕ್ಷ ಪ್ಯಾಲೆಸ್ಟೈನ್ನಿನ್ನರು ನಿರಾಶ್ರಿತರಾದರು; ಅರಾಫತ್ ನಾಯಕತ್ವದ ಪಿ.ಎಲ್.ಒ. ಮುನ್ನೆಲೆಗೆ

*

1971–82 – ಇಸ್ರೇಲ್ ವಿರುದ್ಧ ಪಿ.ಎಲ್.ಒ. ಸಶಸ್ತ್ರ ವಿಮೋಚನಾ ಗೆರಿಲ್ಲಾ ಹೋರಾಟ ಲೆಬನಾನಿನಿಂದ ಮುಂದುವರಿಕೆ; ಲೆಬನಾನಿನನಲ್ಲಿ ಆಂತರಿಕ ಕಲಹದಲ್ಲಿ ಭಾಗವಹಿಸುವಿಕೆ; ಕ್ರಿಶ್ಚಿಯನ್ ಗೆರಿಲ್ಲಾಗಳೊಂದಿಗೆ ಸೇರಿ ಲೆಬನಾನ್ ಮೇಲೆ ಇಸ್ರೇಲ್ ದಾಳಿ; ಅರಾಫತ್ ರಿಂದ 10 ಅಂಶಗಳ ಶಾಂತಿ ಮಾತುಕತೆಗಳ ಪ್ರಸ್ತಾವ; ಹಲವು ಪಿ.ಎಲ್.ಒ. ಮತ್ತು ಇಸ್ಲಾಮ್ ಗುಂಪುಗಳಿಂದ ತೀವ್ರ ವಿರೋಧ; 1982ರಲ್ಲಿ ಲೆಬನಾನ್ ನಿಂದ ಪಿ.ಎಲ್.ಒ. ಉಚ್ಚಾಟನೆ; ಟುನಿಶಿಯಾಕ್ಕೆ ಪಿ.ಎಲ್.ಒ. ಪಡೆಗಳ ನಿರ್ಗಮನ

1973 ಅಕ್ಟೋಬರ್ – ಈಜಿಪ್ಟ್, ಸಿರಿಯಾಗಳಿಂದ ಯುದ್ಧ; ಅಮೆರಿಕದ ಮಧ್ಯಸ್ತಿಕೆಯಿಂದ ಕದನ ವಿರಾಮ

1974 – ಪಿ.ಎಲ್.ಒ. ಗೆ ವಿಶ್ವಸಂಸ್ಥೆಯಲ್ಲಿ ವೀಕ್ಷಕ ಸ್ಥಾನ;

1978 ಸೆಪ್ಟೆಂಬರ್ – ಈಜಿಪ್ಟ್ ಅರಬ್ ಐಕ್ಯತೆ ಮುರಿದು ಇಸ್ರೇಲ್

ಪ್ಯಾಲೇಸ್ತೀನ್ ಪ್ರಶ್ನೆ

ಪ್ಯಾಲೇಸ್ತೀನ್ ಪ್ರಶ್ನೆ ಪ್ರಮುಖವಾಗಿ, ತಮ್ಮ ನೆಲದಲ್ಲೇ ಬದುಕುವ, ತಮ್ಮ ಆಡಳಿತ ತಾವೇ ನಡೆಸುವ, ದೇಶ ಕಟ್ಟಿಕೊಳ್ಳುವ ಪ್ಯಾಲೆಸ್ತೀನ್ ಮೂಲನಿವಾಸಿಗಳ ಹಕ್ಕುಗಳ ಪ್ರಶ್ನೆ. ಇದನ್ನು ಹಲವು ದಶಕಗಳ ಕಾಲ ಬ್ರಿಟಿಶ್ ಸಾಮ್ರಾಜ್ಯಶಾಹಿ, ಆ ಮೇಲೆ ಜಗತ್ತಿನಾದ್ಯಂತ ನೆಲೆಸಿದ್ದ ಯಹೂದಿ ವಲಸಿಗರು ಅಮೆರಿಕನ್ ಬೆಂಬಲದೊಂದಿಗೆ ರಾಜಕೀಯ–ಮಿಲಿಟರಿ ಬಲದಿಂದ, ಭೀಕರ ಕ್ರೌರ್ಯಗಳಿಂದ ದಮನ ಮಾಡುತ್ತಾ ಬಂದಿದ್ದಾರೆ. ವಿಶ್ವಸಂಸ್ಥೆಯ ನಿಯಮಗಳ ಪ್ರಕಾರವೇ 'ನರಮೇಧ' ಎಂದು ಕರೆಯಬಹುದಾದ ಹಲವು ಪ್ರಮುಖ ದಾಳಿಗಳಲ್ಲಿ ಸಾವಿರಾರು ಪ್ಯಾಲೆಸ್ತೀನ್ನರ ಕಗ್ಗೊಲೆ ನಡೆಸಿದ್ದಾರೆ. ಲಕ್ಷಾಂತರ ಪ್ಯಾಲೆಸ್ತೀನನ್ನರು ತಾಯ್ನಾಡಿನಲ್ಲೇ ಮತ್ತು ನೆರೆಯ ದೇಶಗಳಲ್ಲಿ ನಿರಾಶ್ರಿತರಂತೆ ಬದುಕುವಂತೆ ಮಾಡಿದ್ದಾರೆ.

ವಿಶ್ವಸಂಸ್ಥೆಯ 1947ರ ನಿರ್ಣಯ ನಂ. 181 ಮತ್ತು 1967ರ ನಿರ್ಣಯ ನಂ. 242 ಹಾಗೂ ಇನ್ನೂ ಹಲವಷ್ಟು ನಿರ್ಣಯಗಳನ್ನು ಇಸ್ರೇಲ್ ಉಲ್ಲಂಘಿಸುತ್ತಾ ಬಂದಿದೆ. ಇದು ಸಾಧ್ಯವಾಗಿರುವುದು ಅಮೆರಿಕದ ಅಗಾಧ ಆರ್ಥಿಕ ಮಿಲಿಟರಿ ಸಹಾಯ ಮತ್ತು ಭದ್ರತಾ ಸಮಿತಿಯಲ್ಲಿ ಇಸ್ರೇಲಿನ ಬಗ್ಗೆ ಎಲ್ಲಾ ನಿರ್ಣಯಗಳ ವಿರುದ್ಧ ವಿಟೋ ಬಳಕೆಯಿಂದ. 1972 ರಿಂದ ಈ ವರೆಗೆ ಇಸ್ರೇಲ್ ವಿರುದ್ಧ ವಿಶ್ವಸಂಸ್ಥೆ ನಿರ್ಣಯಗಳಿಗೆ 102 ಬಾರಿ ಅಮೆರಿಕ ವಿಟೋ ಬಳಸಿದೆ. ಶೀತಲ ಸಮರದ ಭಾಗವಾಗಿ, ಮಧ್ಯ ಪ್ರಾಚ್ಯ ಪ್ರದೇಶದ ಹಾಗೂ ತೈಲ ಸಂಪತ್ತಿನ ಮೇಲೆ ಹಿಡಿತ ಸಾಧಿಸುವ ಮತ್ತು ವ್ಯೂಹಾತ್ಮಕ ಗುರಿಗಳ ಭಾಗವಾಗಿ ಇಸ್ರೇಲ್ ಅಮೆರಿಕದ 'ಪ್ರಾದೇಶಿಕ ಪೋಲಿಸ್ ಮ್ಯಾನ್' ಆಗಿರುವುದರಿಂದ ಇದು ಸಾಧ್ಯವಾಗಿದೆ. ಅಮೆರಿಕದ ಯಹೂದಿ ಉದ್ಯಮಿಗಳ ವರ್ತಕರ ಲಾಬಿ ಆ ದೇಶದಲ್ಲೇ ಎರಡನೇ ಅತಿ ಹೆಚ್ಚು ಪ್ರಬಲ ಲಾಬಿ.


1947ರಿಂದ ಕುಗ್ಗುತ್ತಿರುವ ಪ್ಯಾಲೆಸ್ತೀನ್

1947 –70% ಪ್ಯಾಲೆಸ್ತೀನರಿಗೆ 45% ಭೂಮಿ, 30% ಯಹೂದಿ ವಲಸೆಗಾರರಿಗೆ ಶೇ, 55 ಭೂಮಿ

1948–ಮೂಲನಿವಾಸಿ ಪ್ಯಾಲೆಸ್ತೀನರಿಗೆ 22%, ಇಸ್ರೇಲಿಗೆ 78% ಭೂಮಿ

1967 –ಇಸ್ರೇಲಿ ವಶದಲ್ಲಿ 100% ಭೂಮಿ

2014 –ಪ್ಯಾಲೆಸ್ತೀನರಿಗೆ ವಾಸಕ್ಕೆ ಗಾಜಾ ಪಟ್ಟಿ ಮತ್ತು ಪಶ್ಚಿಮ ದಂಡೆಯ ಸುತ್ತುವರೆದ ಹಳ್ಳಿಗಳು ಮಾತ್ರ



ಪ್ಯಾಲೆಸ್ತೀನ್ ವಿಮೋಚನಾ ಹೋರಾಟ

1947ರ ವಿಶ್ವಸಂಸ್ಥೆಯ ಪ್ಯಾಲೆಸ್ತೀನ್ ವಿಭಜನೆ ಯೋಜನೆ ಪ್ಯಾಲೆಸ್ತೀನ್ ಜನತೆಗೆ ಬಗೆದ ದ್ರೋಹವಾಗಿತ್ತು. ಆ ಮೇಲೆ ಜಿಯೋನಿಸ್ಟರು ನಡೆಸಿದ ಯುದ್ಧ ಪ್ಯಾಲೆಸ್ತೀನ್ನರನ್ನು ರೊಚ್ಚಿಗೆಬ್ಬಿಸಿತ್ತು. ಅವರ ಭೂಮಿ, ತಾಯ್ನಾಡು ಕಸಿದು ವಲಸೆಗಾರ ಯಹೂದಿಗಳಿಗೆ ಕೊಡುವುದು ಅನ್ಯಾಯಯುತ ಹಾಗೂ ಅಂತರ್ರಾಷ್ಟ್ರೀಯ ನಿಯಮಗಳಿಗೆ ವಿರುದ್ಧವಾಗಿತ್ತು. ಅದರ ವಿರುದ್ಧ ಪ್ರತಿರೋಧ ಒಡ್ಡುವ ಮತ್ತು ಹೋರಾಟ ಮಾಡುವ ಗುಂಪುಗಳು ಹುಟ್ಟಿ ಕೊಂಡವು. ಆಗ ನೆರೆಯ ಅರಬ್ ದೇಶಗಳಲ್ಲಿ ಸಾಮ್ರಾಜ್ಯಶಾಹಿ–ವಿರೋಧಿ ಅರಬ್ ರಾಷ್ಟ್ರೀಯವಾದಿ ಸರಕಾರಗಳಿದ್ದು ಅವು ಪ್ಯಾಲೆಸ್ತೀನ್ನರ ಹೋರಾಟವನ್ನು ಬೆಂಬಲಿಸಿದವು. 1964ರಲ್ಲಿ ಆಗ ರಾಷ್ಟ್ರೀಯವಾದಿ ಅರಬ್ ಲೀಗ್ ಎಲ್ಲಾ ಪ್ಯಾಲೆಸ್ತೀನಿ ರಾಜಕೀಯ–ಗೆರಿಲ್ಲಾ ಗುಂಪುಗಳ ಸಭೆ ಕರೆದು ಪಿ.ಎಲ್.ಒ. (ಪ್ಯಾಲೆಸ್ತೀನ್ ವಿಮೋಚನಾ ಸಂಘಟನೆ) ಸ್ಥಾಪಿಸಿತು. ಇದರ ಮುಖ್ಯ ಗುಂಪು ಫತಾ ಎಂಬ ಯಾಸೆರ್ ಅರಾಫತ್ ನಾಯತ್ವದ ಗುಂಪಾಗಿದ್ದು ಇನ್ನೂ ಹಲವು ರಾಷ್ಟ್ರೀಯವಾದಿ, ಎಡ, ಕಮ್ಯುನಿಸ್ಟ್ ಗುಂಪುಗಳೂ ಇದ್ದವು. ಎಲ್ಲಾ ಗುಂಪುಗಳು ಸೆಕ್ಯುಲರ್ ಆಗಿದ್ದವು. ಸೋವಿಯೆಟ್ ಒಕ್ಕೂಟ ಸಹ ಪಿ.ಎಲ್.ಒ. ಗೆ ಬೆಂಬಲ ನೆರವು ನೀಡುತ್ತಿತ್ತು.

ಪಿ.ಎಲ್.ಒ. ಪ್ಯಾಲೆಸ್ತೀನ್ ವಿಮೋಚನೆಗೆ ಹೋರಾಡುವ ಗುಂಪುಗಳ ಸಂಯುಕ್ತ ರಂಗವಾಗಿತ್ತು. ಪಿ.ಎಲ್.ಒ. ಯುಹೂದಿ ದೇಶವಾಗಿ ಇಸ್ರೇಲನ್ನು ಮಾನ್ಯ ಮಾಡಲಿಕ್ಕೆ ಸಿದ್ಧವಿರಲಿಲ್ಲ. ಅದು 1946ರವರೆಗೆ ಇದ್ದ ಬ್ರಿಟಿಶ್ ಮ್ಯಾಂಡೇಟಿನ ಗಡಿಗಳಿರುವ ಸ್ವತಂತ್ರ ಅವಿಭಜಿತ ಪ್ಯಾಲೆಸ್ತೀನ್ ದೇಶಕ್ಕಾಗಿ ಒತ್ತಾಯಿಸುತ್ತಿತ್ತು. ಅದನ್ನು ಸಶಸ್ತ್ರ ಹೋರಾಟದಿಂದ ಪಡೆಯುವುದು ಅದರ ಗುರಿಯಾಗಿತ್ತು. 1948ರ ಯುದ್ಧದ ನಂತರ ದೇಶಾಂತರಕ್ಕೆ ಹೋದ 5 ಲಕ್ಷ ನಿರಾಶ್ರಿತರು ದೇಶಕ್ಕೆ ಮರಳಿ ಅವರ ಭೂಮಿಯಲ್ಲಿ ವಾಸಿಸುವುದು ಅವರ ಹಕ್ಕು ಎಂದು ಪ್ರತಿಪಾದಿಸುತ್ತಿತ್ತು. ಇಸ್ರೇಲಿ ಪ್ರಭುತ್ವದ ಮತ್ತು ಅದರ ಪ್ರತಿನಿಧಿಗಳ ವಿರುದ್ಧ ದೇಶದ ಒಳಗೂ ಹೊರಗೂ ಸಶಸ್ತ್ರ ಹೋರಾಟ ಅದರ ತಂತ್ರವಾಗಿತ್ತು. 1960, 70, 80ರ ದಶಕದಲ್ಲಿ ಅದು ಸುಮಾರು 30 ಸಾವಿರ ಗೆರಿಲ್ಲಾ ಪಡೆಗಳನ್ನು ಹೊಂದಿತ್ತು. 1967 –1972 ರವರೆಗೆ ಜೋರ್ಡಾನಿನಲ್ಲಿ, 1972–1982 ವರೆಗೆ ಲೆಬನಾನಿನಲ್ಲಿ 1982–1993ರವರೆಗೆ ಟುನಿಶಿಯಾದಲ್ಲಿ ಮುಖ್ಯ ಕಚೇರಿ ಹೊಂದಿತ್ತು. ಪಿ.ಎಲ್.ಒ. ವನ್ನು ಪ್ಯಾಲೆಸ್ತೀನ್ನರ ಏಕಮಾತ್ರ ಕಾನೂನುಬದ್ಧ ಪ್ರತಿನಿಧಿಯಾಗಿ 100ಕ್ಕೂ ಹೆಚ್ಚು ದೇಶಗಳು ಮಾನ್ಯ ಮಾಡಿದ್ದವು.

ಇಸ್ರೇಲಿ ಆಕ್ರಮಿತ ಪ್ರದೇಶದಲ್ಲಿ ಮೊದಲ ಇಂತಿಫದಾ (1987–1993)ವನ್ನು ಪಿ.ಎಲ್.ಒ. ನೇರವಾಗಿ ಸಂಘಟಿಸದಿದ್ದರೂ, ಅದರ ಭಾಗವಾದ 4 ಪ್ರಮುಖ ಗುಂಪುಗಳು ದಂಗೆ ಆರಂಭವಾದ ಮೇಲೆ ಅದರ ನಾಯಕತ್ವ ವಹಿಸಿ ಇಸ್ರೇಲ್ ಪ್ರಭುತ್ವವನ್ನು ಹಣ್ಣುಗಾಯಿ ಮಾಡುವಲ್ಲಿ ಮತ್ತು ಅಂತರ್ರಾಷ್ಟ್ರೀಯ ಗಮನ ಸೆಳೆಯುವಲ್ಲಿ ಸಫಲವಾಗಿದ್ದವು. ಆದರೆ ಇಷ್ಟು ಹೊತ್ತಿಗೆ ಒಂದು ಕಡೆ ಅರಬ್ ದೇಶಗಳಲ್ಲಿ ರಾಷ್ಟ್ರೀಯವಾದಿ ಸಾಮ್ರಾಜ್ಯಶಾಹಿ–ವಿರೋಧಿ ಶಕ್ತಿಗಳಿಗೆ ಹಿನ್ನಡೆಯಾಗಿ ಅರಬ್ ಆರ್ಥಿಕ–ಮಿಲಿಟರಿ ಬೆಂಬಲ ಕ್ಷೀಣಿಸಿತ್ತು. ಇನ್ನೊಂದು ಕಡೆ 1980ರ ದಶಕದಲ್ಲಿ ಇಸ್ಲಾಮಿಕ್ ಉಗ್ರವಾದಿ ಧೋರಣೆಗಳು ಮತ್ತು ಗುಂಪುಗಳು ಪ್ಯಾಲೆಸ್ತೀನ್ನರಲ್ಲೂ ಬೆಂಬಲ ಪಡೆದು ಬಲಗೊಳ್ಳ

ಪುಟ 10 ನೋಡಿ



ಜತೆ ಕ್ಯಾಂಪ್ ಡೇವಿಡ್ ಒಪ್ಪಂದ; ಪ್ಯಾಲೆಸ್ಟೈನ್ನರಿಗೆ ಸ್ಥಳೀಯ ಆಡಳಿತ ಮಾತ್ರ ಕೊಡುವ ಒಪ್ಪಂದಕ್ಕೆ ಅರಬ್–ಪ್ಯಾಲೆಸ್ಟೀನ್ನರ ತಿರಸ್ಕಾರ;
1982–93 – ಟುನಿಶಿಯಾದ ಅವಧಿಯಲ್ಲಿ ಪಿ.ಎಲ್.ಒ. ಸಂಘಟನೆಯ ಅವನತಿ ಆರಂಭ; 1991ರಿಂದ ಇಸ್ರೇಲ್ ಜತೆ 1993ರ ಒಸ್ಲೊ ಒಪ್ಪಂದದಲ್ಲಿ ಅಂತ್ಯವಾದ ರಹಸ್ಯ ಶಾಂತಿ ಮಾತುಕತೆ ಆರಂಭ;

1987–1993 ಮೊದಲ ಇಂತಿಫದಾ – ಇಸ್ರೇಲಿನ ಆಕ್ರಮಿತ ಪ್ರದೇಶಗಳಲ್ಲಿ ಸಾಮೂಹಿಕ ದಂಗೆಗಳು; ಅಂತರ್ರಾಷ್ಟ್ರೀಯ ಗಮನ ಸೆಳೆದ ಹೋರಾಟ; 200ಕ್ಕೂ ಹೆಚ್ಚು ಮಕ್ಕಳು ಸೇರಿದಂತೆ ಸಾವಿರಕ್ಕೂ ಹೆಚ್ಚು ನಾಗರಿಕರ ಕಗ್ಗೊಲೆಗಳನ್ನು ಒಳಗೊಂಡ ಇಸ್ರೇಲ್ ಮಿಲಿಟರಿಯ ಭೀಕರ ಕ್ರೌರ್ಯದಿಂದ ಮತ್ತು ಈ ಅವಧಿಯ ಕೊನೆಯಲ್ಲಿ ಹುಟ್ಟಿ ಬೆಳೆದ ಇಸ್ಲಾಮಿಕ್ ಉಗ್ರವಾದಿ ಮತ್ತು ಸೆಕ್ಯುಲರ್ ಪಿ.ಎಲ್.ಒ.ದ 4 ಪ್ರಮುಖ ಪಕ್ಷಗಳ ಕಾರ್ಯಕರ್ತರ ನಡುವೆ ಕೊಲೆ–ಹಿಂಸಾಚಾರ–ಅನೈಕ್ಯತೆಗಳಿಂದ ಸೋತ ಹೋರಾಟ

1988 – ಪ್ಯಾಲೆಸ್ಟೈನ್ ಸ್ವಾತಂತ್ರ್ಯ ಘೋಷಣೆ – ವಿಶ್ವಸಂಸ್ಥೆಯ 1947ರ ನಿರ್ಣಯದ ಅನುಸಾರ

1991 – ಮಾಡ್ರಿಡ್ ಮಧ್ಯ–ಪ್ರಾಚ್ಯ ಶಾಂತಿ ಸಮ್ಮೇಳನ

1993 ಒಸ್ಲೊ ಒಪ್ಪಂದ

*

2000–2005 ಎರಡನೇ ಇಂತಿಫದಾ 3 ಸಾವಿರ ಪ್ಯಾಲೆಸ್ಟಿನ್ನರು, 1 ಸಾವಿರ ಇಸ್ರೇಲಿಗಳು, 64 ವಿದೇಶಿಯರ ಸಾವು; ಪ್ಯಾಲೆಸ್ಟಿನ್ನರಿಂದ ಆತ್ಮಾಹುತಿ ದಾಳಿಗಳು, ಇಸ್ರೇಲಿನ ಭೀಕರ ಮಿಲಿಟರಿ ದಾಳಿಗಳು

2000 – ಕ್ಯಾಂಪ್ ಡೇವಿಡ್ ಶೃಂಗ ಸಭೆ

2002– ಅರಬ್ ಲೀಗ್ ಬೈರೂತ್ ಶೃಂಗ ಸಭೆ

2006 – ಇಸ್ರೇಲ್ ಗಾಜಾ ಪಟ್ಟಿಯಿಂದ ಕಾಲ್ತೆಗೆಯಿತು; ಪಶ್ಚಿಮ ದಂಡೆಯ ಸುತ್ತ ಭದ್ರತಾ ಗೋಡೆಯ ನಿರ್ಮಾಣ ಆರಂಭ; ಗಾಜಾ ಪಟ್ಟಿಯಲ್ಲಿ ಉಗ್ರ ಇಸ್ಲಾಮಿಕ್ ಹಾಮಾಸ್ ಚುನಾವಣಾ ವಿಜಯ;

2007–8 – ಫತಾ ಮತ್ತು ಹಾಮಾಸ್ ನಡುವೆ ಮಿಲಿಟರಿ ಘರ್ಷಣೆ; ಗಾಜಾದಿಂದ ಫತಾ ಪಡೆಗಳ ಉಚ್ಚಾಟನೆ; ಗಾಜಾ ಪ್ರತ್ಯೇಕತೆಯ ಘೋಷಣೆ; ಫತಾ ಸರಕಾರ ಪಶ್ಚಿಮ ದಂಡೆಗೆ ಸೀಮಿತ; ಇಸ್ರೇಲ್ ಮತ್ತು ಹಾಮಾಸ್ ನಡುವೆ ಘರ್ಷಣೆ; ಇಸ್ರೇಲ್ ನಿಂದ ಗಾಜಾ ಪಟ್ಟಿಯ ದಿಗ್ಬಂಧನ;

2006–8 –ಪ್ಯಾಲೆಸ್ಟೀನ್–ಇಸ್ರೇಲ್ ಪ್ರಧಾನಿ ಮಾತುಕತೆಗಳು

2008 – ಗಾಜಾ ಮೇಲೆ ಇಸ್ರೇಲಿ ದಾಳಿ 'ಆಪರೇಶನ್ ಹಾಟ್ ವಿಂಟರ್'; ಕದನ ವಿರಾಮ

2008–9 – ಗಾಜಾ ಮೇಲೆ ಪುನಃ ಇಸ್ರೇಲಿ ದಾಳಿ; 'ಆಪರೇಶನ್ ಕಾಸ್ಟ್ ಲೆಡ್'; 23 ದಿನಗಳ ದಾಳಿಯಲ್ಲಿ 1300 ಪ್ಯಾಲೆಸ್ತೀನ್ನರ ಸಾವು, 10 ಸಾವಿರಕ್ಕೂ ಹೆಚ್ಚು ತೀವ್ರವಾಗಿ ಗಾಯಗೊಂಡವರು;

2012 – ಗಾಜಾ ಮೇಲೆ ಮತ್ತೆ ಇಸ್ರೇಲಿ ದಾಳಿ; 'ಆಪರೇಶನ್ ಪಿಲ್ಲರ್ ಆಫ್ ಡಿಫೆನ್ಸ್'

2012– ಪ್ಯಾಲೆಸ್ಟೈನಿಗೆ ವಿಶ್ವಸಂಸ್ಥೆಯಲ್ಲಿ 'ಸದಸ್ಯತ್ವ ಇಲ್ಲದ ವೀಕ್ಷಕ ದೇಶ' ಸ್ಥಾನ

2014 – ಗಾಜಾ ಮೇಲೆ ಮತ್ತೆ 53 ದಿನಗಳ ಸತತ ಇಸ್ರೇಲಿ ದಾಳಿ; "ಆಪರೇಶನ್ ಪ್ರೊಟೆಕ್ಟಿವ್ ಎಜ್'; ಗಾಜಾದ ಮೇಲೆ 52 ಸಾವಿರ ಶೆಲ್ಲುಗಳ ದಾಳಿ; 2145 ಪ್ಯಾಲೆಸ್ತೀನ್ನರ ಸಾವು, 10 ಸಾವಿರಕ್ಕೂ ಹೆಚ್ಚು ತೀವ್ರವಾಗಿ ಗಾಯಗೊಂಡವರು; ಶೇ. 30 ಶಾಲೆಗಳ, 17 ಆಸ್ಪತ್ರೆ 50 ಕ್ಲಿನಿಕ್ ಗಳ ನಾಶ;

2014 – ಅಬ್ಬಾಸ್ ಶಾಂತಿ ಯೋಜನೆ

2015 – ಮೂರನೇ ನಿಶ್ಯಬ್ದ ಇಂತಿಫದಾ ಆರಂಭವಾಗಿದೆ ಎಂದು ಹೇಳಲಾಗುತ್ತಿದೆ.

ಬರ್ಲಿನ್ ಗೋಡೆ vs. ಇಸ್ರೇಲಿ ಗೋಡೆ



ಗಾಜಾ ಪಟ್ಟಿ ಮತ್ತು ಆಕ್ರಮಿತ ಪ್ರದೇಶಗಳ ಸುತ್ತ ಗೋಡೆ ಕಟ್ಟುವ ಯೋಜನೆಯನ್ನು ಇಸ್ರೇಲ್ 2006ರಲ್ಲಿ ಆರಂಭಿಸಿತು. ಬರ್ಲಿನ್ ಗೋಡೆಯನ್ನು ಎತ್ತರದಲ್ಲೂ ಉದ್ದದಲ್ಲೂ ಹಲವು ಪಟ್ಟಿನಿಂದ ಮೀರಿಸುವ ಗೋಡೆ ಇದಾಗಿದೆ. ಬರ್ಲಿನ್ ಗೋಡೆ ಮೂರುವರೆ ಮೀಟರ್ ಎತ್ತರ ಹಾಗೂ 155 ಕಿ.ಮಿ.ಉದ್ದದಾಗಿತ್ತು. ಇಸ್ರೇಲಿ ಗೋಡೆ ಎಂಟು ಮೀಟರ್ ಎತ್ತರ ಹಾಗೂ 650 ಕಿ.ಮಿ.ಉದ್ದದಾಗಿತ್ತು. ಈ ಗೋಡೆ ಅಂತರ್ರಾಷ್ಟ್ರೀಯ ಗಡಿಯೂ ಅಲ್ಲ. ಪ್ಯಾಲೆಸ್ತೀನ್ ಪ್ರದೇಶಗಳ ಮೇಲೆ ಅಂತರ್ರಾಷ್ಟ್ರೀಯ ನಿಯಮಗಳಿಗೆ ವಿರುದ್ಧವಾಗಿ ಕಟ್ಟಿದ್ದು. ಲಕ್ಷಾಂತರ ಪ್ಯಾಲೆಸ್ತೀನ್ನರು ಈ ಗೋಡೆಗಳ ಹಿಂದೆ ಪ್ರತ್ಯೇಕ ಶಿಬಿರಗಳಲ್ಲಿ ವಸತಿರಹಿತ ಜಾಗಗಳಲ್ಲಿ ಜೀವಿಸಬೇಕಾಗಿದೆ. ಸುಮಾರು 2 ಲಕ್ಷಕ್ಕೂ ಮೀರಿದ ಪ್ಯಾಲೇಸ್ತೀನ್ ರೈತರನ್ನು ಅವರು ಸಾಗುವಳಿ ಮಾಡುತ್ತಿದ್ದ ಭೂಮಿಯಿಂದ ಹೊರಹಾಕಲಾಗಿದೆ. ಈ ಗೋಡೆಯ ನಿರ್ಮಾಣಕ್ಕಾಗಿ ಹಾಗೂ ಗೋಡೆಯ ಉದ್ದಕ್ಕೂ ತಪಾಸಣೆಗಾಗಿ ಮತ್ತು ಕಾವಲಿಗಾಗಿ ನಿಮಾಣ ಮಾಡಿರುವ ಠಾಣೆಗಳಿಂದಾಗಿ ಸುಮಾರು 1,15 ಲಕ್ಷ ಪ್ಯಾಲೇಸ್ತೀನ್ನರನ್ನು ಸ್ಥಳಾಂತರಗೊಳಿಸಲಾಗಿದೆ. ಪ್ಯಾಲೆಸ್ತೀನರು ಈ ಗೋಡೆಯಿಂದಾಗಿ ದಿನನಿತ್ಯವೂ ಗುರುತಿನ ತಪಾಸಣೆ, ದೇಹ ಪರೀಕ್ಷೆ, ಅವಹೇಳನ, ತಿರಸ್ಕಾರ, ಸಾವುಗಳನ್ನು ಎದುರಿಸಬೇಕಾಗಿದೆ. ಇದು ಎಲ್ಲಾ ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಗೋಡೆ. ಆದರೆ ಬರ್ಲಿನ್ ಗೋಡೆಯ ವಿರುದ್ಧ ಪ್ರಚಾರ–ಪ್ರತಿಭಟನೆ ಮಾಡಿದ ಮಾನವ ಹಕ್ಕುಗಳ ಪ್ರತಿಪಾದಕರು ಮತ್ತು ಸ್ವಾತಂತ್ರ್ಯದ ಹರಿಕಾರರು ಈ ಬಗ್ಗೆ ಉಸಿರೆತ್ತುತ್ತಿಲ್ಲ.

> ನಾನು ಒಂದು ಕೈಯಲ್ಲಿ ಹೂವು ಮತ್ತು ಇನ್ನೊಂದು ಕೈಯಲ್ಲಿ ಬಂದೂಕು ಹಿಡಿದು ಬಂದಿದ್ದೇನೆ. ನನ್ನ ಕೈಯಲ್ಲಿರುವ ಹೂವು ಬೀಳದಂತೆ ನೋಡುವುದು ನಿಮ್ಮ ಜವಾಬ್ದಾರಿ
> -ಯಾಸೆರ್ ಅರಾಫತ್



ಕೊಲ್ಕತಾದಲ್ಲಿ ಜ್ಯೋತಿಬಸು ರವರೊಂದಿಗೆ ಯಾಸೆರ್ ಅರಾಫತ್

ಪ್ಯಾಲೇಸ್ತೀನ್ ಪ್ರಶ್ನೆಗೆ ಪರಿಹಾರ ಇಲ್ಲವೇ?

ಖಂಡಿತಾ ಇದೆ. ಭಾರತ ಸೇರಿದಂತೆ ಎಲ್ಲಾ ದೇಶಗಳು (ಅಮೆರಿಕ ಬಿಟ್ಟು) ವಿಶ್ವಸಂಸ್ಥೆಯ 1947ರ ನಿರ್ಣಯ ನಂ. 181ನ್ನು ಎಲ್ಲರೂ ಒಪ್ಪಿ ಪಾಲಿಸುವುದು ಇದಕ್ಕೆ ಪರಿಹಾರ. ಇದು ಈಗಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ ಎನ್ನುವುದಾದರೆ, ವಿಶ್ವಸಂಸ್ಥೆಯ 1967ರ ನಿರ್ಣಯ ನಂ. 242 ಆಧಾರಿತ ಪರಿಹಾರವೂ ಕಾರ್ಯಸಾಧ್ಯ. ಈ ಎರಡೂ ನಿರ್ಣಯಗಳು ಮೂಲಭೂತವಾಗಿ ಅನ್ಯಾಯಯುತವಾಗಿದ್ದರೂ, ಸಮಸ್ಯೆಗೆ ಪರಿಹಾರ ಪಡೆಯುವ ದೃಷ್ಟಿಯಿಂದ ಪಿ.ಎಲ್.ಒ. ಇದಕ್ಕೆ ಒಪ್ಪಿತ್ತು. ಇದಕ್ಕೆ ಇಸ್ರೇಲ್ ಸಿದ್ಧವಿಲ್ಲದಿದ್ದರೆ ಅದನ್ನು ದಕ್ಷಿಣ ಆಫ್ರಿಕಾದ ವರ್ಣಬೇಧ ಸರಕಾರವನ್ನು ಮಣಿಸಿದಂತೆ ಅಂತರ್ರಾಷ್ಟ್ರೀಯ ಆರ್ಥಿಕ ದಿಗ್ಬಂಧನ, ಬಹಿಷ್ಕಾರದ ಮೂಲಕ ಮಣಿಸಬೇಕು. ಇದು ಒಂದೇ ದಾರಿ.

ಭಾರತ ಸರಕಾರ ಕಳೆದ ಶತಮಾನದ ಉದ್ದಕ್ಕೂ ಈ ನಿಲುವು ಹೊಂದಿದ್ದು ಮೊದಲ ಎನ್.ಡಿ.ಎ. ಸರಕಾರದ ನಂತರ ನಿಲುವು ಬದಲಿಸಿದೆ. ಆ ನಂತರದ ಸರಕಾರಗಳು ಅದನ್ನು ಮುಂದುವರೆಸುತ್ತಿವೆ. ಪ್ಯಾಲೇಸ್ತೀನ್ ಸ್ವಾತಂತ್ರ್ಯದ ಮಂತ್ರ ಪಠಿಸುತ್ತಲೇ ಇಸ್ರೇಲಿ ಜಿಯೊನಿಸ್ಟ್ ಸರಕಾರದ ಜತೆ ಘನಿಷ್ಟ ಅದರಲ್ಲೂ ಮಿಲಿಟರಿ–ವ್ಯೂಹಾತ್ಮಕ ಸಂಬಂದ ಗಟ್ಟಿಗೊಳಿಸುತ್ತಿದೆ. ಸಂಘ ಪರಿವಾರದ ಧರ್ಮ–ಆಧಾರಿತ ಪ್ರಭುತ್ವದ ಸೈದ್ಧಾಂತಿಕತೆಗೆ ಇದು ಹೊಂದುವುದರಿಂದ ಈ ನೀತಿಯನ್ನು ಈಗಿನ ಎನ್.ಡಿ.ಎ. ಸರಕಾರ ರಭಸದಿಂದ ಜಾರಿ ಮಾಡುತ್ತಿದೆ. ಪ್ಯಾಲೇಸ್ತೀನ್ ಪ್ರಶ್ನೆಯ ಬಗ್ಗೆ ಅರಿವು ಮೂಡಿಸುವುದು, ಅವರ ಹೋರಾಟಕ್ಕೆ ಸೌಹಾರ್ದ ಬೆಂಬಲ ವ್ಯಕ್ತ ಪಡಿಸುವುದು, ಈ ಪ್ರಶ್ನೆ ಪರಿಹಾರ ಆಗುವವರೆಗೆ ಇಸ್ರೇಲ್ ಜತೆ ಎಲ್ಲಾ ರೀತಿಯ ಸಂಬಂಧ ಕಡಿದುಕೊಳ್ಳುವದರ ಬಗ್ಗೆ ಪ್ರಚಾರ–ಪ್ರಕ್ಷೋಭೆ ಇದರ ಭಾಗವಾಗಬೇಕು.



20 ಲಕ್ಷ ಪ್ಯಾಲೇಸ್ತೀನ್ನರ ನರಮೇಧ

19ನೇ ಶತಮಾನದಿಂದಲೂ ಯುರೋಪಿನಲ್ಲಿ ಇದ್ದ ಯೆಹೂದಿ–ದ್ವೇಷಎರಡನೇ ಮಹಾಯುದ್ಧದ ಅವಧಿಯಲ್ಲಿ ತಾರಕಕ್ಕೇರಿ 60 ಲಕ್ಷ ಯೆಹೂದಿಗಳ ಮಾರಣಹೋಮವಾಗಿತ್ತು. ಇಸ್ರೇಲಿ ದೇಶವನ್ನು ಈ ನೆಲೆಯಲ್ಲಿ ಸಮರ್ಥಿಸುವ ಉಗ್ರಗಾಮಿ ಜಿಯೋನಿಸ್ಟ್ ಚಳುವಳಿ ಮತ್ತು ಅದರ ವಾರಸುದಾರ ಇಸ್ರೇಲಿ ಸರಕಾರ ಹಾಗೂ ಅದರ ಬೆಂಬಲಿಗರು, ಪ್ಯಾಲೇಸ್ತೀನ್ನರ ಮೇಲೆ ಅದೇ ರೀತಿಯ ನರಮೇಧ ನಡೆಸುತ್ತಿದ್ದಾರೆ ಎಂಬುದು ಇತಿಹಾಸದ ವ್ಯಂಗ್ಯ.





ಒಂದು ಮಾನವ ಹಕ್ಕುಗಳ ಸಂಘಟನೆಯ ಅಂದಾಜು ಪ್ರಕಾರ 1936ರಿಂದ ಈವರೆಗೆ 20 ಲಕ್ಷ ಪ್ಯಾಲೆಸ್ಟಿನ್ನರು ಜಿಯೋನಿಸ್ಟರ, ಇಸ್ರೇಲಿ ಸರಕಾರದ ಹಾಗೂ ಅವರ ಬೆಂಬಲಿಗರ ದಾಳಿ ಹಾಗು ಇತರ ಕುಕೃತ್ಯಗಳಿಂದ ಸತ್ತಿದ್ದಾರೆ. ಒಂದು ಲಕ್ಷ ಯುದ್ಧ ದಂಗೆಗಳಲ್ಲಿ ನೇರ ಹಿಂಸಾಚಾರದಿಂದ. ಇನ್ನುಳಿದವರು ನಿರಾಶ್ರಿತರಾಗಿ ಅನುಭವಿಸಿದ ಪರೋಕ್ಷ ಹಿಂಸಾಚಾರಗಳಿಂದ – ತೀವ್ರವಾಗಿ ಗಾಯಗೊಂಡವರಿಗೆ ಚಿಕಿತ್ಸೆ ಸಿಗದೆ, ಆಕ್ರಮಿತ ಪ್ರದೇಶಗಳಲ್ಲಿ ಮತ್ತು ನಿರಾಶ್ರಿತರ ಶಿಬಿರಗಳಲ್ಲಿ ದಿಗ್ಬಂಧನ ಮುಂತಾದ ಕಾನೂನುಬಾಹಿರ ಕ್ರಮಗಳಿಂದ ಆಹಾರ ಮುಂತಾದ ಮೂಲಭೂತ ಮಾನವ ಆವಶ್ಯಕತೆಗಳು ಸಿಗದೆ ಇತ್ಯಾದಿ ನರಳಿ ನರಳಿ – ಸತ್ತವರು. ಒಟ್ಟು 70 ಲಕ್ಷ ಪ್ಯಾಲೆಸ್ಟಿನ್ನರುನಿರಾಶ್ರಿತರಾದರು. ಆಕ್ರಮಿತ ಪ್ಯಾಲೆಸ್ಟಿನ್ ನಲ್ಲಿ ಸುಮಾರು 41 ಲಕ್ಷ ಜನ ಎಲ್ಲಾ ಮಾನವ ಹಕ್ಕುಗಳಿಂದ ವಂಚಿತರಾದವರು. 9 ಲಕ್ಷ ಮಕ್ಕಳು ಗಾಜಾ ಎಂಬ ದೊಡ್ಡ 'ಹಿಟ್ಲರನ ಯಹೂದಿ ಕ್ಯಾಂಪು'ಗಳನ್ನು ನೆನಪಿಗೆ ತರುವ ಮೆಗಾ ಕ್ಯಾಂಪಿನಲ್ಲಿ ಬಂಧಿತರಾಗಿದ್ದಾರೆ.

ಪುಟ 10ನೋಡಿ



ಪ್ಯಾಲೆಸ್ತೀನ್ ವಿಮೋಚನಾ ಹೋರಾಟ

ಪುಟ 9 ರಿಂದ

ಹತ್ತಿತ್ತು. ಅವು ಪಿ.ಎಲ್.ಓ.ವನ್ನು ವಿರೋಧಿಸುತ್ತಾ, ದ್ವೇಷಿಸುತ್ತಾ ಅವುಗಳ ಜತೆ ಪೈಪೋಟಿಗೆ ಇಳಿದಿದ್ದವು. ಅವುಗಳಿಗೆ ಲೆಬನಾನಿನ ಇಸ್ಲಾಮಿಕ್ ಗುಂಪುಗಳ ಬೆಂಬಲವೂ ಇತ್ತು. ಸೆಕ್ಯುಲರ್ ಪಿ.ಎಲ್.ಓ.ವನ್ನು ಮಣಿಸುವುದು ಅಮೆರಿಕ–ಇಸ್ರೇಲಿ ತಂತ್ರವೂ ಆಗಿತ್ತು. ಈ ಹೊತ್ತಿಗೆ ಪಿ.ಎಲ್.ಓ.ದ ಮುಖ್ಯ ಭಾಗವಾದ ಫತಾ ಗುಂಪಿನ ಸಮರಶೀಲತೆಯೂ ಇಳಿದಿತ್ತು.

ಮೊದಲ ಇಂತಿಫದಾದ ವೈಫಲ್ಯದ ನಂತರ ಅರಾಫತ್ ಮತ್ತು ಫತಾ ರಹಸ್ಯ ಮಾತುಕತೆಗಳನ್ನು ನಡೆಸಿ 1993 ಓಸ್ಲೊ ಒಪ್ಪಂದ ಆಯಿತು. ಹೆಸರಿಗೆ ಪಿ.ಎಲ್.ಓ. ಪ್ಯಾಲೆಸ್ತೀನಿ ಪ್ರದೇಶಗಳಿಗೆ 'ಪ್ಯಾಲೆಸ್ತೀನಿ ಪ್ರಾಧಿಕಾರ' (ಅಥವಾ ಸರಕಾರ) ಆಯಿತು. ಆದರೆ ಇಸ್ರೇಲ್ ಓಸ್ಲೊ ಒಪ್ಪಂದದ ಮುಖ್ಯ ಭಾಗವಾದ ಪ್ಯಾಲೆಸ್ತೀನಿ ಪ್ರದೇಶಗಳಿಂದ ಯಹೂದಿ ವಸತಿ ತೆರವು ಆರಂಭಿಸಲೇ ಇಲ್ಲ. ಬದಲಾಗಿ ಹೆಚ್ಚೆಚ್ಚು ವಸತಿಗಳು ಬಂದವು. ಇದರಿಂದ ಮುಂದೆ ಎರಡನೇ ಇಂತಿಫದಾ ಆರಂಭವಾಯಿತು. ಆದರೆ 'ಪ್ಯಾಲೆಸ್ತೀನಿ ಪ್ರಾಧಿಕಾರ' ಮತ್ತು ಪಿ.ಎಲ್.ಓ. (ಅದರಲ್ಲೂ ಪ್ರಮುಖ ಫತಾ ಗುಂಪಿನ)ರಾಜಕೀಯ–ಮಿಲಿಟರಿ ಬಲ ಕಡಿಮೆಯಾಗುತ್ತಾ ಉಗ್ರ ಇಸ್ಲಾಮಿಕ್ ಗುಂಪುಗಳ ಅದರಲ್ಲೂ ಹಾಮಾಸ್‌ನ ಬಲ ಬೆಂಬಲ ಹೆಚ್ಚಾಗುತ್ತಾ ಹೋಯಿತು. ಎರಡನೇ ಇಂತಿಫದಾ ನಂತರ ಇಸ್ರೇಲ್ ಆರಂಭಿಸಿದ ದೀರ್ಘ ಎತ್ತರದ ಗೋಡೆ ನಿರ್ಮಾಣ ಪ್ಯಾಲೆಸ್ತೀನ್ನರನ್ನು ಇನ್ನಷ್ಟು ಕೆರಳಿಸಿತು. 2006ರಲ್ಲಿ ನಡೆದ ಚುನಾವಣೆಯಲ್ಲಿ ಹಾಮಾಸ್ ಗಾಜಾ ಪಟ್ಟಿಯಲ್ಲಿ ಚುನಾವಣಾ ಗೆಲುವಿನ ನಂತರ ಇಸ್ರೇಲ್ ಗಾಜಾದ ಮೇಲೆ ಭೀಕರ ದಾಳಿಗಳ ಸರಣಿಯನ್ನೇ ಆರಂಭಿಸಿದೆ.

ಸನ್ನಿವೇಶ ಎಷ್ಟೇ ಪ್ರತಿಕೂಲವಾಗಿದ್ದರೂ ಪ್ಯಾಲೆಸ್ತೀನ್ನರ ವಿಮೋಚನಾ ಹೋರಾಟ ಮುಂದುವರೆದಿದೆ. ಅದಕ್ಕೆ ಇಸ್ರೇಲಿ ಗೋಡೆ ಮೇಲಿನ ಗೋಡೆ ಕಲಾಕೃತಿಗಳೇ ಸಾಕ್ಷಿ.

'ಗಾಜಾ ನರಮೇಧ 2014'

ಪುಟ 9 ರಿಂದ


ಗಾಜಾ ಪಟ್ಟಿ ಪ್ರದೇಶಕ್ಕೆ ಹೋಗುವುದು ಬರುವುದು 1991ರಿಂದಲೇತೀವ್ರ ಇಸ್ರೇಲಿ ನಿರ್ಬಂಧಕ್ಕೆ ಒಳಗಾಗಿದೆ. 2007ರಿಂದ ಪೂರ್ಣ ದಿಗ್ಬಂಧನಕ್ಕೆ ಒಳಗಾಗಿದೆ. 2008ರಿಂದ ಮೂರು ಬಾರಿ ಇಸ್ರೇಲಿ ಮಿಲಿಟರಿ ದಾಳಿಗೆ ಒಳಗಾಗಿದೆ. ಜುಲೈ–ಅಗಸ್ಟ್ 2014ರಲ್ಲಿ 53 ದಿನಗಳ ಕಾಲ ನಡೆದ ದಾಳಿ ಅತ್ಯಂತ ಭೀಕರವಾದ್ದು. ಗಾಜಾದ 365 ಚ.ಕಿ.ಮಿ. ಪ್ರದೇಶದಲ್ಲಿ ವಾಸಿಸುವ 17 ಲಕ್ಷ ಜನರಲ್ಲಿ 14 ವರ್ಷಕ್ಕಿಂತ ಕಡಿಮೆ ಇರುವ ಮಕ್ಕಳು ಶೇ. 43 ಇದ್ದಾರೆ. ಶೇ. 38 ಬಡತನದ ಕೆಳಗೆ ಜೀವಿಸುವವರು.

2014ರ 53 ದಿನಗಳ 6 ಸಾವಿರ ಇಸ್ರೇಲಿ ವಿಮಾನ ದಾಳಿಗಳಲ್ಲಿ ಹೊಡೆಯಲಾದ 50 ಸಾವಿರ ಶೆಲ್ಲುಗಳ ದಾಳಿಗೆ 2145 ಪ್ಯಾಲೆಸ್ತಿನ್ನರು ಸತ್ತರು. ಅವರಲ್ಲಿ ಶೇ. 30 ಮಕ್ಕಳು. 10 ಸಾವಿರಕ್ಕೂ ಹೆಚ್ಚು ಜನ ಗಾಯಗೊಂಡರು. 10 ಸಾವಿರಕ್ಕೂ ಹೆಚ್ಚು ಮನೆಗಳು ನಾಶವಾದವು. 50 ಸಾವಿರಕ್ಕೂ ಹೆಚ್ಚು ಮನೆಗಳು ತೀವ್ರವಾಗಿ ಹಾಳಾಗಿವೆ. ಶೇ. 30 ಶಾಲೆಗಳು ನಾಶವಾಗಿ 4.75 ಲಕ್ಷ ಮಕ್ಕಳ ಶಿಕ್ಷಣಕ್ಕೆ ಪೆಟ್ಟು ಬಿದ್ದಿದೆ. 17 ಆಸ್ಪತ್ರೆ 50 ಕ್ಲಿನಿಕ್ ಗಳ ನಾಶವಾಗಿವೆ. ಶೇ. 43 ಜನ ನಿರುದ್ಯೋಗಿಗಳಾಗಿದ್ದಾರೆ.

ಈ ದಾಳಿ ಗಾಜಾ ಪಟ್ಟಿಯಿಂದ ರಾಕೆಟ್ ದಾಳಿಯಿಂದ ಇಸ್ರೇಲ್ ಭದ್ರತೆಗೆ ಅಪಾಯ ಒಡ್ಡಿರುವ ಹಾಮಾಸ್ ಪಡೆಗಳನ್ನು ಮತ್ತು ಮಿಲಿಟರಿ ನೆಲೆಗಳನ್ನು ನಾಶ ಮಾಡಲು. ನಾಗರಿಕರು ಸತ್ತಿದ್ದರೆ ಅದು ಮಿಲಿಟರಿ ನೆಲೆಗಳ ಅಕ್ಕಪಕ್ಕದವು ಅಷ್ಟೆ, ಎಂದು ಇಸ್ರೇಲ್ ಹೇಳುತ್ತದೆ. ಆದರೆ ವಿಶ್ವಸಂಸ್ಥೆ ನಡೆಸುವ ಶಾಲೆಗಳ, ಆಸ್ಪತ್ರೆಗಳ, ನಿರಾಶ್ರಿತರ ಕ್ಯಾಂಪುಗಳ ಮೇಲೆ ಇಸ್ರೇಲ್ ದಾಳಿ ನಡೆಸಿದೆ. ಮೊದಲನೆಯದಾಗಿ ಹಾಮಾಸ್ ಗಳ ಈ ಅಪಾಯ ಎಷ್ಟು ನಿಜ? ಇಸ್ರೇಲಿದಾಳಿಯಲ್ಲಿ ಸತ್ತ ಪ್ಯಾಲೆಸ್ತಿನ್ನರಲ್ಲಿ 2145ರಲ್ಲಿ 1743 ನಾಗರಿಕರು. ಅವರಲ್ಲಿ 530 ಮಕ್ಕಳು. ಹಾಮಾಸ್ ದಾಳಿಯಲ್ಲಿ ಸತ್ತ 70 ಇಸ್ರೇಲಿಗಳಲ್ಲಿ ನಾಗರಿಕರ ಸಂಖ್ಯೆ ಕೇವಲ 6.

ಆ ಮೇಲೆ ವಿಶ್ವಸಂಸ್ಥೆ ನಡೆಸಿದ ತನಿಖಾ ಕಮಿಶನ್ ವರದಿಯಲ್ಲಿ 2014ರ ಗಾಜಾ ದಾಳಿಗಳಲ್ಲಿ ಇಸ್ರೇಲಿ ಸೈನ್ಯ ಯುದ್ಧಪರಾಧಗಳನ್ನು ಎಸಗಿದೆ ಎಂದು ಹೇಳಲಾಗಿದೆ.

ಪ್ಯಾಲೆಸ್ತೀನ್ ಬಗ್ಗೆ ಗಾಂಧೀಜಿ



ನನಗೆ ಯಹೂದಿಗಳ ಬಗ್ಗೆ ಸಹಾನುಭೂತಿಯಿದೆ. ..ಆದರೆ ನನಗೆ ಯಹೂದಿಗಳ ಬಗ್ಗೆ ಸಹಾನುಭೂತಿಯಿದೆ ಎಂದಾಕ್ಷಣ ಅವರ ಎಲ್ಲ ಬೇಡಿಕೆಗಳ ಬಗ್ಗೆ ಸಮ್ಮತಿಯಿದೆ ಎಂದರ್ಥವಲ್ಲ. ತಮಗೆ ಪ್ರತ್ಯೇಕ ರಾಷ್ಟ್ರಬೇಕೆನ್ನುವ ಅವರ ಬೇಡಿಕೆ ನನಗೆ ಎಂದೂ ಸರಿಯೆನಿಸುವುದಿಲ್ಲ. ಬೈಬಲ್ ಇತ್ಯಾದಿಯನ್ನು ಉದ್ಧರಿಸಿ ತಾವು ಪ್ಯಾಲೆಸ್ಟೀನಿಗೆ ಹಿಂದಿರುಗಬೇಕು ಎನ್ನುವ ಅವರವಾದ ಅರ್ಥವಿಲ್ಲದ್ದು. ಅದರ ಬದಲು ಉಳಿದವರಂತೆ ಯಹೂದಿಗಳು ಕೂಡ ತಾವು ಹುಟ್ಟಿ ಬೆಳೆದ ದೇಶವನ್ನೇ ತಮ್ಮದೆಂದು ಪರಿಗಣಿಸುವುದು ಅಗತ್ಯ.

ಪ್ಯಾಲೆಸ್ತೀನ್ ಅರಬ್ಬರಿಗೆ ಸೇರಿದ್ದು. ಇಂಗ್ಲಿಷ ಜನಕ್ಕೆ ಇಂಗ್ಲೆಂಡ್ ಸೇರಿದ ಹಾಗೆ, ಫ್ರೆಂಚರಿಗೆ ಫ್ರಾನ್ಸ್ ಇದ್ದ ಹಾಗೆ. ಯಹೂದಿಗಳನ್ನು ಅರಬ್ಬರ ಮೇಲೆ ಹೇರುವುದು ತಪ್ಪು ಮತ್ತು ಅದು ಅಮಾನವೀಯ ಕೂಡ. ಪ್ಯಾಲೆಸ್ಟೀನಿನಲ್ಲಿ ಇವತ್ತು ಏನಾಗುತ್ತಿದೆಯೋ ಅದಕ್ಕೆ ಯಾವ ನೈತಿಕ ಬೆಂಬಲವೂ ಇಲ್ಲ. ಯಹೂದಿಗಳ ಒತ್ತಾಯದಂತೆ ಅವರಿಗೆ ಒಂದು ಪ್ರತ್ಯೇಕ ರಾಷ್ಟ್ರನಿರ್ಮಾಣವಾದರೆ ಎರಡು ರಾಷ್ಟ್ರಗಳನ್ನು ಹೊಂದಿದ ಸೌಲಭ್ಯ ಅವರದಾಗುತ್ತದೆ – ತಾವು ಹುಟ್ಟಿ ಬೆಳೆದ ನಾಡು ಮತ್ತು ಹೊಸ ರಾಷ್ಟ್ರ. ಎರಡೂ ಕಡೆ ಸವಲತ್ತು ಪಡೆಯುವ ಅವಕಾಶ ಅವರಿಗೆ ದಕ್ಕುತ್ತದೆ. ಇದು ಸರಿಯಾದ ಮಾರ್ಗವಲ್ಲ. ಇದರಿಂದ ಅರಬ್ – ಯಹೂದಿ ಸಮಸ್ಯೆ ಬಗೆಹರಿಯುವುದಿಲ್ಲ.

26–11–38ರ 'ಹರಿಜನ' ಪತ್ರಿಕೆಯ ಲೇಖನದಿಂದ.

ಈ ವಾರ ಚರಿತ್ರೆಯಲ್ಲಿ

ಜನವರಿ 3, 1831

ಸಾವಿತ್ರಿಬಾಯಿ ಫುಲೆ ಜನ್ಮ ದಿನ


(1831–1897)

ಭಾರತದ ಪ್ರಥಮ ಮಹಿಳಾ ಶಿಕ್ಷಕಿ. ಮಣೆಯ ಭಿಡೆವಾಡಾ ದಲ್ಲಿ 1848ರಲ್ಲಿ ಮೊದಲ ಹೆಣ್ಣು ಮಕ್ಕಳ ಶಾಲೆ ಆರಂಭಿಸಿದವರು. 19ನೇ ಶತಮಾನದ ಸನಾತನ ಕಂದಾಚಾರಗಳಿಂದ ಗ್ರಸ್ತವಾಗಿದ್ದ ಭಾರತದಲ್ಲಿ ಮಹಿಳೆಯರ, ದಲಿತರ ಶಿಕ್ಷಣ, ಸಾಮಾಜಿಕ ಸುಧಾರಣೆಗಳಿಗೆ ಹೋರಾಡಿದ ಕ್ರಾಂತಿಕಾರಿ ಮಹಿಳೆ ಸಾವಿತ್ರಿ. ಸಾಮಾಜಿಕ ಸುಧಾರಣೆ, ಶಿಕ್ಷಣ, ಸಮಾಜ ಸೇವೆಗೆ ಪತಿ ಜ್ಯೋತಿಬಾ ಫುಲೆ ಯವರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದವರು. ವಿಧವಾ ಪದ್ಧತಿ, ಸತಿ ಪದ್ಧತಿ, ಬಾಲಹತ್ಯೆ, ಬಾಲ್ಯವಿವಾಹ, ಜಾತಿ ತಾರತಮ್ಯ, ಅಸ್ಪೃಶ್ಯತೆಗಳ ವಿರುದ್ಧ ಹೋರಾಟದಲ್ಲಿ ಅವಮಾನ, ಹಿಂಸಾಚಾರ, ದಾಳಿ, ಬಹಿಷ್ಕಾರಗಳನ್ನು ಲೆಕ್ಕಿಸದೆ ತಮ್ಮ ಜೀವನವನ್ನು ಮುಡಿಪಿಟ್ಟವರು. ಪ್ಲೇಗ್ ರೋಗಿಗಳ ಸೇವೆಯಲ್ಲಿ ತೊಡಗಿ ತಾವೇ ಪ್ಲೇಗಿಗೆ ಬಲಿಯಾದವರು.



ವಿಠ್ಠಲ ಮಲೆಕುಡಿಯರವರಿಗೆ ಸನ್ಮಾನಿಸುತ್ತಿರುವುದು

ಜನಪರ ಹೋರಾಟಗಾರರಿಗೆ ಸನ್ಮಾನ

ನಿಡುಮಾಮಿಡಿ ಮಠದ ಮಾನವ ಧರ್ಮ ಪೀಠದ ಬೆಳ್ಳಿಹಬ್ಬವನ್ನು ಬೆಂಗಳೂರಿನಲ್ಲಿ ಮೂರು ದಿನಗಳ ಕಾಲ (ಡಿಸೆಂಬರ್ 27–29) ಆಚರಿಸಲಾಯಿತು. ಬೆಳ್ಳಿಹಬ್ಬದ ಭಾಗವಾಗಿ ಕವಿಗೋಷ್ಠಿ, ಪುಸ್ತಕ ಬಿಡುಗಡೆ, ನಾಟಕ, ಗಾಯನಗಳಲ್ಲದೆ ಹಲವು ಪ್ರಗತಿಪರ ಜನಪರ ಲೇಖಕರು, ಕಲಾವಿದರು, ಬುದ್ಧಿಜೀವಿಗಳು, ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ಗಣ್ಯರು, ಜನಪರ ಹೋರಾಟಗಾರರನ್ನು ಸದ್ಭಾವನಾ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಸನ್ಮಾನಿತರಲ್ಲಿ ಮಾರುತಿ ಮಾನ್ಪಡೆ, ನೀಲಾ ಕೆ., ಕೆ.ಎಸ್.ಲಕ್ಷ್ಮೀ, ಮುನೀರ್ ಕಾಟಿಪಳ್ಳ, ಬಿ. ರಾಜಶೇಖರ ಮೂರ್ತಿ, ವಿಠ್ಠಲ ಮಲೆಕುಡಿಯ, ಸೇರಿದ್ದಾರೆ. ಸನ್ಮಾನಿತರಿಗೆ ಅಭಿನಂದನೆಗಳು.

ನಮ್ಮ ಚುರು-ಟ್ವೀಟ್

@cpimspeak

ಬೃಂದಾ ಕಾರಟ್ :

'ಮಹಿಳಾ–ಸ್ನೇಹಿ ಕೇರಳಕ್ಕಾಗಿ ಮಹಿಳೆಯರು' ಮಹಿಳೆಯರ ಅಭಿವೃದ್ಧಿಗಾಗಿ ವಿಶಿಷ್ಟವಾದ ಮಹಿಳಾ ಪಾರ್ಲಿಮೆಂಟ್ ಸಂಘಟಿಸಿದ್ದಾರೆ

– ಕೇರಳದಲ್ಲಿ ಹಲವು ಸ್ಥಳೀಯ ಪಂಚಾಯಿತ್ ಮಹಿಳಾ ಸದಸ್ಯರು ಸೇರಿದಂತೆ 4 ಸಾವಿರ ಮಹಿಳೆಯರು ಭಾಗವಹಿಸಿದ ಪಾರ್ಲಿಮೆಂಟ್ ನಲ್ಲಿ ಮಾತನಾಡುತ್ತಾ

ಮಾನವ ಡಿಎನ್‌ಎ ಮಾಹಿತಿ ಸಂಗ್ರಹಿಸುವ ಮಸೂದೆ ಜನತೆಯ ಮೇಲೆ ಬೇಹುಗಾರಿಕೆಗಾಗಿ ಮತೀಯ ಶಕ್ತಿಗಳ ಹೊಸ ಅಸ್ತ್ರ



– ಹರ್ಷ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು 'ಮಾನವ ಡಿಎನ್‌ಎ ವಿವರಗಳನ್ನು ಶೇಖರಿಸುವ ಮಸೂದೆ'ಯನ್ನು ಜಾರಿಗೆ ತರಲು ಪ್ರಯತ್ನ ನಡೆಸಿದೆ. ಸಾಮಾನ್ಯವಾಗಿ ಕ್ರಿಮಿನಲ್ ಅಪರಾಧ ಎಸಗಿರದ ವ್ಯಕ್ತಿಯೊಬ್ಬರ ಡಿಎನ್‌ಎ ಮಾದರಿಗಳನ್ನು ಅವರ ಒಪ್ಪಿಗೆ ಪಡೆದೇ ಪೊಲೀಸರು ಸಂಗ್ರಹಿಸಬೇಕು. ವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡುವ ಈ ಹೊಸ ಮಸೂದೆಯನ್ನು ಜಾರಿಗೆ ತಂದಲ್ಲಿ ಕ್ರಿಮಿನಲ್ ಅಪರಾಧಗಳಲ್ಲದೇ ಟ್ರಾಫಿಕ್ ಸಿಗ್ನಲ್ ಉಲ್ಲಂಘನೆಯಂಥಹ ಸಿವಿಲ್ ವ್ಯಾಜ್ಯ/ ಪ್ರಕರಣಗಳಲ್ಲೂ ಸಹ ಅಪರಾಧ ಎಸಗದಿದ್ದರೂ ಸಂಶಯಾಸ್ಪದ/ ಸಾಕ್ಷಿ ಎಂಬ ಕಾರಣಕ್ಕೆ ಅಂತಹ ವ್ಯಕ್ತಿಯ ಒಪ್ಪಿಗೆ ಪಡೆಯದೆ ಡಿಎನ್‌ಎ ಮಾದರಿ ಸಂಗ್ರಹಿಸುವ ಅಧಿಕಾರ ಪೊಲೀಸರಿಗೆ ಬರುತ್ತದೆ.

ಹಲವಾರು ಸಂದರ್ಭಗಳಲ್ಲಿ ಶಾಂತಿಯುತ ಪ್ರತಿಭಟನೆಗಳನ್ನೂ ಸಹ ಸರ್ಕಾರಗಳು ಕಾನೂನುಬಾಹಿರ ಎಂದು ಘೋಷಿಸುವುದನ್ನು ನೋಡಿದ್ದೇವೆ. ಅಂತಹ ಸಂದರ್ಭಗಳಲ್ಲಿ ರಾಜಕೀಯ ಕಾರ್ಯಕರ್ತರನ್ನು ಬಂಧಿಸಿದಾಗ ಅವರ ಡಿಎನ್‌ಎ ಮಾದರಿಯನ್ನು ಶೇಖರಿಸಿಡಬಹುದು. ಹೀಗೆ ಬೃಹತ್ ದತ್ತಾಂಶ ಯೋಜನೆಯನ್ನು ಸರ್ಕಾರವು ಹಮ್ಮಿಕೊಳ್ಳಲು ಹವಣಿಸಿದೆ. 'ರಾಷ್ಟ್ರೀಯ ಡಿಎನ್‌ಎ ದತ್ತಾಂಶ ಬ್ಯಾಂಕ್' ಎಂದು ಕರೆಯಲಾಗುವ ದತ್ತಾಂಶ ಕೋಶದಲ್ಲಿ ಭಾರತೀಯ ಪ್ರಜೆಗಳ ಡಿಎನ್‌ಎ ಮಾಹಿತಿಯನ್ನು ಶೇಖರಿಸುವುದಿದ್ದು, ಇದು ಅಪರಾಧ ಎಸಗುವವರನ್ನು ಗುರುತಿಸಲು ಸಹಾಯಕವಾಗುತ್ತದೆಂದು ಸರ್ಕಾರ ಹೇಳಿಕೊಳ್ಳುತ್ತಿದೆ. ವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವ ಇಂತಹ ಮಸೂದೆ ಜಾರಿಗೆ ಬಂದಲ್ಲಿ ಭಾರತವೂ ಕೂಡ ಪ್ರಜೆಗಳ ಮೇಲೆ ಬೇಹುಗಾರಿಕೆ ನಡೆಸುವಂತಹ ಅಮೇರಿಕಾ ಮತ್ತು ಬ್ರಿಟನ್ ದೇಶಗಳ ಸಾಲಿಗೆ ಸೇರುತ್ತದೆ.

ಕೋಟ್ಯಾಂತರ ವ್ಯಕ್ತಿಗಳ ಕುರಿತಾದ ಮಾಹಿತಿಯನ್ನು ನಿರಂತರವಾಗಿ ಅಮೇರಿಕಾ ಸರ್ಕಾರವು ಹೇಗೆ ಕಲೆಹಾಕುತ್ತಿದ್ದೆಂಬುದನ್ನು ಪ್ರಸಿದ್ದ ಮಾಹಿತಿ ಸೋರಿಕೆದಾರ ಎಡ್ವರ್ಡ್ ಸ್ನೋಡನ್ 2013ರಲ್ಲಿ ಬಹಿರಂಗಪಡಿಸಿದ್ದರು. ಮೊಬೈಲ್ ಪೋನ್ ಬಳಕೆಯಿಂದ ಆರಂಭಿಸಿ ಬಳಕೆದಾರರ ಇಂಟರ್‌ನೆಟ್ ಛಾಟ್ ಗಳನ್ನು ಆಧರಿಸಿ ಅವರ ನೆಲೆ ಗುರುತಿಸಿ ಪ್ರತಿಯೊಬ್ಬ ವ್ಯಕ್ತಿಯ ಪ್ರತಿಯೊಂದು ಮಾಹಿತಿ ಮತ್ತು ಕಾರ್ಯದ ನಿಗಾ ಇಟ್ಟು ಅನುಸರಣೆ ಮಾಡುವಂಥಹ ಅತ್ಯಂತ ಶಕ್ತಿಯುತ ತಂತ್ರಜ್ಞಾನಗಳನ್ನು ಅಮೇರಿಕಾ ಮತ್ತು ಬ್ರಿಟನ್ ಸರ್ಕಾರಗಳು ಬಳಸುತ್ತಿರುವುದನ್ನು ಸ್ನೋಡನ್ ಜಗತ್ತಿಗೇ ಬಹಿರಂಗ ಪಡಿಸಿ ಎಚ್ಚರಿಸಿದ್ದರು. ಪ್ರತಿಯೊಬ್ಬ ವ್ಯಕ್ತಿಯ ಡಿಎನ್‌ಎ ವಿವರ ಕಲೆಹಾಕುವ ಕಾರ್ಯವು ಇದಕ್ಕಿಂತಲೂ ಆಘಾತಕಾರಿಯಾಗಿದೆ. ವ್ಯಕ್ತಿಯ ಡಿಎನ್‌ಎ ಅಂಶವು ಸಾಯುವ ತನಕ ಅಥವಾ ಸತ್ತ ನಂತರವೂ ಆ ವ್ಯಕ್ತಿಯಲ್ಲಿಯೇ ಉಳಿದಿರುತ್ತದೆ. ಡಿಎನ್‌ಎ ಒಂದು ಶಾಶ್ವತ ಜೈವಿಕ ಅಂಶವಾಗಿರುವುದರಿಂದ ಒಂದೇ ಒಂದು ಸಲ ವ್ಯಕ್ತಿಯೊಬ್ಬರ ಮಾದರಿ ಸಂಗ್ರಹಿಸಿ ಬೇಹುಗಾರಿಕೆ ಡಾಟಾಬೇಸ್ ನಲ್ಲಿ ಶೇಖರಿಸಿದರೆ ಸಾಕು ಜೀವನಪರ್ಯಂತ ಆ ವ್ಯಕ್ತಿ ಡಾಟಾಬೇಸ್ ಗುರುತಿನಲ್ಲಿರುವಂತಾಗುತ್ತದೆ. ಸರ್ಕಾರದ ಬಳಿ ನಮ್ಮ ವಿಳಾಸ ಸಹಿತ ವ್ಯವಹಾರಿಕ ವಿವರಗಳೆಲ್ಲ ಇರುವಂತೆಯೇ ಶರೀರದ ಒಳಗಿನ ವಿವರಗಳೂ ಸರ್ಕಾರದ ಕೈಸೇರುತ್ತವೆ. ಈ ಕಾಯಿದೆಯ ಕರಡನ್ನು 2012ರಲ್ಲಿ ಯುಪಿಎ ಸರ್ಕಾರವು ಸಿದ್ದಪಡಿಸಿದ್ದರೆ, ಇದನ್ನು ಜಾರಿಗೆ ತರಲು ಪ್ರಸಕ್ತ ಎನ್‌ಡಿಎ ಸರ್ಕಾರವು ವಿಶೇಷ ಆಸ್ಥೆ ವಹಿಸುತ್ತಿದೆ. ಬೃಹತ್ ಮಟ್ಟದಲ್ಲಿ ನಾಗರೀಕರ ಕುರಿತಾದ ಮಾಹಿತಿ ದತ್ತಾಂಶ ಕಲೆಹಾಕಲು ಸರ್ಕಾರಗಳು ವಿಜ್ಞಾನದ ಆವಿಷ್ಕಾರಗಳನ್ನು ಬಳಸಿಕೊಳ್ಳುತ್ತಿವೆ.

ಡಿಎನ್‌ಎ ವಿಜ್ಞಾನ :

ನಮ್ಮ ದೇಹದ ಎಲ್ಲ ಜೀವಕೋಶಗಳಲ್ಲೂ



ಅಡಕವಾಗಿರುವ ಮೂಲ ಜೈವಿಕ ಮಾಹಿತಿಯ ಇಟ್ಟಿಗೆಯೇ ಡಿಎನ್‌ಎ ಅರ್ಥಾತ್ ಡಿ ಆಕ್ಸಿ ರೈಬೋ ನ್ಯೂಕ್ಲಿಯಿಕ್ ಆಸಿಡ್ ಎನ್ನಬಹುದು. ಇವು ಪೀಳಿಗೆಯಿಂದ ಪೀಳಿಗೆಗೆ ಗುಣಲಕ್ಷಣಗಳನ್ನು ವರ್ಗಾಯಿಸುವ ವಂಶವಾಹಿ ಜೀವತಂತುಗಳು. ಪ್ರತಿಯೊಬ್ಬ ಮನುಷ್ಯನಲ್ಲಿ ತನ್ನದೇ ವಿಭಿನ್ನ ಗುಣಲಕ್ಷಣಗಳುಳ್ಳ ಡಿಎನ್‌ಎ ಇರುತ್ತದೆ. ಡಿಎನ್‌ಎ ಅಣುಗಳು ನ್ಯೂಕ್ಲಿಯೋಟೈಡ್ ಎಂಬ ರಾಸಾಯನಿಕಗಳಿಂದಾಗಿದ್ದು ನಿರ್ದಿಷ್ಟ ವ್ಯಕ್ತಿಯ ಗುಣಲಕ್ಷಣಗಳನ್ನು ನಿರ್ಧರಿಸುತ್ತವೆ. ಡಿಎನ್‌ಎ ಮಾಹಿತಿಯು ವ್ಯಕ್ತಿಯಿಂದ ವ್ಯಕ್ತಿಗೆ ಸಣ್ಣ ಬದಲಾವಣೆ ಹೊಂದಿರುತ್ತದೆಯಾದ್ದರಿಂದ ಪ್ರತಿ ವ್ಯಕ್ತಿಯಲ್ಲೂ ವಿಭಿನ್ನ ಡಿಎನ್‌ಎ ಮಾಹಿತಿಯಿರುತ್ತದೆ. ಇದರಿಂದಾಗಿಯೇ ಡಿಎನ್‌ಎ ವಿವರವನ್ನು ಡಿಎನ್‌ಎ ಫಿಂಗರ್ ಪ್ರಿಂಟ್ ಎಂದೂ ಕರೆಯುತ್ತಾರೆ. ನ್ಯೂಕ್ಲಿಯೋಟೈಡ್ ಎಂಬ ರಾಸಾಯನಿಕಗಳ ಸರಳ ಸರಣಿಗಳನ್ನು ದಾಖಲು ಮಾಡುವ ಮೂಲಕ ವ್ಯಕ್ತಿಯೊಬ್ಬರ ಡಿಎನ್‌ಎ ಪ್ರೊಫೈಲ್ ಸಿದ್ದಪಡಿಸಲಾಗುತ್ತದೆ.

ಇತ್ತೀಚಿನ ವಿಧಾನದಲ್ಲಿ ವ್ಯಕ್ತಿಯೊಬ್ಬರ ಡಿಎನ್‌ಎ ನಲ್ಲಿ 17 ನಿರ್ದಿಷ್ಟ ನೆಲೆಗಳನ್ನು ಗುರುತಿಸಿ, ಪ್ರತಿಯೊಂದು ಭಾಗದಲ್ಲೂ ನ್ಯೂಕ್ಲಿಯೋಟೈಡ್ ಸರಣಿಗಳನ್ನು ದಾಖಲು ಮಾಡಿಕೊಳ್ಳಲಾಗುತ್ತದೆ. ಇವಿಷ್ಟೂ ನೆಲೆಗಳು ವ್ಯಕ್ತಿಯಿಂದ ವ್ಯಕ್ತಿಗೆ ಸಂಪೂರ್ಣ ಭಿನ್ನವಿರುವುದರಿಂದ ಇಬ್ಬರು ವ್ಯಕ್ತಿಗಳ ಒಂದೇ ಸರಣಿಯನ್ನು ಹೊಂದಿರುವ ಸಾ ಧ್ಯತೆ ಒಂದು ಲಕ್ಷ ಕೋಟಿಯಲ್ಲಿ ಒಂದು ಪ್ರಕರಣ ಮಾತ್ರ! ಅಪರಾಧ ನಡೆದ ಸ್ಥಳದಲ್ಲಿ ಅಪರಾಧಿಗಳು ಬಿಟ್ಟು ಹೋಗಿರಬಹುದಾದ ಚರ್ಮ, ರಕ್ತದ ಕಲೆ, ಕೂದಲು, ಜೊಲ್ಲು, ವೀರ್ಯ, ಇತ್ಯಾದಿ ಮಾದರಿಗಳಲ್ಲಿನ ಡಿಎನ್‌ಎ ಯನ್ನು ಅಪರಾಧಿಗಳ ಡಿಎನ್‌ಎ ಜೊತೆ ಹೋಲಿಸಿ ಅಪರಾಧಿಗಳ ಪತ್ತೆ ಹಚ್ಚಲು ಡಿಎನ್‌ಎ ಪ್ರೊಫೈಲಿಂಗ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಯಿತು.

ಈ ತಂತ್ರಜ್ಞಾನದ ದುರ್ಬಳಕೆ ಮತ್ತು ದೋಷಗಳು:

ಡಿಎನ್‌ಎ ಪ್ರೊಫೈಲಿಂಗ್ ತಂತ್ರಜ್ಞಾನದಲ್ಲಿ ದೋಷವಿಲ್ಲದಿದ್ದರೂ, ಈ ತಂತ್ರಜ್ಞಾನವನ್ನು ಬಳಸುವಾಗ ದೋಷಗಳು ಸಂಭವಿಸುವ ಸಾಧ್ಯತೆಗಳಿವೆ. ಮೊದಲಿಗೆ ಡಿಎನ್‌ಎ ಮಾದರಿ ಕಲೆಹಾಕುವಾಗ ಅಪರಾಧಿಗಳ ಡಿಎನ್‌ಎ ಮಾದರಿಗಳು ಮಾತ್ರವೇ ಇರುತ್ತವೆಂದು ಹೇಳಲಾಗದು. ಏಕೆಂದರೆ, ಪ್ರತಿಯೊಂದು ಚಟುವಟಿಕೆಯಲ್ಲೂ ನಾವು ಕೂದಲು, ಉಗುಳು, ಗಾಯದಿಂದಾಗಿ ರಕ್ತ, ಇತ್ಯಾದಿಗಳನ್ನು ಹೊರಚೆಲ್ಲಿತ್ತಿರುತ್ತೇವೆ. ಇದು ನಮ್ಮ ಅರಿವಿಗೇ ಬಾರದೆ ನಡೆಯುತ್ತಿರುತ್ತದೆ. ಅಪರಾಧ ಸ್ಥಳದಲ್ಲಿ ಸಂಶಯ ಪಡುವವರ ಡಿಎನ್‌ಎ ಮಾದರಿಯೂ ಇರಬಹುದು, ಜೊತೆಗೆ ಈ ಘಟನೆಗೆ ಸಂಬಂಧಿಸದೇ ಇರುವವರ ಮಾದರಿಯೂ ಕೂಡ ಇರಬಹುದು. ಹೀಗಾಗಿ ಮಾದರಿ ಕಲೆಹಾಕುವ ಹಂತದಲ್ಲೇ ಮಾದರಿಯು ದೋಷ ಪೂರಿತ ವಾಗಿರುತ್ತದೆ.

ಡಿಎನ್‌ಎ ಸಾಕ್ಷ್ಯವು ದೋಷಪೂರಿತ ಮಾದರಿಯಿಂದಾಗಿ ಹಳಿತಪ್ಪುವ ಸಂಭವವೂ ಇರುವುದನ್ನು ಕೆಲಪ್ರಕರಣಗಳು ತೋರಿಸಿವೆ. ಕಳ್ಳತನ ಮತ್ತು ಕೊಲೆಯಂಥಹ ಅಪರಾಧಗಳಲ್ಲಿ ಭಾಗಿಯಾಗಿದ್ದಾರೆನ್ನಬಹುದಾದ ಡಿಎನ್‌ಎ ಪರಿಶೀಲಿಸಿದಾಗ ಸಂಶಯಾಸ್ಪದ ಅಪರಾಧಿಗಳು ಮತ್ತೊಂದು ದೇಶದಲ್ಲಿ ಇರುವುದರ ಕುರಿತು ಆಸ್ಟ್ರಿಯಾ, ಜರ್ಮನಿ ಮತ್ತು ಫ್ರಾನ್ಸ್ ದೇಶಗಳ ಪತ್ತೆದಾರಿಗಳು ಒಂದೊಮ್ಮೆ ತಲೆಕೆಡಿಸಿಕೊಂಡಿದ್ದರು. ಆದರೆ ನಂತರ ತಿಳಿದದ್ದು, ಫ್ರಾನ್ಸ್ ದೇಶದ ಹತ್ತಿ ತಯಾರಿಕಾ ಕಾರ್ಖಾನೆಯಿಂದ ಕಾರ್ಮಿಕನ ಡಿಎನ್‌ಎ ಮಾದರಿಯು ಹತ್ತಿಯೊಂದಿಗೆ ಕಲೆತು ಆಸ್ಟ್ರಿಯಾದಲ್ಲಿ ಅಪರಾಧ ನಡೆದ ಸ್ಥಳದಲ್ಲಿ ದೊರೆತು ತನಿಖೆಯನ್ನು ನಿಗೂಢಗೊಳಿಸಿತ್ತು!

ಡಿಎನ್‌ಎ ಮಾದರಿ ಶೇಖರಿಸುವ ಕಾರ್ಯವನ್ನು ಕೇವಲ ಸೀಮಿತ ಪ್ರಕರಣಗಳಲ್ಲಿ ಮಾತ್ರವೇ ಮಾಡದೇ ಇಡೀ ದೇಶದ ಕೋಟ್ಯಾಂತರ ಜನರಿಗೆಲ್ಲ ಅನ್ವಯಿಸಿದಾಗ ತಪ್ಪುಗಳು/ ದೋಷಗಳು ಅಗಾಧ ಸಂಖ್ಯೆಯಲ್ಲಿ ದ್ವಿಗುಣಗೊಳ್ಳುತ್ತವೆ.

ಡಿಎನ್‌ಎ ಮಾದರಿ ಸಂಗ್ರಹಣೆಯ ಉಪಯೋಗ:

ಹೊಸ ಕಾಯಿಲೆಗಳನ್ನು ಕಂಡುಹಿಡಿಯಲು ಡಿಎನ್‌ಎ ಮಾದರಿಗಳ ವಿಶ್ಲೇಷಣೆ ಸಹಾಯಕವಾಗುತ್ತದೆ ನಿಜ. ಉದಾಹರಣೆಗೆ, ಕೆಲವು ಕ್ಯಾನ್ಸರ್‌ಗಳು ಏಕೆ ಬರುತ್ತವೆಂದು ಇನ್ನು ತಿಳಿಯಲಾಗಿಲ್ಲ. ಇದನ್ನು ಪತ್ತೆ ಹಚ್ಚಲು ರೋಗಿಗಳ ಮತ್ತು ಸಂಬಂಧಿಕರ ಡಿಎನ್‌ಎ ವಿಶ್ಲೇಷಣೆ ಮತ್ತು ಸಂಶೋಧನೆ ಅತ್ಯವಶ್ಯ. ಆದರೆ ಪ್ರಸ್ತುತ ಮಸೂದೆಯನ್ನು ಆರೋಗ್ಯ ಸಂಶೋಧನೆಗಾಗಿ ಬಳಸುತ್ತಿಲ್ಲವೆಂಬುದನ್ನು ಗಮನಿಸಬೇಕು.

ಬೇಹುಗಾರಿಕೆ ನಡೆಸಲು ಡಿಎನ್‌ಎ ಪ್ರೊಫೈಲಿಂಗ್ ದುರ್ಬಳಕೆ :

ಡಿಎನ್‌ಎ ಪ್ರೊಫೈಲಿಂಗ್ ತಂತ್ರಜ್ಞಾನವು ವ್ಯಕ್ತಿ ಅಥವಾ ಗುಂಪಿನ ವಿರುದ್ದ ತಾರತಮ್ಯ ಎಸಗಲು ಆಸ್ಪದ ನೀಡದ್ದರಿಂದ ಅದು ತಟಸ್ಥ ವಿಧಾನವೆನಿಸಿದೆ. ಆದರೆ, ಡಿಎನ್‌ಎ ಮಾದರಿಗಳನ್ನು ಸಂಗ್ರಹಿಸುವ ಏಜೆನ್ಸಿಗಳು ಮತ್ತು ಡಿಎನ್‌ಎ ಡಾಟಾಬೇಸ್ ಬಳಸುವವರು ನಿಷ್ಪಕ್ಷಪಾತಿಗಳೇನಲ್ಲ. ಅಪರಾಧ ನಿಯಂತ್ರಿಸುವ ಏಜೆನ್ಸಿಗಳು ಸಾಮಾನ್ಯವಾಗಿ ಪ್ರಭುತ್ವದ ಅಂಗಗಳೇ ಆಗಿವೆ. ಇವು ವರ್ಗ, ಜಾತಿ, ಲಿಂಗ, ಲೈಂಗಿಕತೆ, ಬುಡಕಟ್ಟು, ಇತ್ಯಾದಿ ಆಧಾರದಲ್ಲಿ ಜನತೆಯ ವಿವಿಧ ವಿಭಾಗಗಳ ಮೇಲೆ ಪ್ರಭುತ್ವದ ಪಕ್ಷಪಾತವನ್ನೇ ಅನುಸರಿಸುತ್ತವೆ. ಹೀಗಾಗಿ ಶ್ರೀಮಂತ ಸ್ತರಕ್ಕೆ ಸೇರದ ಸಾಮಾನ್ಯರು ಮತ್ತು ಅತಿಬಡವರ ಮೇಲೆ ಇದನ್ನು ದುರ್ಬಳಕೆ ಮಾಡಿಕೊಳ್ಳಲು ಸಾಧ್ಯವಿದೆ. ಇದರ ಜೊತೆಗೆ ವಿಧಾನದಲ್ಲಿನ ತಪ್ಪುಗಳೂ ಸೇರಿಕೊಂಡರೇ ಅಮಾಯಕರಿಗೆ ಬದುಕು ಸವೆಸುವುದು ಕತ್ತಿಯಂಚಿನ ದಾರಿಯಾಗುತ್ತದೆ.

ಪ್ರಸ್ತುತ ಕೇಂದ್ರ ಸರ್ಕಾರವು ಜಾರಿತರಲು ಉದ್ದೇಶಿಸಿರುವ ಮಸೂದೆಯಲ್ಲಿ ಧರ್ಮ ಮತ್ತು ಜಾತಿಯ ಹಿನ್ನೆಲೆಯನ್ನೂ ಕೂಡ ಕಲೆಹಾಕುವ ಪ್ರಸ್ತಾಪವಿದೆ. ಅಪರಾಧಿಗಳನ್ನು ಪತ್ತೆ ಹಚ್ಚಲು ಡಿಎನ್‌ಎ ಮಾದರಿಗಳು ಮಾತ್ರ ಸಾಕಲ್ಲವೇ? ಕೆಲ ಧರ್ಮ ಮತ್ತು ಜಾತಿಯ ಜನತೆ ಅಪರಾಧಿ ಕೃತ್ಯಗಳಲ್ಲಿ ಹೆಚ್ಚು ಭಾಗಿಯಾಗುತ್ತಾರೆಂದು ಸರ್ಕಾರ ಆಲೋಚಿಸುತ್ತಿದೆಯೇ? ಎಂಬ ಪ್ರಶ್ನೆಗಳು ಮೂಡುವುದು ಸಹಜವೇ.

ಅಲ್ಲದೇ, ಅಪರಾಧ ಸ್ಥಳಗಳಲ್ಲಿ ದೊರೆತ ಡಿಎನ್‌ಎ ಮಾದರಿಗೆ ಹೋಲಿಕೆಯಾಗುವ ಡಿಎನ್‌ಎ ಹೊಂದಿರುವ ವ್ಯಕ್ತಿ ಡಾಟಾಬೇಸ್ ನಲ್ಲಿ ಸಿಗದಿದ್ದಲ್ಲಿ ಅದಕ್ಕೆ ಹತ್ತಿರವಿರುವ ಡಿಎನ್‌ಎ ಹೊಂದಿರುವ ವ್ಯಕ್ತಿಗಳನ್ನು ಅಂದರೆ ಸಂಬಂಧಿಗಳನ್ನು ತನಿಖೆಗೆ ಒಳಪಡಿಸಲಾಗುತ್ತದೆ. ಇದಕ್ಕೆ ಮುಂದುವರೆದ ದೇಶಗಳಲ್ಲಿ 'ಕೌಟುಂಬಿಕ ಡಿಎನ್‌ಎ ಶೋಧನೆ' ಎನ್ನುತ್ತಾರೆ. ಅಪರಾಧ ಘಟನೆಗೆ ಸಂಬಂಧಪಡದೇ ಇದ್ದರೂ ಪೊಲೀಸರು ವಿಚಾರಣೆ ನಡೆಸುವ, ಕಿರುಕುಳ ನೀಡುವ ಸನ್ನಿವೇಶ ನಿರ್ಮಾಣ ಮಾಡುವುದರಿಂದ ಇದು ಬಡವರು ಮತ್ತು ದಮನಿತರನ್ನು ಹಿಂಸಿಸಲು ಸಹಜವಾಗಿ ಹಾದಿ ಮಾಡಿಕೊಡುತ್ತದೆ.

ಡಾಟಾಬೇಸ್ ನಲ್ಲಿ ಎಲ್ಲರನ್ನೂ ಒಳಗೊಳ್ಳಲು ವ್ಯಾಪಕ ಬಲೆ:

ಈ ಕಾಯಿದೆಯ ವ್ಯಾಪ್ತಿಯು ಕೇವಲ ಅಪರಾಧ ಕಾಯಿದೆಗಳಲ್ಲಿ ಬಂಧಿತರಾಗಿರುವವರ ಡಿಎನ್‌ಎ ಮಾದರಿಗಳನ್ನು ಮಾತ್ರವೇ ಕಲೆಹಾಕಲು ಸೀಮಿತವಾಗಿಲ್ಲ. ಇಡೀ ಜನತೆಯ ಮೇಲೆ ಇದನ್ನು ಪ್ರಯೋಗಿಸಲು ಉದ್ದೇಶಿಸಿರುವುದನ್ನು ಕಾಣಬಹುದಾಗಿದೆ. ಮೊದಲಿಗೆ ಐಪಿಸಿ ದಂಡ ಸಂಹಿತೆ ಮತ್ತು ಕೆಲವು ವಿಶೇಷ ಕಾಯಿದೆಗಳ ಉಲ್ಲಂಘನೆಗಳಿಗೆ ಅನ್ವಯಿಸುತ್ತದೆಂದು ಹೇಳಲಾಗು ತ್ತದೆಯಾದರೂ ಅಂತಿಮವಾಗಿ ವಿಶಾಲ ಜನಸಮೂಹವನ್ನು ಒಳಗೊಳ್ಳುವ ಉದ್ದೇಶವನ್ನು ಈ ಪಟ್ಟಿಯೇ ಹೇಳುತ್ತದೆ: ಅ) ಅನೈತಿಕ ಸಾಗಣೆ (ತಡೆಯುವುದು) ಕಾಯಿದೆ, 1956 ಆ) ಗರ್ಭಿಣಿಯ ವೈದ್ಯಕೀಯ ಕಾಯಿದೆ, 1971 ಇ) ಪ್ರಸವ–ಪೂರ್ವ ಮತ್ತು ಗರ್ಭ ತಪಾಸಣೆ ವಿಧಾನಗಳು (ಲಿಂಗ ನಿರ್ಧರಣೆ ನಿಷೇಧ) ಕಾಯಿದೆ, 1994 ಈ) ಕೌಟುಂಬಿಕ ಹಿಂಸೆಯಿಂದ ಮಹಿಳೆಯರಿಗೆ ರಕ್ಷಣೆ ಕಾಯಿದೆ, 2005 ಉ) ನಾಗರೀಕ ಹಕ್ಕುಗಳ ರಕ್ಷಣೆ ಕಾಯಿದೆ, 1955 ಊ) ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯಗಳನ್ನು ತಡೆಯುವುದು) ಕಾಯಿದೆ, 1989 ಎ) ಮೋಟಾರು ವಾಹನಗಳ ಕಾಯಿದೆ, 1988 ಏ) ಮಂಡಳಿಯು ಸೂಚಿಸಬಹುದಾದ ಇನ್ನಾವುದೇ ಇತರೆ ಕಾಯಿದೆಗಳನ್ನು ಇದರಡಿ ತರಬಹುದಾಗಿದೆ.

ಮಾನವ ಹಕ್ಕುಗಳ ಮೇಲೆ ಧಾಳಿ:

ಇತ್ತೀಚೆಗೆ ಆಧಾರ್ ಕಾರ್ಡ್‌ನ್ನು ಕಡ್ಡಾಯಗೊಳಿಸುವ ಕೇಂದ್ರ ಸರ್ಕಾರದ ಧೋರಣೆ ಕುರಿತು ಸುಪ್ರೀಂಕೋರ್ಟ್ ವಿಚಾರಣೆಯಲ್ಲಿ 'ಖಾಸಗಿ ಸ್ವಾತಂತ್ರ್ಯವು ಪ್ರಜೆಗಳ ಮೂಲಭೂತ ಹಕ್ಕಲ್ಲ' ಎಂದು ಕೇಂದ್ರ ಸರ್ಕಾರ ತಿಳಿಸಿರುವುದನ್ನು ನೆನಪಿಸಿಕೊಳ್ಳಬಹುದು. ಡಿಎನ್‌ಎ ಮಾದರಿಗಳು ಸೆಕ್ಯುರಿಟಿ ಏಜೆನ್ಸಿಗಳ ಕೈತಲುಪುವುದರಿಂದ, ಇದು ಸೋರಿಕೆಯಾಗಿ ದುರ್ಬಳಕೆಯಾಗುವ ಸಾಧ್ಯತೆಗಳಿರುತ್ತವೆ. ಅಪರಾಧ ಶೋಧನೆಯಲ್ಲದೆ ಇದರ ವ್ಯಾಪ್ತಿ ವಿಶಾಲವಾಗಿದೆ: ಅಪಘಾತ ಅಥವಾ ದುರ್ಘಟನೆಗೀಡಾದ ಗಾಯಾಳುಗಳನ್ನು ಕಂಡುಹಿಡಿಯಲು, ಕಾಣೆಯಾದ ವ್ಯಕ್ತಿಗಳನ್ನು ಗುರುತಿಸಲು, ಮತ್ತು ಸಿವಿಲ್ ವ್ಯಾಜ್ಯ ಮತ್ತು ಇತರೆ ಉಲ್ಲಂಘನೆಗಳು. ಡಿಎನ್‌ಎ ಮಾಹಿತಿಯನ್ನು ಜನತೆಯ ಅಂಕಿಅಂಶಗಳನ್ನು ಸಿದ್ದಪಡಿಸಲು,

ಪುಟ 14 ಕ್ಕೆ

ಮತ್ತೆ ಪೆಟ್ರೋಲ್, ಡೀಸೆಲ್ ಅಬಕಾರಿ ಸುಂಕ ಏರಿಕೆ ಬಳಕೆದಾರರನ್ನು ವಂಚಿಸುವ ಅದೇ ಚಾಳಿ–ಏಳನೇ ಬಾರಿ


ಜನವರಿ 2ರಂದು ಮೋದಿ ಸರಕಾರ ಮತ್ತೆ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕದರಗಳನ್ನು ಏರಿಸಿದೆ. ಪೆಟ್ರೋಲ್ ಮೇಲೆ ಲೀಟರಿಗೆ 37 ಪೈಸೆಯಷ್ಟು ಏರಿಸಿದರೆ, ಡೀಸೆಲ್ ಮೇಲೆ ಲೀಟರಿಗೆ 2ರೂ.ನಷ್ಟು ಏರಿಸಿದೆ. ಕೇವಲ 15 ದಿನಗಳ ಹಿಂದೆ, ಅಂದರೆ ಡಿಸೆಂಬರ್ 16ರಂದು ಅನುಕ್ರಮವಾಗಿ 30 ಪೈಸೆ ಮತ್ತು 1.17ರೂ. ಏರಿಸಿ 2500ಕೋಟಿ ರೂ.ಗಳನ್ನು ಬಳಕೆದಾರರಿಂದ ಕಿತ್ತುಕೊಳ್ಳಲಾಗಿತ್ತು. ಈಗ ಮತ್ತೆ ಸುಮಾರು 4380ಕೋಟಿ ರೂ.ಗಳನ್ನು ಬಳಕೆದಾರರ ಜೇಬಿಗೆ ಹೋಗದಂತೆ ತಪ್ಪಿಸಿ ಬಾಚಿಕೊಳ್ಳಲಾಗಿದೆ.

ಈ ಅಬಕಾರಿ ಸುಂಕ ಏರಿಕೆಯಿಂದಾಗಿ ಪೆಟ್ರೋಲ್, ಡೀಸೆಲ್ ಬೆಲೆಗಳು ಏರುವುದಿಲ್ಲ ಎಂದು ಸರಕಾರದ ಉದಾರತೆಯನ್ನು ಪ್ರದರ್ಶಿಸಲಾಗಿದೆ, ಅಲ್ಲದೆ ಹಿಂದಿನ ಬಾರಿಯಂತೆ ಹಿಂದಿನ ದಿನ , ಅಂದರೆ ಜನವರಿ 1ರಂದು ಪೆಟ್ರೋಲ್ , ಡೀಸೆಲ್ ಬೆಲೆಗಳಲ್ಲಿ ತುಸು ಇಳಿಕೆ ಮಾಡಲಾಗಿತ್ತು. ಇಲ್ಲಿಯೂ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಗಳಲ್ಲಿ ಆದ ಇಳಿಕೆಯ ಒಂದು ಸಣ್ಣ ಪ್ರಮಾಣವನ್ನು ಮಾತ್ರ ಬಳಕೆದಾರರಿಗೆ ಕೊಡಲಾಗಿದೆ. ಆದ್ದರಿಂದ ಅಬಕಾರಿ ಸುಂಕ ಏರಿಕೆಯಿಂದ ಬೆಲೆಯೇರದಿರುವುದು 'ಅಚ್ಛೇದಿನ್' ಸರಕಾರದ ಉದಾರತೆಯೇನೂ ಇಲ್ಲ, ವಂಚನೆಯನ್ನು ಮರೆಮಾಚುವ ಕಸರತ್ತು ಅಷ್ಟೇ ಎಂದು ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ಡಿಸೆಂಬರ್ 16ರಂದು ಸುಂಕ ಏರಿಸಿದ್ದಾಗ ಕಚ್ಚಾತೈಲದ ಬೆಲೆ ಬ್ಯಾರಲ್‌ಗೆ 34.50 ಡಾಲರಿಗೆ ಇಳಿದಿತ್ತು. ಜನವರಿ 1ರಂದು ಅದು 33.58ಡಾಲರಿಗೆ ಇಳಿಯಿತು ಜನವರಿ 5ರಂದು ಅದು ಮತ್ತಷ್ಟು ಇಳಿದು 32.51 ಡಾಲರ್ ಆಗಿದೆ.

ಇದು ಕಳೆದ 11 ವರ್ಷಗಳಲ್ಲೇ ಅತಿ ಕಡಿಮೆ ದರ ಎನ್ನಲಾಗಿದೆ. ಅದರೆ ಇದರ ಪ್ರಯೋಜನವನ್ನು ಭಾರತೀಯ ಬಳಕೆದಾರರಿಗೆ ತೈಲ ಮಾರಾಟ ಕಂಪನಿಗಳು ಕೊಟ್ಟಿಲ್ಲ. ಹಾಗೆ ಮನಸ್ಸಿಲ್ಲದ ಮನಸ್ಸಿನಿಮದ ಕೊಟ್ಟದ್ದರಲ್ಲೂ ಪೆಟ್ರೊಲ್‌ನಲ್ಲಿ ಲೀಟರಿನಲ್ಲಿ ರೂ.10.02ನ್ನು ಮತ್ತು ಡಿಸೆಲ್‌ನಲ್ಲಿ ರೂ. 9.97ನ್ನು ಮೋದಿ ಸರಕಾರ ಕಿತ್ತುಕೊಂಡಿದೆ.

ಇದೀಗ ಏಳನೇ ಸುಂಕ ಏರಿಕೆ, ಈ ಹಣಕಾಸು ವರ್ಷದಲ್ಲಿ ಮೂರನೇ ಏರಿಕೆ. ಈ ಮೂರು ಏರಿಕೆಗಳಿಂದ ಮೋದಿ ಸರಕಾರ ತನ್ನ ಬಜೆಟ್ ಖೋತಾ ತುಂಬಲು 10,000 ಕೋಟಿ ರೂ.ಗಳನ್ನು ಜನರಿಂದ ಕಿತ್ತುಕೊಂಡಿದೆ.



ವೇದರಾಜ ಎನ್.ಕೆ.

ಅಸಹಿಷ್ಣುತೆ- ಈ ವಾರ

ಮರಾಠಿ ಸಾಹಿತಿಗೆ ಕೊಲೆ ಬೆದರಿಕೆ

ಪ್ರಖ್ಯಾತ ಮರಾಠಿ ಸಾಹಿತಿ ಮತ್ತು ಮುಂಬರುವ ಅಖಿಲ ಭಾರತ ಮರಾಠೀ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಡಾ.ಶ್ರೀಪಾದ ಸಬ್ನಿಸ್ ಅವರಿಗೆ ಕೊಲೆ ಬೆದರಿಕೆಗಳು ಬಂದಿವೆ. ಇತ್ತೀಚಿನ ಒಂದು ಸಮಾರಂಭದಲ್ಲಿ ಅವರು 'ಮೋದಿಯವರು ಸದಾ ಕಾಲಕ್ಕೆ 2002ರ ಗುಜರಾತ್ ಹಿಂಸಾಚಾರದ ಕಳಂಕ ಹೊತ್ತವರು' ಎಂದೂ ತಾನು ಅನುಮೋದಿಸಲಾರದ ಪ್ರಧಾನಿ ಅವರು ಎಂದೂ ಹೇಳಿರುವುದಾಗಿ ವರದಿಯಾಗಿದೆ. ಅವರು ತನ್ನ ಈ ಟಿಪ್ಪಣಿಗೆ ಕ್ಷಮೆ ಕೇಳಬೇಕು, ಇಲ್ಲವಾದರೆ 'ನಿಮ್ಮ ಕೈಕಾಲುಗಳನ್ನು ಮುರಿಯಲಾಗುವುದು" ಎಂದೂ, ಇನ್ನು ಕೆಲವು ಮೋದಿ ಅಭಿಮಾನಿಗಳಿಂದ ಸಾಯಿಸುವ ಬೆದರಿಕೆಗಳೂ ಬಂದಿವೆ ಎಂದು ಈ ಸಾಹಿತಿ ಪೋಲೀಸ್ ಇಲಾಖೆಗೆ ದೂರು ನೀಡಿದ್ದಾರೆ. ಈ ಬಗ್ಗೆ ತಾನು ಮಹಾರಾಷ್ಟ್ರದ ಮುಖ್ಯಮಂತ್ರಿಗಳೊಡನೆ ಮಾತಾಡುವುದಾಗಿಯೂ ಅವರು ಹೇಳಿದ್ದಾರೆ.

ತಾನು ಒಂದು ನಿರ್ದಿಷ್ಟ ಸಂದರ್ಭದಲ್ಲಿ ಮೋದಿ ಮತ್ತು ಆರೆಸ್ಸೆಸ್ ಬಗ್ಗೆ ಟೀಕೆ ಮಾಡಿರುವುದು ನಿಜ, ಅದೇ ವೇಳೆಗೆ ಅವರು ಪಾಕಿಸ್ತಾನಕ್ಕೆ ಭೇಟಿ ನೀಡುವ ಧೈರ್ಯ ತೋರಿದ್ದಕ್ಕಾಗಿ ಮತ್ತು ಅಂತರ್ರಾಷ್ಟ್ರೀಯ ರಾಜತಾಂತ್ರಿಕತೆಯಲ್ಲಿ ಗೌತಮ ಬುದ್ಧ ಮತ್ತು ಮಹಾತ್ಮ ಗಾಂಧಿಯವರ ಪ್ರಸ್ತಾಪ ಮಾಡಿದ್ದಕ್ಕೆ ಪ್ರಶಂಸೆಯನ್ನೂ ಮಾಡಿದ್ದೇನೆ ಎಂದು ಡಾ.ಸಬ್ನಿಸ್ ಸ್ಪಷ್ಟೀಕರಣ ನೀಡಿದ್ದಾರೆ.

ಆದರೆ ಈ ಪ್ರಶಂಸೆ ಕೂಡ, ಮೋದಿಯವರ ಅಭಿಮಾನಿಗಳ 'ರೋಷ'ಕ್ಕೆ ಕಾರಣವಾಗಿರಬಹುದೇ? ಏಕೆಂದರೆ ಅವರ ಕಟ್ಟಾ ಬೆಂಬಲಿಗರಿಗೆ ' ಈ ಮೋದಿ ಮಾತುಗಳು ಅವರ 'ಮನದಾಳದ ಮಾತು'ಗಳಲ್ಲ ಎಂದು ಗೊತ್ತಿದ್ದರೂ ಅವನ್ನು ಅರಗಿಸಿಕೊಳ್ಳುವುದು ಬಹಳ ಕಷ್ಟವಾಗಿರಬೇಕು.

ಈ ನಡುವೆ ಬಿಜೆಪಿಯನ್ನು ಬೆಂಬಲಿಸುತ್ತಿರುವ ರಿಪಬ್ಲಿಕನ್ ಪಾರ್ಟಿಯ (ಅಂಬೇಡ್ಕರ್ ಸ್ಥಾಪಿಸಿದ ಪಕ್ಷ) ಅಠವಲೆ ಗುಂಪಿನ ಮುಖಂಡ ರಾಮದಾಸ ಅಠವಲೆ '2002 ಭಾರತದ ಪ್ರಜಾಪ್ರಭುತ್ವದ ಒಂದು ಕರಾಳ ಅಧ್ಯಾಯ' ಎಂದು ಒಪ್ಪಿಕೊಳ್ಳುತ್ತಲೇ,ಇದಕ್ಕೆ ಮೋದಿ ಕಾರಣರಲ್ಲ, ಅವರೊಬ್ಬ ಬಲವಾದ ಜಾತ್ಯಾತೀತ ಸ್ವಭಾವದವರು ಎಂದಿದ್ದಾರೆ! ಡಾ.ಸಬ್ನಿಸ್ ಇಂತಹ ಟೀಕೆಗಳನ್ನು ಮುಂದುವರೆಸಿದರೆ ತನ್ನ ಪಕ್ಷದ ಸದಸ್ಯರು ಮರಾಠಿ ಸಾಹಿತ್ಯ ಸಮ್ಮೇಳನವನ್ನು ಅಸ್ತವ್ಯಸ್ತಗೊಳಿಸಲು ಹಿಂಜರಿಯುವುದಿಲ್ಲ ಎಂದು 'ಎಚ್ಚರಿಸಿ'ದ್ದಾರೆ!

ರೈಲ್ವೇ ಇಲಾಖೆಗೆ 12,000 ಕೋಟಿ ರೂ. ಬಜೆಟ್ ಕಡಿತ –ಪ್ರಯಾಣ, ಸಾಗಾಣಿಕೆ ದರ ಏರಿಕೆಗೆ ಪೀಠಿಕೆ?

ರೈಲ್ವೆ ಇಲಾಖೆಗೆ 2015–16 ಹಣಕಾಸು ವರ್ಷದಲ್ಲಿ 40,000 ಕೋಟಿ ರೂ.ಗಳ ಬಜೆಟ್ ಬೆಂಬಲ ಘೋಷಿಸಲಾಗಿತ್ತು. ಇದುವರೆಗಿನ ಅತಿ ಹೆಚ್ಚು ಮೊತ್ತ ಇದಾಗಿದ್ದು, ತನ್ನ ಸಾಧನೆ ಎಂದೂ ಸರಕಾರ ಹೇಳಿಕೊಂಡಿತ್ತು. ಅದನ್ನೀಗ ಹಿಂದಿನ ಹಣಕಾಸು ವರ್ಷದ ಮಟ್ಟಕ್ಕೆ, ಅಂದರೆ 28,000ಕೋಟಿ ರೂ.ಗೆ ಇಳಿಸಲಾಗಿದೆ. ವಾಸ್ತವವಾಗಿ ಹಣದುಬ್ಬರವನ್ನು ಲೆಕ್ಕಕ್ಕೆ ತಗೊಂಡರೆ ಕಡಿತ ಮಾಡಲಾಗಿದೆ ಎಂದೇ ಅರ್ಥ.

ಇದಕ್ಕೆ ಹಣಕಾಸು ಇಲಾಖೆ ಕೊಟ್ಟಿರುವ ಕಾರಣ ರೈಲ್ವೆ ಇಲಾಖೆಯಲ್ಲಿ ಕೆಲಸದ ವೇಗ ಬಹಳ ಕಳಪೆಯಾಗಿದೆಯಂತೆ.

ಅಷ್ಟೇ ಅಲ್ಲ, 7ನೇ ವೇತನ ಆಯೋಗದ ಹೆಚ್ಚುವರಿ ಖರ್ಚನ್ನು ಭರಿಸಲು ಹಣಕಾಸು ಇಲಾಖೆಯಿಂದ ನೆರವನ್ನು ರೈಲ್ವೆ ಇಲಾಖೆ ಕೇಳಿದ್ದು, ಅದನ್ನು ಖಂಡತುಂಡವಾಗಿ ನಿರಾಕರಿಸಲಾಗಿದೆ ಎಂದು ಸ್ಕ್ರಾಲ್.ಇನ್ ವರದಿ ಮಾಡಿದೆ(ಜನವರಿ 6).

ಇದು ರೈಲ್ವೇ ಇಲಾಖೆಯನ್ನು ಬಹಳ ಕಷ್ಟದಲ್ಲಿ ಸಿಲುಕಿಸಿದೆ ಎಂದು ಈ ವರದಿ ಹೇಳುತ್ತದೆ. ಅದರ ಆದಾಯಗಳು ನಿರೀಕ್ಷಿತ ಮಟ್ಟದಲ್ಲಿ ಬಂದಿಲ್ಲ, ಜತೆಗೆ 7ನೇ ವೇತನ ಆಯೋಗದ ಶಿಫಾರಸಿನಂತೆ ನೌಕರರಿಗೆ ಸಂಬಳ ಕೊಡಲೂ ಅದರ ಬಳಿ ಹಣ ಇಲ್ಲವಂತೆ. ರೈಲ್ವೆ ಇಲಾಖೆ ಈ ವರ್ಷ 1ಲಕ್ಷ ಕೋಟಿ ರೂ.ಗಳನ್ನು ಖರ್ಚು ಮಾಡುವ ಅಂದಾಜು ಹಾಕಿತ್ತು. ಅದರೆ ಇದುವರೆಗೆ 9ತಿಂಗಳಲ್ಲಿ 44ಶೇ. ಮಾತ್ರ ಖರ್ಚು ಮಾಡಿದೆ, ಇನ್ನುಳಿದ ಮೂರು ತಿಂಗಳಲ್ಲಿ ಉಳಿದ ಹಣವನನು ಖರ್ಚು ಮಾಡಬಲ್ಲದೇ ಎಂಬ ಪ್ರಶ್ನೆಯನ್ನೆತ್ತಿಯೇ ಹಣಕಾಸು ಇಲಾಖೆ ಈ 12,000 ಕೋಟಿ ರೂ.ಗಳ ಕಡಿತ ಮಾಡಿದೆ ಎನ್ನಲಾಗಿದೆ. ಆದರೆ ರೈಲ್ವೆ ಇಲಾಖೆ ಈ ಹಣವನ್ನು ನೆಚ್ಚಿಕೊಂಡು ಉಳಿದ ಮೂರು ತಿಂಗಳಿಗೆ ಆಗಲೇ ಯೋಜನೆ ರೂಪಿಸಿರಬಹುದಾದ್ದರಿಂದ ಈ ಕಡಿತ ಅದರ ಹಣಕಾಸು ಕಷ್ಟಗಳನ್ನು ಉಲ್ಬಣಗೊಳಿಸಿದೆ.

ರೈಲ್ವೆ ಇಲಾಖೆ ಈ ಕಷ್ಟದಿಂದ ಹೊರಬರಲು ನೇರವಾಗಿ ಪ್ರಧಾನ ಮಂತ್ರಿಗಳ ಬಳಿಯೇ ಅಹವಾಲು ಒಯ್ಯಲಿದೆಯಂತೆ. ಅಗ್ಗ ಪ್ರಯಾಣದರ ಮತ್ತು ಸಾಗಾಣಿಕೆ ದರ ಇಟ್ಟಿರುವುದರಿಂದ ಹಣಕಾಸು ಇಲಾಖೆ ನೆರವು ಕೊಡಬೇಕೆಂದು ರೈಲ್ವೆ ಇಲಾಖೆಯ ವಾದವಾದರೆ, ರೈಲ್ವೆ ಇಲಾಖೆ ತನ್ನ ರೆವಿನ್ಯೂ ಆದಾಯದಿಂದ ನಿಭಾಯಿಸಬೇಕು, ಅಗತ್ಯವಿದ್ದರೆ ಸಂಪನ್ಮೂಲಗಳನ್ನು ತಾನೇ ಎತ್ತಬೇಕೆಂಬುದು ಹಣಕಾಸು ಇಲಾಖೆಯ ಸಲಹೆ.

ಬಹುಶಃ ಇದರ ಒಟ್ಟು ಫಲಿತಾಂಶವಾಗಿ ಮುಂದಿನ ತಿಂಗಳ ರೈಲ್ವೆ ಬಜೆಟಿನಲ್ಲಿ ಪ್ರಯಾಣ ಮತ್ತು ಸಾಗಾಣಿಕೆ ದರಗಳಲ್ಲಿ ಇನ್ನಷ್ಟು ಹೊರೆಗಳ 'ಒಳ್ಳೆಯ ದಿನ'ಗಳಿಗೆ ದೇಶದ ಜನತೆ ಸಿದ್ಧವಾಗಬೇಕಾದೀತು.

ಸಂಘ ಪರಿವಾರದ 'ವಿಜ್ಞಾನ ಭಾರತಿ' ಯ 'ಗಿನ್ನೆಸ್ ದಾಖಲೆ'ಗೆ ಪ್ರಶಸ್ತಿಯ ಪ್ರಸಂಗ

ಮೈಸೂರಿನಲ್ಲಿ ನಡೆದಿರುವ 105ನೇ ಭಾರತೀಯ ವಿಜ್ಞಾನ ಸಮ್ಮೇಳನದಲ್ಲಿ ಅದನ್ನು ಉದ್ಘಾಟಿಸಿದ ನಂತರ ಸಂಘ ಪರಿವಾರಕ್ಕೆ ಸೇರಿದ 'ವಿಜ್ಞಾನ ಭಾರತಿ'ಗೆ ಒಂದು ಪ್ರಶಸ್ತಿ ಕೊಡುವ ಯೋಜನೆಯಿತ್ತಂತೆ. ಆದರೆ ಉದ್ಘಾಟನೆ ಮಾಡಿದ ಪ್ರಧಾನ ಮಂತ್ರಿಗಳು ಪ್ರಶಸ್ತಿ ಕೊಡದೆ–ಯೇ ಹೊರಟು ಹೋದದ್ದು ಸಂಘ ಪರಿವಾರಕ್ಕೆ ಆಶ್ಚರ್ಯ, ಸಿಟ್ಟು ಎರಡೂ ತಂದಿದೆಯಂತೆ. 'ವಿಜ್ಞಾನ ಭಾರತಿ'ಯ ಮಹಾ ಕಾರ್ಯದರ್ಶಿ ನಂತರ ನೀಡಿದ ಹೇಳಿಕೆಯಲ್ಲಿ, 'ಅನನ್ಯ ಸಾಧನೆ' ಮಾಡಿರುವ ತಮ್ಮ ಸಂಸ್ಥೆಗೆ ಕೊನೆಯ ಗಳಿಗೆಯಲ್ಲಿ ಪ್ರಶಸ್ತಿ ಕೊಡದಿರುವುದು ತಮ್ಮ ಸಂಸ್ಥೆಯ ಮುಖಂಡರಿಗೆ ಮಾತ್ರವಲ್ಲ, 'ಇಡೀ ವಿಜ್ಞಾನ ಸಮುದಾಯ'ಕ್ಕೆ ಆಘಾತವುಂಟು ಮಾಡಿದೆ ಎಂದಿದ್ದಾರೆ.

ಈ 'ಅನನ್ಯ ಸಾಧನೆ'ಯಾದರೂ ಏನು? ಡಿಸೆಂಬರ್ 7, 2015ರಂದು ಈ ಸಂಸ್ಥೆ ದಿಲ್ಲಿಯ ಐಐಟಿಯ ಮೈದಾನದಲ್ಲಿ 2000 ವಿದ್ಯಾರ್ಥಿಗಳಿಗೆ ವಿಜ್ಞಾನ ತರಗತಿಯನ್ನು ಏರ್ಪಡಿಸಿತ್ತು. ಒಂದು ವಿಜ್ಞಾನ ಪ್ರಯೋಗವನ್ನು ಏಕಕಾಲದಲ್ಲಿ ಈ ವಿದ್ಯಾರ್ಥಿಗಳು ಮಾಡಿದರಂತೆ. ಇದು ಜಗತ್ತಿನಲ್ಲೇ ಅತಿ ದೊಡ್ಡ ಪ್ರದರ್ಶನವಂತೆ. ಈ ಹಿಂದೆ ಫೆಬ್ರುವರಿ 2015ರಲ್ಲಿ ಐರ್ಲೆಂಡಿನ ಬೆಲ್‌ಫಾಸ್ಟ್ ನಗರದಲ್ಲಿ 1339 ವಿದ್ಯಾರ್ಥಿಗಳ ಏಕಕಾಲದ ವಿಜ್ಞಾನ ಪ್ರಯೋಗ ಇದುವರೆಗಿದ್ದ ದಾಖಲೆಯಂತೆ. ಅದನ್ನು ಮುರಿದು ಗಿನ್ನೆಸ್ ದಾಖಲೆ ಪುಸ್ತಕ ಪ್ರವೇಶಿಸಿರುವುದೇ ಈ ಸಂಸ್ಥೆಯ 'ಅನನ್ಯ ಸಾಧನೆ'! ಈ ಪ್ರದರ್ಶನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಮಂತ್ರಿಗಳು ಮತ್ತು ಮಾನವ ಸಂಪನ್ಮೂಲ ಮಂತ್ರಿಗಳೂ ಹಾಜರಿದ್ದರಂತೆ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಮತ್ತು ಸಂಬಂಧಪಟ್ಟ ಸಮಿತಿಗಳು ಇದೊಂದು ವಿಶ್ವ ದಾಖಲೆ ಎಂದು ದೃಢೀಕರಿಸಿ ಈ ಸಾಧನೆಯನ್ನು ಭಾರತೀಯ ವಿಜ್ಞಾನ ಸಮ್ಮೇಳನದಲ್ಲಿ ಪ್ರಧಾನ ಮಂತ್ರಿಗಳು ಗೌರವಿಸುವ ಪ್ರಶಸ್ತಿ ನೀಡುವರು ಎಂದೂ ಹೇಳಲಾಗಿತ್ತಂತೆ.

ಆದರೆ ಹಾಗೆ ಆಗಲೇ ಇಲ್ಲ ಎಂಬ ಆಕ್ರೋಶ ಈ ಸಂಸ್ಥೆಯ ಮುಖಂಡರಿಗೆ. ಅದೇನೇ ಇರಲಿ, ಇಂತಹ ಪ್ರದರ್ಶನಗಳನ್ನು, ಇವೆಂಟ್‌ಗಳನ್ನು ಮುಕ್ತಮನದಿಂದ ಪ್ರೋತ್ಸಾಹಿಸುವ ಪ್ರಧಾನಿಗಳು ಹೀಗೇಕೆ ಮಾಡಿದರು, ಅದೂ ಸಂಘ ಪರಿವಾರದ ಒಂದು ಪ್ರಮುಖ ಅಂಗದ ವಿಷಯದಲ್ಲಿ, ಎಂಬ ಬಗ್ಗೆ ಊಹಾಪೋಹಗಳು ನಡೆದಿವೆ. ಕಳೆದ ವಿಜ್ಞಾನ ಸಮ್ಮೇಳನದಲ್ಲಿ ಗಣೇಶನ ಪ್ಲಾಸ್ಟಿಕ್ ಸರ್ಜರಿ ಇತ್ಯಾದಿ ಮಾತಾಡಿದ್ದು ದೊಡ್ಡ ವಿವಾದವಾದ ನಂತರ ಅಂತಹ ವಿವಾದ ಇನ್ನು ಬೇಡ, ಅದೂ ದಿಲ್ಲಿ ಮತ್ತು ಬಿಹಾರದ ಚುನಾವಣೆಗಳ ಅನುಭವಗಳ ನಂತರ ಬೇಡವೇ ಬೇಡ ಎಂದು ಅವರು ನಿರ್ಧರಿಸಿದರೇ? ಅಥವ ಇದನ್ನು ಸದ್ದಿಲ್ಲದೆ ಇತರರಿಂದ ಮಾಡಿಸುವ ಕಾರ್ಯತಂತ್ರವೇ?'

ಅದೇನೇ ಇರಲಿ, ಈ ಬಾರಿಯ ವಿಜ್ಞಾನ ಸಮ್ಮೇಳನದಲ್ಲೂ ಹುಸಿ ವಿಜ್ಞಾನದ ಮೂಲಕ ಕೇಸರೀಕರಣದ ಗಣೇಶನ ಪ್ಲಾಸ್ಟಿಕ್ ಸರ್ಜರಿತರಹ ಪ್ರಯತ್ನಗಳು ಮುಂದುವರೆದಿವೆ ಎಂದು ವರದಿಯಾಗಿದೆ. ಶಂಖ ಊದುವ ಮೂಲಕ ಫಿಟ್‌ನೆಸ್ ಮತ್ತು ಆರೋಗ್ಯದ ಸ್ವದೇಶೀ ಪರಂಪರೆ, ಮಹಾಪರಿಸರವಾದಿಯಾಗಿ ಭಗವಾನ್ ಶಿವ, ಹುಲಿಯ ಚರ್ಮದ ಮೇಲೆ ಕೂತು ಲೈಂಗಿಕ ತೃಷೆಯ ಮೇಲೆ ಹತೋಟಿ ಇತ್ಯಾದಿಗಳ ಕುರಿತಾದ ಲೆಕ್ಚರ್‌ಗಳು, ಮಹಾಪ್ರಬಂಧಗಳು ಈ ಬಾರಿಯ ವಿಶೇಷ!



ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ

ಆಮಿರ್ ಖಾನ್‌ಗೆ 'ಅತುಲ್ಯ ಭಾರತ' ನಿರಾಕರಣೆ

ಬಾಲಿವುಡ್‌ನ ಪ್ರಖ್ಯಾತ ವ್ಯಕ್ತಿ ಆಮಿರ್ ಖಾನ್ ಇನ್ನು ಭಾರತ ಪ್ರವಾಸೋದ್ಯಮ ಇಲಾಖೆಯ ಬ್ರಾಂಡ್ ರಾಯಭಾರಿ ಆಗಿರುವುದಿಲ್ಲವಂತೆ. ಪ್ರವಾಸೋದ್ಯಮ ಇಲಾಖೆಯ 'ಅತುಲ್ಯ ಭಾರತ' ಪ್ರಚಾರದ 'ಅತಿಥಿ ದೇವೋಭವ' ಸಾಮಾಜಿಕ ಜಾಗೃತಿಯ ಜಾಹೀರಾತುಗಳಲ್ಲಿ ಇನ್ನು ಆಮಿರ್ ಖಾನ್ ಕಾಣಿಸಿಕೊಳ್ಳುವುದಿಲ್ಲ. 'ಒಳ್ಳೆಯ ದಿನ'ಗಳು ಉತ್ಪಾದಿಸಿರುವ ಅಸಹಿಷ್ಣುತೆಯ ವಾತಾವರಣದಲ್ಲಿ ಇದೇನೂ ಅನಿರೀಕ್ಷಿತ ಸುದ್ದಿಯಲ್ಲ. ಆದರೆ ಇಲ್ಲಿಯೂ 'ಗುಡ್ ಗವರ್ನೆನ್ಸ್"(ಉತ್ತಮ ಆಡಳಿತ) ದ ಘೋಷಣೆಯ ಅಪಹಾಸ್ಯ ಮರುಕಳಿಸಿದೆ.

ಮಾಹಿತಿ ಹಕ್ಕಿನ ಅಡಿಯಲ್ಲಿ ಈ ಕುರಿತ ಪ್ರಶ್ನೆಗೆ ಉತ್ತರಿಸುತ್ತ ಪ್ರವಾಸೋದ್ಯಮ ಇಲಾಖೆ "ಮಾಧ್ಯಮಗಳಲ್ಲಿ ಕಾಣಿಸಿಕೊಂಡಿರುವ ಆಮಿರ್ ಖಾನ್ ಕುರಿತ ಕೆಲವು ವರದಿಗಳನ್ನು ಕುರಿತಂತೆ ಈ ವಿಷಯದಲ್ಲಿ ಇಲಾಖೆಯ ನಿಲುವಿನಲ್ಲಿ ಬದಲಾವಣೆ ಏನೂ ಇಲ್ಲ ಎಂದು ಸ್ಪಷ್ಟೀಕರಿಸುತ್ತೇವೆ"ಎಂದು ಹೇಳಿಕೆ ನೀಡಿತ್ತು. ಅಲ್ಲದೆ ಆಮಿರ್ ಖಾನ್ ಇರುವ ಸಾಮಾಜಿಕ ಜಾಗೃತಿ ಪ್ರಚಾರದ ಜಾಹೀರಾತುಗಳನ್ನು ತಯಾರಿಸುವ ಮೆಕಾನ್ ವರ್ಲ್ಡ್‌ವೈಡ್ ಕಂಪನಿಯೊಂದಿಗೆ ಪ್ರವಾಸೋದ್ಯಮ ಇಲಾಖೆ ಮಾಡಿಕೊಂಡಿರುವ ಕಾಂಟ್ರಾಕ್ಟ್ ಸದ್ಯಕ್ಕೆ ಇದೆ ಎಂದೂ ಅದು ಸ್ಪಷ್ಟಪಡಿಸಿತ್ತು.

ಆದರೆ 'ದಾದ್ರಿ ಖ್ಯಾತಿ'ಯ ಸಂಸ್ಕೃತ ಮಂತ್ರಿಗಳು ಕೊನೆಗೂ ಈ 'ಗೊಂದಲ'ವನ್ನು ಪರಿಹರಿಸಿದ್ದಾರೆ. ಮೆಕಾನ್‌ನೊಂದಿಗೆ ಕಾಂಟ್ರಾಕ್ಟ್ ಈಗಿಲ್ಲವಾದ್ದರಿಂದ ಆಮಿರ್ ಖಾನ್ ಈಗ ಪ್ರವಾಸೋದ್ಯಮ ಇಲಾಖೆಯ ಬ್ರಾಂಡ್ ರಾಯಭಾರಿ "ಖಂಡಿತಾ ಅಲ್ಲ" ಎಂದು ಹೇಳಿದ್ದಾರೆ. ಹಾಗಿದ್ದರೆ ಈ 'ಗೊಂದಲ' ಉಂಟಾದ್ದಾದರೂ ಏಕೆ?

ದೇಶದಲ್ಲಿನ ಅಸಹಿಷ್ಣುತೆಯ ವಾತಾವರಣದ ಬಗ್ಗೆ ತಮ್ಮ ಟಿಪ್ಪಣಿಗೆ ಬಂದಿರುವ ಪ್ರತಿಕ್ರಿಯೆಗಳು ಆ ಅಭಿಪ್ರಾಯವನ್ನು ದೃಢಪಡಿಸಿವೆ ಎಂದು ಆಗ ಆಮೀರ್ ಖಾನ್ ಹೇಳಿದ್ದರು. ಈಗ ಸ್ವತಃ ಸರಕಾರವೇ ಅದನ್ನು ದೃಢಪಡಿಸಿದೆ.

ವಿಶ್ವ ವ್ಯಾಪಾರ ಸಂಸ್ಥೆಯ ನೈರೋಬಿ ಸಭೆ –ದೇಶಕ್ಕೆ ಹಿನ್ನಡೆ



ಕೆ.ಎಂ.ನಾಗರಾಜ್

ಎರಡು ವರ್ಷಕ್ಕೊಮ್ಮೆ ವಿಶ್ವ ವ್ಯಾಪಾರ ಸಂಸ್ಥೆಯ ಸದಸ್ಯ ರಾಷ್ಟ್ರಗಳ ಮಂತ್ರಿಗಳ ಸಭೆ ನಡೆಯುತ್ತದೆ. ಈ ಸಂಸ್ಥೆಯ ತೀರ್ಮಾನಗಳನ್ನು ತೆಗೆದುಕೊಳ್ಳುವ ಅತ್ಯುನ್ನತ ಅಧಿಕಾರ ಹೊಂದಿರುವ ಈ ಸಭೆಗೆ ಭಾರಿ ಮಹತ್ವವಿದೆ. ಈ ಬಾರಿ, ಈ ಸಂಸ್ಥೆಯ ಹತ್ತನೆ ಸುತ್ತಿನ ಮಂತ್ರಿಗಳ ಸಭೆ, ಕೆನ್ಯಾದ ರಾಜಧಾನಿ ನೈರೋಬಿಯಲ್ಲಿ 2015ರ ಡಿಸೆಂಬರ್ 15ರಿಂದ 19ರ ವರೆಗೆ ನಡೆಯಿತು. ಈ ಸಭೆಯಲ್ಲಿ ಭಾರತಕ್ಕೆ ಯಾವ ಪ್ರಯೋಜನವೂ ಆಗಿಲ್ಲ. ದೋಹಾ ಸುತ್ತಿನ ಸೀಮಿತ ಸಾಧನೆಗಳು ಮತ್ತು ಅಲ್ಲಿ ಇತ್ಯರ್ಥವಾಗದೆ ಉಳಿದಿದ್ದ ಅಜೆಂಡಾ ಎರಡೂ ಸಮಾಧಿಯಾಗಿವೆ. ನೈರೋಬಿಯಲ್ಲಿ ಚರ್ಚೆಗೆ ಬಂದ ವಿವಾದಾತ್ಮಕ ವಿಷಯಗಳು ಮತ್ತು ತೀರ್ಮಾನಗಳನ್ನು ಗಮನಿಸಿದ ಕೆಲವು ವಿಶ್ಲೇಷಕರು ಅದನ್ನು ಒಂದು ದುರ್ಘಟನೆ ಎಂದಿದ್ದಾರೆ.

ಶ್ರೀಮಂತ ದೇಶಗಳ ಕೈಗೊಂಬೆ

ಎರಡನೆ ಮಹಾಯುದ್ಧದ ನಂತರ 1947ರಿಂದ 1994ರವರೆಗೆ ಅಂತಾರಾಷ್ಟ್ರೀಯ ವ್ಯಾಪಾರಗಳಿಗೆ ಸಂಬಂಧಿಸಿದ ವಿಧಿ ವಿಧಾನಗಳನ್ನು ಗ್ಯಾಟ್ (GATT- General Agreement on Trade and Tariffs) ನಿರ್ವಹಿಸುತ್ತಿತ್ತು. 1995ರಲ್ಲಿ ಗ್ಯಾಟ್ ವ್ಯವಸ್ಥೆಗೆ ಬದಲಾಗಿ ವಿಶ್ವ ವ್ಯಾಪಾರ ಸಂಸ್ಥೆ ಅಸ್ತಿತ್ವಕ್ಕೆ ಬಂತು. ಈಗ 162 ದೇಶಗಳು ಸದಸ್ಯರಿರುವ ಅದರಲ್ಲಿ ಮುಕ್ಕಾಲು ಪಾಲು ದೇಶಗಳು ಆರ್ಥಿಕವಾಗಿ ಹಿಂದುಳಿದವುಗಳು. ಪ್ರಜಾಪ್ರಭುತ್ವದ ತಳಹದಿಯ ಮೇಲೆ ಸಮಸ್ಯೆಗಳನ್ನು ತೀರ್ಮಾನ ಮಾಡುವ ಆಶಯ ಹೊತ್ತ ಸಂಸ್ಥೆ, ಅಂದಿನಿಂದ ಇಂದಿನವರೆಗೆ ಶ್ರೀಮಂತ ಬಂಡವಾಳಶಾಹಿ ದೇಶಗಳ ಪರವಾಗಿ ನಿಂತಿದೆ. ಅವರ ಕೈಗೊಂಬೆಯಾಗಿದೆ. ಅಭಿವೃದ್ಧಿ ಪಥದಲ್ಲಿರುವ ಭಾರತದಂತಹ ದೇಶಗಳು ಮತ್ತು ಹಿಂದುಳಿದಿರುವ ಅನೇಕ ಸಣ್ಣ ದೇಶಗಳಿಗೆ ಹಾನಿಯುಂಟುಮಾಡಿ ಅದರ ಲಾಭವನ್ನು ಶ್ರೀಮಂತ ದೇಶಗಳಿಗೆ ಒದಗಿಸಿದೆ.

ಶ್ರೀಮಂತ ದೇಶಗಳ ಅಸ್ತ್ರ

ಬಂಡವಾಳಶಾಹಿಯ ಸುವರ್ಣಯುಗ ಕೊನೆಗೊಂಡ ನಂತರ ಅದು ನಿಧಾನವಾಗಿ ಬಿಕ್ಕಟ್ಟಿನತ್ತ ಸಾಗುತ್ತಿತ್ತು. ಹೊಸ ಹೊಸ ಮಾರುಕಟ್ಟೆಗಳ ಅನ್ವೇಷಣೆಯಲ್ಲಿದ್ದ ಶ್ರೀಮಂತ ಬಂಡವಾಳಶಾಹಿ ದೇಶಗಳು ತಮ್ಮ ಲಾಭಕ್ಕಾಗಿ ವಿಶ್ವ ವ್ಯಾಪಾರ ಸಂಸ್ಥೆಯನ್ನು ಒಂದು ಅಸ್ತ್ರವಾಗಿ ಬಳಸಲು ಆರಂಭಿಸಿದವು.

ಭಾರತವೂ ಸೇರಿದಂತೆ, ವಸಾಹತುಶಾಹಿ ಆಡಳಿತಕ್ಕೊಳಪಟ್ಟಿದ್ದ ದೇಶಗಳು ವಿಮೋಚನೆಗೊಂಡ ನಂತರ ಸ್ವಾವಲಂಬಿ ಅರ್ಥವ್ಯವಸ್ಥೆಯನ್ನು ರೂಪಿಸಿಕೊಂಡಿದ್ದವು. ಆಗ ಕೃಷಿ ಪ್ರಧಾನವಾಗಿದ್ದ ಭಾರತದಲ್ಲಿ ಸರ್ಕಾರ ರೈತರಿಗೆ ಸುಲಭ ದರದಲ್ಲಿ ಬೀಜ, ರಸಗೊಬ್ಬರ ಒದಗಿಸುವ ಮತ್ತು ಬಡ ಜನರಿಗೆ ಪಡಿತರ ವ್ಯವಸ್ಥೆಯ ಮೂಲಕ ಸುಲಭ ದರದಲ್ಲಿ ಆಹಾರ ಧಾನ್ಯ ಒದಗಿಸುವ ವ್ಯವಸ್ಥೆ ರೂಪಿಸಿತ್ತು. ಈ ಸುಲಭ ದರ ಅಥವಾ ಸಬ್ಸಿಡಿಯ ಮೇಲೆ ಶ್ರೀಮಂತ ದೇಶಗಳ ಕಣ್ಣು ಕೆಂಪಾಯಿತು. ಈ ದೇಶಗಳು ವಿಶ್ವ ವ್ಯಾಪಾರ ಸಂಸ್ಥೆಯನ್ನು ಅಸ್ತ್ರವಾಗಿ ಬಳಸಿ ಭಾರತದಲ್ಲಿ ಸಬ್ಸಿಡಿ ಕೊನೆಗೊಳ್ಳುವಂತೆ ಮಾಡಿದವು. ನಂತರ, ತಂತ್ರಜ್ಞಾನವನ್ನು ತಮ್ಮ ಆಸ್ತಿಯಾಗಿಸಿಕೊಳ್ಳಲು ಬಹುರಾಷ್ಟ್ರೀಯ ಕಂಪೆನಿಗಳಿಗೆ ಅನುಮತಿ ಕೊಡುವ ವ್ಯಾಪಾರ ಸಂಬಂಧಿ ಬೌದ್ಧಿಕ ಆಸ್ತಿ ಹಕ್ಕು (TRIPS- Trade Related Intellectual Property Rights)ಗಳನ್ನು ಎಲ್ಲರೂ ಒಪ್ಪಿಕೊಳ್ಳುವಂತೆ ವಿಶ್ವ ವ್ಯಾಪಾರ ಸಂಸ್ಥೆಯ ಮೂಲಕ ತೀರ್ಮಾನ ಹೇರಲಾಯ್ತು.

ಈ ದೇಶಗಳು ಈಗ ಇನ್ನೊಂದು ಹೊಸ ಅಸ್ತ್ರದ ಬಳಕೆ ಮಾಡಲು ಆರಂಭಿಸಿವೆ. ವಿಶ್ವ ವ್ಯಾಪಾರ ಸಂಸ್ಥೆಯ ಚೌಕಟ್ಟಿನಿಂದ ಹೊರಗೆ ತಮಗೆ ಬೇಕಾದ ರೀತಿಯಲ್ಲಿ ಈ ದೇಶಗಳು ಬೇರೆ ದೇಶಗಳೊಂದಿಗೆ ಮುಕ್ತ ವ್ಯಾಪಾರದ ಹೆಸರಿನಲ್ಲಿ ಮಾಡಿಕೊಳ್ಳುವ ದ್ವಿಪಕ್ಷೀಯ ಅಥವಾ ಬಹುಪಕ್ಷೀಯ ಒಪ್ಪಂದಗಳೇ ಈ ಹೊಸ ಅಸ್ತ್ರ.

ಇದುವರೆಗೆ ಡಬ್ಲ್ಯುಟಿಒ ಅಥವ ವಿಶ್ವ ವ್ಯಾಪಾರ ಸಂಸ್ಥೆ ಮುಂದುವರೆದ ದೇಶಗಳ ಒಂದು ಪ್ರಧಾನ ಅಸ್ತ್ರವಾಗಿತ್ತು. ವಸಾಹತುಶಾಹಿಯಿಂದ ವಿಮೋಚನೆಗೊಂಡ ಭಾರತದಂತಹ ದೇಶಗಳು ಸ್ವಾವಲಂಬೀ ಬೆಳವಣಿಗೆಗೆ ರೂಪಿಸಿಕೊಂಡಿದ್ದ ಸರಕಾರೀ ನಿಯಂತ್ರಣದ ವ್ಯವಸ್ಥೆಯನ್ನು ಕಳಚಿಹಾಕುವ ತಮ್ಮ ಗುರಿ ನೇರವೇರಿದ ನಂತರ ಅವು ಈಗ ಇನ್ನೂ ಬಲವಾದ ಅಸ್ತ್ರವನ್ನು ರೂಪಿಸಿಕೊಂಡಿವೆ– ದ್ವಿಪಕ್ಷೀಯ ಅಥವ ಪ್ರಾದೇಶಿಕ ವ್ಯಾಪಾರ ಒಪ್ಪಂದ(ಆರ್‌ಟಿಎ)ಗಳು. ಇಲ್ಲಿ ಅವು ಡಬ್ಲ್ಯುಟಿಒದಂತೆ 162 ದೇಶಗಳ ಮಂತ್ರಿಗಳೊಂದಿಗೆ ಮಾತುಕತೆ ನಡೆಸಬೇಕಾಗಿಲ್ಲ, ಒಂದು ಆಥವ ಕೆಲವೇ ದೇಶಗಳೊಂದಿಗೆ ಮಾತುಕತೆ ನಡೆಸಿದರೆ ಸಾಕು. ಹೀಗೆ ಮೂರನೇ ಜಗತ್ತಿನ ದೇಶಗಳ ಐಕ್ಯತೆಯನ್ನು ಛಿದ್ರಗೊಳಿಸಿ ತಮ್ಮ ಯಜಮಾನಿಕೆಯನ್ನು ಮುಂದುವರೆಸಲು ಸಾಮ್ರಾಜ್ಯಶಾಹಿಗೆ ಸಾಧ್ಯವಾಗಿದೆ. ನೈರೋಬಿ ಸಭೆ ಇದನ್ನು ಪ್ರದರ್ಶಿಸಿದೆ ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್. ಅಲ್ಲಿ ಭಾರತಕ್ಕೆ ಆಗಿರುವ ಹಿನ್ನಡೆ ಇದನ್ನು ಪ್ರದರ್ಶಿಸಿದೆ.



ನೈರೋಬಿಯಲ್ಲಿ ಆದದ್ದೇನು?

ಕತಾರ್ ರಾಜಧಾನಿ ದೋಹಾದಲ್ಲಿ ನಡೆದ ಮಂತ್ರಿಗಳ ಮಟ್ಟದ ನಾಲ್ಕನೆ ಸುತ್ತಿನ ಮಾತುಕತೆಯಲ್ಲಿ ತಾರತಮ್ಯದ ಸಬ್ಸಿಡಿ ನೀತಿಯನ್ನು ಕ್ರಮೇಣವಾಗಿ ಸರಿಪಡಿಸುವ ಬಗ್ಗೆ ಒಮ್ಮತ ಮೂಡಿತ್ತು. ನಂತರ ನಡೆದ ಮಂತ್ರಿಗಳ ಮಟ್ಟದ ಎಲ್ಲ ಸಭೆಗಳಲ್ಲೂ ಅದನ್ನು ಪನರುಚ್ಚರಿಸಲಾಗುತ್ತಿತ್ತು. ಆದರೆ, ಈ ವಿಷಯವನ್ನು ಈಗ ನೈರೋಬಿಯಲ್ಲಿ ಕೈ ಬಿಡಲಾಗಿದೆ. ಇದು ಭಾರತ ಮತ್ತು ಇತರ ಹಿಂದುಳಿದ ದೇಶಗಳ ನಿರೀಕ್ಷೆಯನ್ನು ನುಚ್ಚುನೂರು ಮಾಡಿದೆ. ಮೊದಲ ಬಾರಿಗೆ ತಮ್ಮ ನೆಲದಲ್ಲಿ ನಡೆಯುವ ಸಭೆಯಲ್ಲಿ ತಮಗೆ ಸಬ್ಸಿಡಿ ವಿಷಯದಲ್ಲಿ ಸ್ವಲ್ಪವಾದರೂ ರಿಯಾಯ್ತಿ ದೊರೆಯುವುದೆಂಬ ಆಫ್ರಿಕಾ ದೇಶಗಳ ನಿರೀಕ್ಷೆಯೂ ಮಣ್ಣುಪಾಲಾಗಿದೆ.

ಈ ವಿಡಂಬನೆಯ ನಾಟಕದಲ್ಲಿ ಅಮೇರಿಕದ ಪಾತ್ರ ದೊಡ್ಡದಿತ್ತು. ಹಿಂದುಳಿದ ದೇಶಗಳ ಅಭಿಪ್ರಾಯಗಳಿಗೆ ಕಿವಿಗೊಡದೆ, ಬೆರಳೆಣಿಕೆಯಷ್ಟು ಸಂಖ್ಯೆಯ ಪ್ರಮುಖ ದೇಶಗಳ ಬೆಂಬಲದೊಂದಿಗೆ ಸಿದ್ಧ ಪಡಿಸಿದ ಕರಡು ಘೋಷಣೆಯನ್ನು ಉಳಿದವರೂ ಒಪ್ಪಿಕೊಳ್ಳುವಂತೆ ಮಾಡಿತು ಅಮೆರಿಕಾ. ಈ ಬೆರಳೆಣಿಕೆಯ ದೇಶಗಳಲ್ಲಿ ಭಾರತವೂ ಸೇರಿತ್ತು. ಸಬ್ಸಿಡಿ ವಿಷಯ ಈಗ ಮುಗಿದ ಕತೆ ಎಂಬ ಹೊಸ ರಾಗ ಹಾಡುತ್ತಿದೆ ಅಮೆರಿಕ. ಈ ವರೆಗಿನ ಎಲ್ಲ ಸಭೆಗಳಲ್ಲಿಯೂ ಈ ವಿಷಯವನ್ನು ಪುನರುಚ್ಚರಿಸಲಾಗುತ್ತಿತ್ತು. ನೈರೋಬಿಯಲ್ಲಿ ಹಾಗೆ ಮಾಡದಿರುವದರಿಂದ ಕಾನೂನು ದೃಷ್ಟಿಯಲ್ಲಿ ಅದು ಸತ್ತುಹೋಗಿದೆ ಎನ್ನುತ್ತಿದೆ ಅಮೆರಿಕ.

ಅಲ್ಲಿ ಸಲ್ಲುವುದು ಇಲ್ಲಿ ಸಲ್ಲದು

ಸಬ್ಸಿಡಿ ತಾರತಮ್ಯದ ಬಗ್ಗೆ ಈ ತನಕ ಗಟ್ಟಿ ದನಿಯಲ್ಲಿ ಮಾತಾಡುತ್ತಿದ್ದ ಭಾರತ, ಹಿಂದುಳಿದ ದೇಶಗಳನ್ನು ನಡುನೀರಿನಲ್ಲಿ ಬಿಟ್ಟು ಅಮೆರಿಕದ ಜೊತೆ ಕೈ ಜೋಡಿಸಿದ್ದರಿಂದ ಅದಕ್ಕೆ ಸಿಕ್ಕಿದ ಲಾಭ ಏನೂ ಇಲ್ಲ. ಬದಲಿಗೆ, ಸಾರ್ವಜನಿಕ ವಿತರಣೆಗೆ ಬೇಕಾದ ಧಾನ್ಯಗಳನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ ಸರ್ಕಾರ ಖರೀದಿಸುತ್ತಿರುವ ಏರ್ಪಾಡಿನಲ್ಲಿ, ವಿಶ್ವ ವ್ಯಾಪಾರ ಸಂಸ್ಥೆ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಸಬ್ಸಿಡಿ – "ಮಾರುಕಟ್ಟೆ ವಿರೂಪಗೊಳಿಸುವ ಸಬ್ಸಿಡಿ" – ಇರುವ ನೆಲೆಯಲ್ಲಿ "ಉಲ್ಲಂಘನೆ" ಎದುರಿಸುವ ಅಪಾಯದಲ್ಲಿದೆ. ಉಪವಾಪ ಬೀಳಲಿರುವ ಜನತೆಗೆ ಆಹಾರ ಒದಗಿಸುವ ಧಾನ್ಯಗಳ ಖರೀದಿಯಲ್ಲಿಯೂ "ಮಾರುಕಟ್ಟೆ ವಿರೂಪಗೊಳಿಸುವ ಸಬ್ಸಿಡಿ" ಇದೆ ಎಂಬ ವಾದ ಹೂಡುವವರಿಗೆ ಶ್ರೀಮಂತ ದೇಶಗಳು ತಮ್ಮ ರೈತರಿಗೆ ಕೊಡುವ ಭಾರಿ ಮೊತ್ತದ ಹಣ "ಮಾರುಕಟ್ಟೆ ವಿರೂಪಗೊಳಿಸುವ ಸಬ್ಸಿಡಿ"ಯಾಗುವುದಿಲ್ಲ! ಉದಾಹರಣೆಗೆ, 2014ರಲ್ಲಿ, ಅಮೆರಿಕದ ರೈತರಿಗೆ 140 ಬಿಲಿಯನ್ ಡಾಲರ್(ಸುಮಾರು ಒಂಭತ್ತು ಲಕ್ಷ ಇಪ್ಪತ್ತನಾಲ್ಕು ಸಾವಿರ ಕೋಟಿ ರೂ) ಸಹಾಯ ದೊರೆತಿದೆ. ಇದನ್ನು ತಾಂತ್ರಿಕ ವಾದಗಳ ಮೂಲಕ ಸಮರ್ಥಿಸಿಕೊಳ್ಳುತ್ತಾರೆ.


ನೆತ್ತಿಯ ಮೇಲೆ ನೇತಾಡುವ ಕತ್ತಿ

ನೈರೋಬಿ ಸಭೆಯ ಫಲಿತಾಂಶಗಳ ಬಗ್ಗೆ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಅವರ ಅಭಿಪ್ರಾಯಗಳು ಹೀಗಿವೆ:

"ಮೂರನೆ ಜಗತ್ತಿನ ಹಿಂದುಳಿದ ದೇಶಗಳು ಹೊಂದಿರುವ ಅಭಿವೃದ್ಧಿಯ ಹೆಬ್ಬಯಕೆಗಳನ್ನು ಈಡೇರಿಸುವ ಆಶ್ವಾಸನೆ ಕೊಟ್ಟಿದ್ದ ದೋಹಾ ಅಭಿವೃದ್ಧಿ ಅಜೆಂಡಾವನ್ನು ವಿಧ್ಯುಕ್ತವಾಗಿ ತ್ಯಜಿಸಲಾಗಿದೆ. ಇದು, ವಿಶ್ವ ವ್ಯಾಪಾರ ಸಂಸ್ಥೆಯ ವೇದಿಕೆಯಲ್ಲಿ ಆಗುತ್ತಿದ್ದ ವಿಶಾಲರೂಪದ ಒಪ್ಪಂದಗಳ ಬದಲು ಪ್ರಾದೇಶಿಕ ಮಟ್ಟಗಳಲ್ಲಿ ಏರ್ಪಡಿಸಿಕೊಳ್ಳುವ ಮುಕ್ತ ವ್ಯಾಪಾರ ಒಪ್ಪಂದಗಳತ್ತ ಸಾಗುವ ವ್ಯೂಹದ ಭಾಗವಾಗಿದೆ. ಈ ಏರ್ಪಾಡಿನಲ್ಲಿ, ಶ್ರೀಮಂತ ದೇಶಗಳು ಮೂರನೆ ಜಗತ್ತಿನ ಹಿಂದುಳಿದ ದೇಶಗಳನ್ನು ದಬಾಯಿಸಿ ತಮಗೆ ಬೇಕಾದ್ದನ್ನು ಪಡೆಯುವ ಸಾಧ್ಯತೆಗಳಿವೆ. 2013ರಲ್ಲಿ ಇಂಡೋನೇಷಿಯಾದ ಬಾಲಿಯಲ್ಲಿ ನಡೆದ ಸಭೆಯಲ್ಲಿ ಭಾರತ ಮತ್ತು ಇತರ ಹಿಂದುಳಿದ ದೇಶಗಳಿಗೆ, ಒಂದು ನಿಗದಿತ ಬೆಲೆಯಲ್ಲಿ ಧಾನ್ಯ ಸಂಗ್ರಹಣೆಗೆ ಸ್ವಲ್ಪ ಸಮಯದ ಅನುಮತಿ ನೀಡಲಾಗಿತ್ತು. ನೈರೋಬಿ ಸಭೆಯಲ್ಲಿ ಅದನ್ನು ಮುಂದುವರೆಸಲು ಅನುಮತಿ ಪಡೆಯುವ ನಿರೀಕ್ಷೆಯಿತ್ತು. ಅದೀಗ ಹುಸಿಯಾಗಿದೆ. ಈ ವಿಷಯದಲ್ಲಿ, ಭಾರತದ ತಲೆಯ ಮೇಲೆ ನೇತಾಡುವ ತೂಗು ಕತ್ತಿಯನ್ನು ಕಾಣಬೇಕಾದ ಪರಿಸ್ಥಿತಿ ಈಗ ಭಾರತದ್ದು. ಈ ವಿಷಯವನ್ನು ಮತ್ತು ಪರಿಸ್ಥಿತಿಯನ್ನು ಶ್ರೀಮಂತ ದೇಶಗಳು 1996ರ ಸಿಂಗಾಪುರ ಸಭೆಯಲ್ಲಿ ಇತ್ಯರ್ಥವಾಗದೆ ಉಳಿದ ಹೂಡಿಕೆ, ಪೈಪೋಟಿ, ಪಾರದರ್ಶಕತೆ ಮುಂತಾದ ವಿಷಯಗಳ ಬಗ್ಗೆ ತಮಗೆ ಶರಣಾಗುವಂತೆ ಭಾರತವನ್ನು ಬಗ್ಗಿಸಲು ಬಳಸಿಕೊಳ್ಳಬಹುದು. ಯಾವ ರೀತಿಯಲ್ಲಿ ನೋಡಿದರೂ ಪ್ರಯೋಜನ ಪಡೆಯುವುದು ಈ ದೇಶಗಳೇ. ಭಾರತಕ್ಕೆ ಅಷ್ಟರ ಮಟ್ಟಿಗೆ ಹಿನ್ನಡೆಯಾಗಿದೆ".

ವಿಜಯಪುರದಲ್ಲಿ ಪಂಚಾಯತು ಬಡ್ತಿಯಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣದ ಪ್ರಯತ್ನ

ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ ನೌಕರರ ಸಂಘದ ವಿಜಯಪುರ ಘಟಕ ವಿವಿಧ ಬೇಡಿಕೆಗಳು ಹಾಗೂ ಗ್ರೇಡ –2 ಕಾರ್ಯದರ್ಶಿ ಮತ್ತು ಲೆಕ್ಕ ಸಹಾಯಕರ ಇವರ ಬಡ್ತಿಯಲ್ಲಿ ಭ್ರಷ್ಟಾಚಾರ, ಅವ್ಯವಹಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುಂದರೇಶಬಾಬು ಅವರಿಗೆ ಮನವಿಪತ್ರ ಸಲ್ಲಿಸಿತ್ತು. 52 ಬಡ್ತಿಯ ಪರಿಶೀಲನೆ ಆಗಿದ್ದು ಅದನ್ನು ಪುನರ್ ಪರಿಶೀಲನೆ ಮಾಡಿ ಅನರ್ಹರನ್ನು ತೆಗೆದು ಹಾಕಿ ಅರ್ಹ ಇದ್ದವರಿಗೆ ಬಡ್ತಿ ಕೊಡೋಣ ಸಿಒ ಸೂಚಿಸಿದ್ದಾರೆ.



ನೂತನ ಸಿಇಓ ಸುಂದರೇಶಬಾಬುಗೆ ಮನವಿಪತ್ರ

ಅದರಂತೆ ಕಾರ್ಮಿಕ ಇಲಾಖೆಯ ಆದೇಶದ ಪ್ರಕಾರ ಹೊಸ ವೇತನದ ಆದೇಶ ಜಾರಿ ಮಾಡಬೇಕು. ಹಾಗೂ ಕಡಿಮೆ ವೇತನಕೊಡುತ್ತಿದ್ದು ಆದೇಶ ಪ್ರಕಾರ ಕನಿಷ್ಠ ವೇತನವನ್ನು ಹೆಚ್ಚಿಸಬೇಕು, ಎರಡು ಮೂರು ವರ್ಷದಿಂದ ಬಾಕಿ ಉಳಿದ ನಿತ್ಯ ವೇತನವನ್ನು ಶೀಘ್ರವಾಗಿ ಬಟವಡೆ ಮಾಡಿಸಬೇಕು, ಈ ಹಿಂದೆ ಅನುಮೋಧನೆಯಲ್ಲಿ ಭವಿಷ್ಯ ವರ್ತಿ ದಿನಾಂಕದಿಂದ ಅಂತಾ ಅನುಮೊದನೆ ನೀಡಿದ್ದು ತೆಗೆದು ಹಾಕಿ ಸೇವೆಗೆ ಸೇರಿದ ದಿನಾಂಕದಿಂದ ಪರಿಗಣಿಸಬೇಕು. ಹಾಗೂ ಉಳಿದ ಎಲ್ಲರಿಗೂ ಅನುಮೋದನೆ ನೀಡಬೇಕು. ಮತ್ತು ಬಾಕಿ ವೇತನ ಬಟವಾಡೆ ಮಾಡಬೇಕು, ಭವಿಷ್ಯ ನಿಧಿಯೋಜನೆ ಕಟ್ಟು ನಿಟ್ಟಾಗಿ ಜಾರಿಗೊಳಿಸಬೇಕು ಎಂಬ ಸಂಘದ ಬೇಡಿಕೆಗಳನ್ನು ಪರಿಶೀಲಸುವ ಭರವಸೆ ದೊರೆತಿದೆ.

ಇದಕ್ಕೂ ಮೊದಲು ಜಿ.ಪಂ. ಅಧ್ಯಕ್ಷ ಉಮೇಶ ಕೋಳಕೂರ ಅವರಿಗೆ ಮನವಿ ಕೊಟ್ಟಾಗ ಅವರೂ ಅನರ್ಹ ಇದ್ದವರ ದಾಖಲೆಗಳು ಕೊಡ್ರಿ ಅಂತಹವರನ್ನು ಬಡ್ತಿ ಪಟ್ಟಿಯಿಂದ ಕೈ ಬಿಡಲು ಹೇಳುತ್ತೇನೆ ಅಂತಾ ಆಶ್ವಾಸನೆ ಕೊಟ್ಟಿದಾರೆ.

ಇದು 22 ಬಡ್ತಿಯಲ್ಲಿ ಅವ್ಯವಹಾರ ಭ್ರಷ್ಟಾಚಾರ ನಡೆದ ಬಗ್ಗೆ ಹಂತ ಹಂತವಾಗಿ ಹೋರಾಟ ಮಾಡಿದ ಫಲವಾಗಿ ಪಂಚಾಯತ ನೌಕರ ಸಂಘಕ್ಕೆ ಸಂದ ಜಯವಾಗಿದೆ ಎಂದು ಸಂಘದ ರಾಜ್ಯ ಉಪಾಧ್ಯಕ್ಷ ಭೀಮಶಿ ಕಲಾದಗಿ, ಜಿಲ್ಲಾ ಉಪಾಧ್ಯಕ್ಷ ರಾಜು ಜಾಧವ ತ್ತಿತರ ಗ್ರಾಮ ಪಂಚಾಯತು ನೌಕರರ ಮುಖಂಡರು ಹರ್ಷ ವ್ಯಕ್ತಪಡಿಸಿದ್ದಾರೆ.

"ನನ್ನ ಹೆಸರು ಆರತಿ, ನನಗೆ ಎರಡು ಕಣ್ಣಿಲ್ಲ, ಶಿಕ್ಷಣ ಮಾರಾಟವಾಗುತ್ತಿರುವುದು ಖಂಡನೀಯ. ಖಾಸಗಿ ಶಿಕ್ಷಣ ಸಂಸ್ಥೆಗಳು ಪಾಲಕರಿಂದ ಸಾಕಷ್ಟು ಹಣ ಸುಲುಗೆ ಮಾಡುತ್ತಿವೆ. ಕಣ್ಣಿಲ್ಲದ ನನಗೆ ಶಿಕ್ಷಣ ಮಾರಾಟ ವಾಗುತ್ತಿರುವುದು, ಖಾಸಗಿ ಶಾಲೆಗಳು ಹಣ ವಸೂಲು ಮಾಡುತ್ತಿರುವುದು ಕಾನೂನು ವಿರೋಧಿ ಎನ್ನಿಸುತ್ತಿವೆ. ಅಧಿಕಾರಿಗಳು ಮತ್ತು ಸರಕಾರ ಕಣ್ಣಿದ್ದು ಕುರುಡರಂತಿದೆ" ಇಂದು ಪೋಷಕರು ಮತ್ತು ಖಈಖ ಸಂಘಟನೆಗಳು ನಡೆಸಿದ ಹೋರಾಟದಲ್ಲಿ ಬಿಚ್ಚಿಟ್ಟ ಮಾತುಗಳು.

ಕೇಳಿಸಿತಾ ಕಿಮ್ಮನೆ ಮತ್ತು ಸತ್ಯಮೂರ್ತಿಯವರೆ?

– ಗುರುರಾಜ ದೇಸಾಯಿ

ಆಹಾರ ಭದ್ರತೆ ಕಾನೂನು ವಿರುದ್ಧ ಜಮ್ಮುನಲ್ಲಿ ಜನಾಕ್ರೋಶ

ರಾಷ್ಟ್ರೀಯ ಆಹಾರ ಭದ್ರತೆ ಕಾನೂನು (ಎನ್‌ಎಫ್‌ಎಸ್‌ಎ) ವಿರೋಧಿಸಿ ಡಿಸೆಂಬರ್ 25ರಂದು ಜಮ್ಮುನಲ್ಲಿ ಸಿಪಿಐ (ಎಂ) ಮತ್ತು ಸಿಐಟಿಯು ಕಾರ್ಯಕರ್ತರು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದರು. ರಾಜಭವನಕ್ಕೆ ತೆರಳಲು ಯತ್ನಿಸಿದ ಕಾರ್ಯಕರ್ತರನ್ನು ತಡೆದ ಪೊಲೀಸರ ಜತೆ ಭಾರೀ ಸಂಘರ್ಷವೇ ಉಂಟಾಯಿತು.

ಆಹಾರ ಭದ್ರತೆ ಕಾನೂನನ್ನು ರಾಜ್ಯದಲ್ಲಿ ಜಾರಿ ಮಾಡುವುದನ್ನು ವಿರೋಧಿಸಿ ಸಿಪಿಐ (ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಕುಲ್‌ಗಾಂವ್ ಶಾಸಕ ಮಹಮದ್ ಯೂಸುಫ್ ತರಿಗಾಮಿ ನೇತೃತ್ವದಲ್ಲಿ ಪ್ರೆಸ್‌ಕ್ಲಬ್ ಪ್ರದೇಶದಿಂದ ಮೆರವಣಿಗೆ ನಡೆಯಿತು. 'ಇದೊಂದು ಜನವಿರೋಧಿ ಕಾನೂನು. ಇದನ್ನು ಜಾರಿ ಮಾಡಿದರೆ ಭಾರಿ ಸಂಖ್ಯೆಯ ಜನರು ಆಹಾರದ ಹಕ್ಕಿನಿಂದ ವಂಚಿತರಾಗುತ್ತಾರೆ' ಎಂದು ಸುದ್ದಿಗಾರರನ್ನು ಉದ್ದೇಶಿಸಿ ಮಾತನಾಡಿದ ಕಾ. ತರಿಗಾಮಿ ಹೇಳಿದರು. ರಾಜಭವನದ ಬಳಿ ಪ್ರತಿಭಟನೆ ನಡೆಸಿ ಈ ವಿಷಯವನ್ನು ರಾಜ್ಯಪಾಲರ ಗಮನಕ್ಕೆ ತರುವುದು ನಮ್ಮ ಉದ್ದೇಶವಾಗಿತ್ತು. ಆದರೆ ಪೊಲೀಸರು ನಮಗೆ ಅವಕಾಶ ನೀಡಲಿಲ್ಲ ಎಂದರು.



ಈ ಕಾನೂನನ್ನು ರಾಜ್ಯದಲ್ಲಿ ಜಾರಿ ಮಾಡುವುದೇ ಆದರೆ ಅದು ಸಿಪಿಐ(ಎಂ) ರಾಜ್ಯ ವಿಧಾನಸಭೆಯಲ್ಲಿ ಮಂಡಿಸಿದ್ದ ಗೊತ್ತುವಳಿಗೆ ಅನುಗುಣವಾಗಿ ಇರಬೇಕು ಎಂದು ಅವರು ಆಗ್ರಹಿಸಿದರು. 2014ರ ಆಗಸ್ಟ್‌ನಲ್ಲಿ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಈ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿತ್ತು. ಅದರ ಪ್ರಕಾರ ಪ್ರತಿ ಕುಟುಂಬಕ್ಕೆ ಕೆಜಿಗೆ ಎರಡು ರೂಪಾಯಿಯಂತೆ 35 ಕೆಜಿ ಅಕ್ಕಿಯನ್ನು ನೀಡಬೇಕು ಎಂದು ಕಾ. ತರಿಗಾಮಿ ಹೇಳಿದರು.

ರಾಜ್ಯಗಳ ಸುತ್ತ

ವಿಶ್ವಾಸ್

"ಎನ್‌ಎಫ್‌ಎಸ್‌ಎ ಬದಲು ಈ ನಿರ್ಣಯವನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಬೇಕೆಂಬುದು ನಮ್ಮ ಬಯಕೆ" ಎಂದರು. 2011 ಮತ್ತು ಅದರ ನಂತರ ಜನಿಸಿದ ಜನರೂ ಸೇರಿದಂತೆ ಸಮಾಜದ ದೊಡ್ಡ ವಿಭಾಗ ಸಬ್ಸಿಡಿ ಸಹಿತ ರೇಷನ್ ವ್ಯವಸ್ಥೆಯಿಂದ ಹೊರಗಿದ್ದು ಅವರಿಗೂ ಈ ಸೌಲಭ್ಯವನ್ನು ವಿಸ್ತರಿಸಬೇಕು ಎಂದರು.

ಸಾಕ್ಷರತೆ: ದೇಶದಲ್ಲೇ ತ್ರಿಪುರಾ ನಂಬರ್ ಒನ್



ಎಡರಂಗ ಸರಕಾರ ಆಡಳಿತದಲ್ಲಿರುವ ಪುಟ್ಟ ರಾಜ್ಯ ತ್ರಿಪುರಾ ಸಾಕ್ಷರತೆ ಪ್ರಮಾಣದಲ್ಲಿ ಭಾರತದಲ್ಲಿ ಮೊದಲ ಸ್ಥಾನಲ್ಲಿ ಬಂದು ನಿಂತಿದೆ. ಈ ವಿಚಾರದಲ್ಲಿ ಅದು ಕೇರಳವನ್ನೂ ಹಿಂದಿಕ್ಕಿ ಭಾರೀ ಸಾಧನೆಯನ್ನು ಮಾಡಿದೆ.

ಕೇರಳದ ಸಾಧನೆಯನ್ನು (ಶೇಕಡಾ 93.91) ಮುರಿದು ತ್ರಿಪುರಾ 94.65ರ ಸಾಧನೆಯನ್ನು ಮಾಡಿದೆ ಎಂದು ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಇತ್ತೀಚೆಗೆ ರಾಜಧಾನಿ ಅಗರ್ತಲಾದಲ್ಲಿ ಪ್ರಕಟಿಸಿದರು.

"2001ರ ಜನಗಣತಿ ಪ್ರಕಾರ ಸಾಕ್ಷರತೆಯಲ್ಲಿ 12ನೇ ಸ್ಥಾನ ಮತ್ತು 2011ದ ಗಣತಿಯಲ್ಲಿ ನಾಲ್ಕನೇ ಸ್ಥಾನದಲ್ಲಿದ್ದ ತ್ರಿಪುರಾ ಒಂದನೇ ಸ್ಥಾನಕ್ಕೆ ಜಿಗಿದಿದೆ" ಎಂದು ಸರ್ಕಾರ್ ಹೇಳಿದರು. ಅಂತಾರಾಷ್ಟ್ರೀಯ ಸಾಕ್ಷರತಾ ದಿನದ ಕಾರ್ಯಕ್ರಮದ ಸಂದರ್ಭದಲ್ಲಿ ಮುಖ್ಯಮಂತ್ರಿ ಈ ವಿಷಯವನ್ನು ತಿಳಿಸಿದರು.

2011ರಲ್ಲಿ ತ್ರಿಪುರಾ 87.75 ಸಾಕ್ಷರತೆಯನ್ನು ಹೊಂದಿದ ನಂತರ ಎಂಟು ಜಿಲ್ಲಾ ಮ್ಯಾಜಿಸ್ಟ್ರೇಟ್‌ಗಳು 2012ರ ಆಗಸ್ಟ್‌ನಲ್ಲಿ ಒಂದು ಸಮೀಕ್ಷೆಯನ್ನು ನಡೆಸಿದರು. ರಾಜ್ಯದ 50 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರೂ ಸೇರಿದಂತೆ ಇರುವ 37 ಲಕ್ಷ ಜನಸಂಖ್ಯೆಯ ಪೈಕಿ 1,31,634 ಜನರು ಮಾತ್ರ ಅನಕ್ಷರಸ್ಥರು ಎಂಬುದು ಆ ಸಮೀಕ್ಷೆ ದೃಢಪಡಿಸಿದೆ. "ಹಾಗೆ ಅನಕ್ಷರಸ್ಥರಾಗಿ ಉಳಿದ 1,31,634 ಜನರನ್ನು ಸಾಕ್ಷರಸ್ಥರನ್ನಾಗಿ ಮಾಡಲು 8254 ಸಾಕ್ಷರತಾ ಸ್ವಯಂಸೇವಕರು 8152 ವಯಸ್ಕ ಸಾಕ್ಷರತಾ ಕೇಂದ್ರಗಳಲ್ಲಿ ಸಂಪೂರ್ಣ ಸಮರ್ಪಣಾ ಭಾವದಿಂದ ಅಭೂತಪೂರ್ವವಾಗಿ ಶ್ರಮಿಸಿದ್ದಾರೆ" ಎಂದು ಮುಖ್ಯಮಂತ್ರಿ ಹೇಳಿದರು. ಕೊಲ್ಕತ್ತಾ ಮೂಲದ ಭಾರತೀಯ ಅಂಕಿಸಂಖ್ಯೆ ಸಂಸ್ಥೆ (ಐಎಸ್‌ಐ)ಯ ಮೇಲುಸ್ತುವಾರಿಯಲ್ಲಿ ಆಗಸ್ಟ್ 10ರಿಂದ 25ರ ನಡುವೆ ನವಸಾಕ್ಷರರ ಮೌಲ್ಯಮಾಪನ ಮಾಡಲಾಯಿತು. 2011ರ ಗಣತಿಯಲ್ಲಿ 87.75 ಶೇಕಡಾ ಇದ್ದ ಸಾಕ್ಷರತೆ ಪ್ರಮಾಣ ಈಗ 94.65ಕ್ಕೆ ಏರಿದೆ ಎಂದು ನುಡಿದರು. ಐಎಸ್‌ಐನ ಅಂತಿಮ ವರದಿ ಬಂದಾಗ ರಾಜ್ಯದ ಸಾಕ್ಷರತೆ ಶೇಕಡಾ 96ನ್ನು ದಾಟಿರುತ್ತದೆ ಎಂಬುದು ರಾಜ್ಯ ಸರಕಾರದ ಅಭಿಪ್ರಾಯ ಎಂದವರು ನುಡಿದರು.

2011ರ ಸೆನ್ಸಸ್ ಪ್ರಕಾರ ಕೇರಳದ ಸಾಕ್ಷರತೆ ಪ್ರಮಾಣ ಶೇಕಡಾ 93.91 ಹಾಗೂ ಮಣಿಪುರದ ಸಾಕ್ಷರತೆ ಪ್ರಮಾಣ ಶೇಕಡಾ 91.58 ಇತ್ತು. ಅದೇ ವರ್ಷದ ಜನಗಣತಿ ಪ್ರಕಾರ ರಾಷ್ಟ್ರೀಯ ಸಾಕ್ಷರತೆ ಶೇಕಡಾ 74.04 ಆಗಿದೆ.

ಯಶಸ್ಸಿನ ಗುಟ್ಟು

ಸಾಕ್ಷರತೆ ವಿಚಾರದಲ್ಲಿ ತ್ರಿಪುರಾದ ಈ ಸಾದನೆಯ ಯಶಸ್ಸಿಗೆ ಮುಖ್ಯಮಂತ್ರಿ ನೇತೃತ್ವದ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರದ ಉಸ್ತುವಾರಿಯಲ್ಲಿ ಗ್ರಾಮ ಪಂಚಾಯತಿಗಳು ಸೇರಿದಂತೆ ಸ್ಥಳೀಯ ಸರಕಾರಗಳ, ಎನ್‌ಜಿಒಗಳು ಮತ್ತು ಸ್ಥಳೀಯ ಕ್ಲಬ್‌ಗಳ ಸಕ್ರಿಯ ಭಾಗವಹಿಸುವಿಕೆ ಕಾರಣ ಎಂದು ಹೇಳಲಾಗಿದೆ. ತ್ರಿಪುರಾದಲ್ಲಿ ಮಹಿಳಾ ಸಾಕ್ಷರತೆ ಪ್ರಮಾಣ ಪುರುಷರಿಗಿಂತ ಹೆಚ್ಚಿರುವದು ಇನ್ನೊಂದು ವಿಶೇಷವಾಗಿದೆ.

ಮಾದರಿಯಾದ ಮುಖ್ಯಮಂತ್ರಿ ಪತ್ನಿಯ ಸರಳತೆ

ಅವರು ಯಾವುದೇ ಭದ್ರತೆ ವ್ಯವಸ್ಥೆ ಇಲ್ಲದೆ ಓಡಾಡುತ್ತಾರೆ. ರೈಲುಗಳಲ್ಲಿ ಸ್ಲಿಪರ್ ಕೋಚ್‌ಗಳಲ್ಲೇ ಅವರ ಪ್ರಯಾಣಕ್ಕೆ ಅವರ ಆದ್ಯತೆ. ರಾಜಕೀಯ ಕಾರ್ಯಕ್ರಮ ಸಭೆ ಸಮಾರಂಭಗಳಲ್ಲಿ ವಿಶೇಷ ಆತಿಥ್ಯ ಬೇಡ ಎಂಬ ನಿಲುವು ಅವರದು. ಊಟ ಕೂಟಗಳಲ್ಲಿ ಎಲ್ಲರಂತೆ ತಾನೂ ಸರತಿ ಸಾಲಿನಲ್ಲಿ ನಿಂತು ತಟ್ಟೆಯಲ್ಲಿ ಊಟ ಮಾಡುವ ಬಯಕೆ ಅವರದು.

ಇವೆಲ್ಲವೂ ನಾಲ್ಕು ಬಾರಿ ತ್ರಿಪುರಾದ ಮುಖ್ಯಮಂತ್ರಿಯಾಗಿರುವ ಮಾಣಿಕ್ ಸರ್ಕಾರ್ ಅವರ ಪತ್ನಿ ಪಾಂಚಾಲಿ ಭಟ್ಟಾಚಾರ್ಯ ಅವರ ಬಗೆಗಿನ ವಾಸ್ತವ ನೋಟ. ಅವರ ಈ ಪರಿಯ ಸರಳತೆಯನ್ನು ಹಿಂದೂಸ್ತಾನ್‌ಟೈಮ್ಸ್ ಪತ್ರಿಕೆ ವರದಿ ಮಾಡಿದೆ. ಜಾರ್ಖಂಡ್ ರಾಜಧಾನಿ ರಾಂಚಿಗೆ ಹೋಗಿದ್ದ ಸಂದರ್ಭ ಪಾಂಚಾಲಿಯವರು ಹೇಗೆ ನಡೆದುಕೊಂಡರು ಎನ್ನುವುದನ್ನು ಚಿತ್ರಿಸುವ ಮೂಲಕ ವರದಿಗಾರರು ಸರಳತೆಯ ಮಾದರಿಯೊಂದನ್ನು ದಾಖಲಿಸಿದ್ದಾರೆ.

ಡಿಸೆಂಬರ್ ಮೂರನೇ ವಾರದಲ್ಲಿ ರಾಂಚಿಯಲ್ಲಿ ಸಿಐಟಿಯು ಜನರಲ್ ಕೌನ್ಸಿಲ್ ಸಭೆ ನಾಲ್ಕು ದಿನಗಳ ಕಾಲ ನಡೆಯಿತು. ಈ ಸಭೆಯಲ್ಲಿ ಪಾಲ್ಗೊಳ್ಳಲು ಕಾಮ್ರೇಡ್ ಪಾಂಚಾಲಿಯವರು ಕೋಲ್ಕತಾದಿಂದ ರೈಲಿನಲ್ಲಿ ಸ್ಲೀಪರ್ ಕೋಚ್‌ನಲ್ಲೇ ಆಗಮಿಸಿದರು. ಯಾವುದೇ ವಿಶೇಷ ಭದ್ರತೆಯೂ ಇಲ್ಲದೆ ಸಾಮಾನ್ಯ ಕಾರ್ಮಿಕರ ಜತೆ ಸಭೆಯಲ್ಲಿ ಕುಳಿತುಕೊಂಡರು. ಇತರ ಕಾರ್ಮಿಕರ ಜತೆಯ ಸಾಲಿನಲ್ಲಿ ನಿಂತುಕೊಂಡು ಊಟ ಪಡೆದರು.

ಪಾಂಚಾಲಿಯವರ ಪತಿ ಮಾಣಿಕ್ ಸರ್ಕಾರ್ ಅವರು ಸ್ವಂತ ಮನೆಯೂ ಇಲ್ಲದ, ಹೇಳಿಕೊಳ್ಳುವಂಥ ಬ್ಯಾಂಕ್ ಬ್ಯಾಲೆನ್ಸ್ ಕೂಡ ಇಲ್ಲದ ಒಂದು ಕಾರು ಕೂಡ ಇಲ್ಲದ ಭಾರತದ ಪ್ರಥಮ ಮುಖ್ಯಮಂತ್ರಿ ಎಂದು ಪರಿಗಣಿಸಲಾಗಿದೆ ಎಂದು ಪತ್ರಿಕೆ ವರದಿಯಲ್ಲಿ ತಿಳಿಸಿದೆ.

ಪಾಂಚಾಲಿ ಒಮ್ಮೊಮ್ಮೆ ಅಗರ್ತಲಾದಲ್ಲಿ ಯಾವುದೇ ಭದ್ರತೆ ವ್ಯವಸ್ಥೆ ಇಲ್ಲದೆ ಆಟೋಗಳಲ್ಲಿ ಓಡಾಡುವುದನ್ನು ಕಂಡಿದ್ದೇವೆ ಎಂದು ಕೆಲವು ಕಾರ್ಮಿಕ ಸಂಗಾತಿಗಳು ಹೇಳಿದ್ದನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದೆ. "ರಾಜ್ಯಗಳಲ್ಲೂ ಕೇಂದ್ರದಲ್ಲೂ ವಿಐಪಿ ಸಂಸ್ಕೃತಿ ಕೊನೆಗೊಳ್ಳಬೇಕು. ಯಾಕೆಂದರೆ ಅದರಿಂದ ಜನಸಾಮಾನ್ಯರಿಗೆ ತೊಂದರೆ ಆಗುತ್ತದೆ" ಎನ್ನುವುದು ಪಾಂಚಾಲಿ ನಿಲುವು.

ಜನತೆಯ ಮೇಲೆ ಬೇಹುಗಾರಿಕೆಗಾಗಿ ಮತೀಯ..... ಪುಟ 11 ರಿಂದ

ಸಂಶೋಧನೆ, ತಂದೆತಾಯಿ ವ್ಯಾಜ್ಯ, ಪುನರ್‌ಉತ್ಪಾದನಾ ತಂತ್ರಜ್ಞಾನ ಮತ್ತು ವಲಸೆ, ಇತ್ಯಾದಿಗಳಲ್ಲಿ ಬಳಸಲು ಅವಕಾಶ ಕಲ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಉದ್ದೇಶಿತ ಡಾಟಾಬೇಸ್ ಕೇವಲ ಅಪರಾಧವನ್ನು ಹತ್ತಿಕ್ಕಲು ಬಳಸುವ ಮುಗ್ಧ ಸಾಧನವೇನು ಅಲ್ಲ. ಇದು ನಾಗರೀಕರ ಮಾನವ ಹಕ್ಕುಗಳು ಮತ್ತು ಖಾಸಗಿ ಸ್ವಾತಂತ್ರ್ಯವನ್ನು ದಮನ ಮಾಡುವ ಬೇಹುಗಾರಿಕೆ ವ್ಯವಸ್ಥೆಯನ್ನು ನಿರ್ಮಾಣ ಮಾಡುವುದಾಗಿದೆ.

ಬೇಹುಗಾರಿಕೆಗಾಗಿ ಪರಿಣಾಮಕಾರಿ ಅಸ್ತ್ರ:

ಇತ್ತೀಚಿನ ವರ್ಷಗಳಲ್ಲಿ ಜನತೆಯ ಮೇಲೆ ಬೇಹುಗಾರಿಕೆ ನಡೆಸಲು ಭಾರತ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ. ಸಂಸತ್ತಿನಲ್ಲಿ ಮಸೂದೆಗೆ ಅಂಗೀಕಾರ ದೊರೆತರೆ ವ್ಯಕ್ತಿ ಸ್ವಾತಂತ್ರ್ಯ ಮತ್ತು ಖಾಸಗೀತನದ ಹಕ್ಕನ್ನು ದಮನ ಮಾಡಲು ಸರ್ಕಾರದ ಬತ್ತಳಿಕೆಯಲ್ಲಿ ಈ ಕಾಯಿದೆಯು ಪರಿಣಾಮಕಾರಿ ಅಸ್ತ್ರವಾಗಲಿದೆ. ಈ ಕುರಿತು ಅಮೇರಿಕಾದ ಜವಾಬ್ದಾರಿಯುತ ತಳಿಶಾಸ್ತ್ರ ಪರಿಷತ್ತು ಸಂಸ್ಥೆಯ ಅಧ್ಯಕ್ಷರಾದ ಜೆರೆಮಿ ಗ್ರುಬರ್ ಹೇಳುತ್ತಾರೆ: "ಭಾರತ ಹೊರತುಪಡಿಸಿದರೆ, ಯಾವುದೇ ದೇಶವು ಮುಗ್ಧ ಪ್ರಜೆಗಳ ಡಿಎನ್‌ಎ ದತ್ತಾಂಶವನ್ನು ಇತರೆ ಕಾನೂನುಗಳ ಪಾಲನೆ ಜೊತೆಗೆ ಮಿಶ್ರಣಗೊಳಿಸ ಹೊರಟಿಲ್ಲ. ಕೇವಲ ಕೆಲವೇ ಸಂಖ್ಯೆಯ ಅಪರಾಧಗಳಲ್ಲಿ ಡಿಎನ್‌ಎ ತಪಾಸಣೆ ಅವಶ್ಯವಿರುವುದರಿಂದ, ಅವಶ್ಯವಿಲ್ಲದ ಅಪರಾಧ ಪ್ರಕರಣಗಳಲ್ಲೂ ಭಾರತ ಸರ್ಕಾರ ಡಿಎನ್‌ಎ ಸಾಕ್ಷ್ಯ ಸಂಗ್ರಹಿಸಿದರೆ ಜನತೆಗೆ ಸುರಕ್ಷತೆ ಇರುವುದಿಲ್ಲ – ಅದರ ಪ್ರಮುಖ ಉದ್ದೇಶ ಬೇಹುಗಾರಿಕೆ ನಡೆಸುವುದಾಗಿದೆ."

ತಜ್ಞರ ಸಮಿತಿಯ ಸದಸ್ಯರಿಂದಲೇ ಮಸೂದೆ ವಿರೋಧ :

ಮಾನವ ಡಿಎನ್‌ಎ ಪ್ರೊಫೈಲಿಂಗ್ ಮಸೂದೆಯನ್ನು ಪರಾಮರ್ಶಿಸಲು ಕೇಂದ್ರ ಸರ್ಕಾರ ರಚಿಸಿದ್ದ ತಜ್ಞರ ಸಮಿತಿಯಲ್ಲಿ ಕಾನೂನು ತಜ್ಞರಾದ ಉಷಾ ರಾಮನಾಥನ್ ರವರು ಇನ್ನು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ; "ಡಿಎನ್‌ಎ ಪ್ರೊಫೈಲಿಂಗ್ ಮಂಡಳಿ ರಚನೆಯಲ್ಲಿ ಕಾನೂನು ಜಾರಿಗೊಳಿಸುವ ಅಧಿಕಾರಿಗಳು ಮತ್ತು ಸರ್ಕಾರದ ಪ್ರತಿನಿಧಿಗಳು, ವಿಜ್ಞಾನಿಗಳು ಮತ್ತು ಡಾಟಾಬೇಸ್ ಬಳಸುವ ಸಂಸ್ಥೆಗಳ ಪ್ರತಿನಿಧಿಗಳೇ ತುಂಬಿ ಹೋಗಿದ್ದಾರೆ. ಇದರಿಂದಾಚೆಗೆ ಬೇರೆಯವರಿಗೆ ಪ್ರಾತಿನಿಧ್ಯವೇ ಇಲ್ಲ. ಅಲ್ಲದೇ, ಹೈದರಾಬಾದಿನ ಫಿಂಗರ್‌ಪ್ರಿಂಟಿಂಗ್ ಮತ್ತು ತಪಾಸಣಾ ಕೇಂದ್ರವನ್ನು ಈ ಕಾಯಿದೆಯಡಿ ನಿಯಂತ್ರಣ ಸಂಸ್ಥೆಯೆಂದು ಗುರುತಿಸಿರುವುದು ಹಿತಾಸಕ್ತಿ ಸಂಘರ್ಷಕ್ಕೆ ಕಾರಣವಾಗಿದೆ" ಎನ್ನುತ್ತಾರೆ.



ದಲಿತರ ಮೇಲೆ ದೌರ್ಜನ್ಯಗಳ ಸರಣಿ

ಗೋಪಾಲಕೃಷ್ಣ ಅರಳಹಳ್ಳಿ

ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಸರಣಿಯಂತೆ ನಡೆಯುತ್ತಲೇ ಇವೆ.

ತೋಂಡಿಹಾಳದ ಗೌರಮ್ಮನ ಪಾಡು

ಕೊಪ್ಪಳ ತಾಲ್ಲೂಕು ಗಂಗಾವತಿಯ ತೋಂಡಿಹಾಳ ಗ್ರಾಮದಲ್ಲಿ ದಲಿತ ಮಹಿಳೆಯ ಮೇಲೆ ಅತ್ಯಾಚಾರ ನಡೆದು ಹೋಗಿದೆ. ಆ ನತದೃಷ್ಟೆ ಗೌರಮ್ಮ. ಈಕೆ ಎಸ್.ಟಿ. ಜನಾಂಗದ ಮಹಿಳೆಯಾಗಿದ್ದು ಐದು ವರ್ಷದ ಹಿಂದೆ ರಂಗನಾಥ್‌ರವರನ್ನು ಮದುವೆಯಾಗಿದ್ದರು. ಅನುಶ್ರೀ ಎಂಬ ಮಗು ಕೂಡ ಹುಟ್ಟಿತ್ತು. 2012ರಲ್ಲಿ ಕಾರಣಾಂತರದಿಂದ ಗಂಡ ರಂಗನಾಥ್ ತೀರಿ–ಕೊಂಡರು. ತದ ನಂತರ ತವರು ಮನೆಗೆ ಮರಳಿದ ಗೌರಮ್ಮ ಇಪ್ಪತ್ತೆಂಟನೇ ಕ್ಯಾಂಪ್‌ನಲ್ಲಿ ತಂದೆ ಕುಟುಂಬದೊಡನೆ ಜೀವನ ನಡೆಸಲು ಆರಂಭಿಸಿದರು. ಹೀಗೆ ಜೀವನ ನಡೆಸುತ್ತಿರುವಾಗ ಇಲ್ಲಿಗೆ ಎರಡು ವರ್ಷಗಳ ಹಿಂದೆ ಮೈಲಾರಪುರದ ರೆಡ್ಡಿ ಜಾತಿಗೆ ಸೇರಿದ ಬುಡ್ಡಣ್ಣ ಎಂಬುವವನು ಅವರ ಅಂಗಡಿಗೆ ಬರಲು ಶುರುಮಾಡಿದ. ಪ್ರತಿದಿನ ಬರುತ್ತಿದ್ದರಿಂದ ಪರಿಚಯವೂ ಆಗಿ ಸಲುಗೆಯ ಮಾತುಗಳನ್ನಾಡಲು ಶುರುಮಾಡಿದರು. ಆಕೆಯನ್ನು ಪ್ರೀತಿಸುವುದಾಗಿ, ಮಗಳನ್ನು ಮಗಳಂತೆ ನೋಡಿಕೊಳ್ಳುವುದಾಗಿ, ಆಕೆಗೆ ಬಾಳುಕೊಡುತ್ತೇನೆ ಎಂದುನಂಬಿಸಿ ಕನಕಗಿರಿಯ ಸಮೀಪದ ಕರಡಿ ಗುಡ್ಡಕ್ಕೆ ಕರೆದುಕೊಂಡು ಹೋಗಿ ಯಾರಿಗೂ ತಿಳಿಯದಂತೆ ಮದುವೆ ಮಾಡಿಕೊಂಡು ಬಂದನು. 30–10–2015ರಂದು ಗಂಗಾವತಿಯ ಉಪ ನೊಂದಾವಣೆ ಕಛೇರಿಯಲ್ಲಿ ರಿಜಿಸ್ಟರ್ ಸಹ ಆಯಿತು.

ಕೆಲವು ದಿನಗಳ ನಂತರ ಗೌರಮ್ಮನ ಮನೆಯಲ್ಲಿ ಗೊತ್ತಾಗಿ ಆಕೆಯ ತಾಯಿ ಹೊಡೆದು ಬಡಿದು ಕೇಳಿದಾಗ ನಿಜಾಂಶ ತಿಳಿದು ಬಂದಿತು. ಮದುವೆಯಾಗಿರುವುದನ್ನು ಒಪ್ಪಿಕೊಂಡು ಜೀವನ ಮುಂದುವರೆಸಿದರು. ಆಗ ರೆಡ್ಡಿ ಬುಡ್ಡಣ್ಣನ ಮನೆಗೂ ವಿಷಯ ತಿಳಿಯಿತು. ಬುಡ್ಡಣ್ಣನ ಅಣ್ಣ ದೇವಾರೆಡ್ಡಿಯು ಬುಡ್ಡಣ್ಣನಿಗೆ ಫೋನ್ ಮಾಡಿ ಬೆದರಿಕೆ ಹಾಕಲು ಶುರು ಮಾಡಿದರು. ಆದರೂ ಬುಡ್ಡಣ್ಣ ಗೌರಮ್ಮನೊಡನೆ ಜೀವನ ನಡೆಸುತ್ತಾಅವಳಲ್ಲಿದ್ದ ಎಲ್ಲಾ ಒಡವೆಗಳನ್ನು ಮಾರಿಹಾಕಿದ ನಂತರ ಅಂತರ್ಜಾತಿ ವಿವಾಹದ ಹಣ ಪಡೆಯಲು ಮುಂದಾದ. ಗೌರಮ್ಮನ ಹತ್ತಿರ ಪ್ರಮಾಣ ಪತ್ರ ಪಡೆದು ಸರ್ಕಾರದ ಇಲಾಖೆಗೆ ಹೋಗಿ ವಿಚಾರಿಸಿದ. ಇಲಾಖೆಯವರು ಈ ವಿವಾಹಕ್ಕೆ ಹಣ ದೊರೆಯುವುದಿಲ್ಲವೆಂದು ತಿಳಿದ ಬುಡ್ಡಣ್ಣ ತನ್ನ ಬಟ್ಟೆ ಬರೆಗಳನ್ನು ತೆಗೆದುಕೊಂಡು ದೀಪಾವಳಿ ಹಬ್ಬಕ್ಕೆ ಹೋಗಿಬರುವುದಾಗಿ ತಿಳಿಸಿ ತನ್ನ ಸ್ವಂತ ಊರಾದ ಮೈಲಾಪುಕ್ಕೆ ತೆರಳಿದನು. ನಾಲ್ಕೈದು ದಿವಸವಾದರೂ ಮರಳಿ ಬರದೆ ಇರುವುದರಿಂದ ಮೈಲಾರಪುರಕ್ಕೆ ಗೌರಮ್ಮ ಹೋದಳು.

"ಅಲ್ಲಿಗೆ ಹೋದಾಗ ಬುಡ್ಡಣ್ಣನ ಮನೆಯವರು ನಿಮ್ಮನ್ನು ಬಾಳಲು ಬಿಡುವುದಿಲ್ಲವೆನ್ನುತ್ತಿದ್ದರು. ಬುಡ್ಡಣ್ಣನ ಅಣ್ಣಚೆನ್ನಾಗಿ ಹೊಡೆದು ಬೆದರಿ–ಕೆ ಹಾಕಿದ್ದಾನೆ. ಇದರಿಂದ ನಾವಿಬ್ಬರು ಊರು ಬಿಟ್ಟು ಹೋಗೋಣ"ಎಂದು ಮಾತನಾಡಿಕೊಂಡು ಇಬ್ಬರೂ ಗಾಡಿಯಲ್ಲಿ ತೆರಳಿದರು. ಕಾರಟಗಿಗೆ ಬರುತ್ತಿರ ಬೇಕಾದರೆ ಮಾರ್ಗಮಧ್ಯದಲ್ಲಿ ಬುಡ್ಡಣ್ಣನ ಅಣ್ಣನಾದ ದೇವಾರೆಡ್ಡಿಯು ಇತರರೊಂದಿಗೆ ಬಂದು ಗೌರಮ್ಮನನ್ನು ಅಡ್ಡಗಟ್ಟಿ ಗಾಡಿಯಿಂದ ಕೆಳಗಿಳಿಸಿ ಬಾಯಿಗೆ ಬಂದಹಾಗೆ ಅವ್ಯಾಚ ಶಬ್ದಗಳಿಂದ ಬೈದು ಇಬ್ಬರನ್ನು ಬೇರ್ಪಡಿಸಿ ಬುಡ್ಡಣ್ಣನನ್ನು ಕಾರಟಗಿ ಪೋಲಿಸ್ ಠಾಣೆಗೆ ಕರೆದುಕೊಂಡು ಬಂದನು. ಗೌರಮ್ಮನೂ ಹಿಂದೆ ಹಿಂಬಾಲಿಸಿ ಸ್ಟೇಷನ್ನಿಗೆ ಬಂದಳು. ಆದರೆ ಪೋಲಿಸ್ ಠಾಣೆಯಲ್ಲಿ ನ್ಯಾಯ ಪಂಚಾಯತಿ ಮಾಡಿದಾಗ ಬುಡ್ಡಣ್ಣ ಮದುವೆಯಾಗಲು ನಿರಾಕರಿಸಿದ. ಮೇಲ್ಜಾತಿಯ ರೆಡ್ಡಿ ಜನಾಂಗದ ಬುಡ್ಡಣ್ಣ ನಡೆಸಿರುವ ದೈಹಿಕ ಅತ್ಯಾಚಾರ ನಡೆಸಿ ಗರ್ಭಿಣಿ ಮಾಡಿರುವುದಕ್ಕೆ ನ್ಯಾಯ ದೊರಕಿರುವುದಿಲ್ಲ.

ಈ ಅನ್ಯಾಯವನ್ನು ಖಂಡಿಸಿ ದಲಿತ ಹಕ್ಕುಗಳ ಸಮಿತಿ ಗಂಗಾವತಿ ಘಟಕವು ಜಿಲ್ಲಾಧಿಕಾರಿಗಳ ಕಛೇರಿ ಕೊಪ್ಪಳದಲ್ಲಿ ಧರಣಿ ನಡೆಸಿ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದೆ.

ಶಿರಕೋಳದಲ್ಲಿ ಕ್ಷೌರಕ್ಕೆ ನಿರಾಕರಣೆ, ಬಹಿಷ್ಕಾರ

ಮತೊಂದು ದಲಿತರ ಮೇಲಿನ ದೌರ್ಜನ್ಯ ಹಾವೇರಿ ಜಿಲ್ಲೆಯ ನವಗುಂದ ತಾಲ್ಲೂಕು ಶಿರಕೋಳದಲ್ಲಿ ನಡೆದಿದೆ. ದಲಿತರು ಕ್ಷೌರ ಮಾಡಬೇಕೆಂದು ಕ್ಷೌರದ ಅಂಗಡಿಗೆ ಹೋದಾಗ ಅಲ್ಲಿಯ ಮೇಲ್ಜಾತಿ ಜನ ಕ್ಷೌರ ಮಾಡಬಾರದೆಂದು ಅಂಗಡಿಯವರಿಗೆ ತಾಕೀತು ಮಾಡಿದ್ದಾರೆ. ಇದರಿಂದ ದಲಿತರು ಪೋಲೀಸ್ ಠಾಣೆಗೆ ದೂರು ನೀಡಿದಾಗ ಶಿರಕೋಳದ ಸವರ್ಣೀಯರು ಸಾಮಾಜಿಕ ಬಹಿಷ್ಕಾರ ಹಾಕಿ ಅಂಗಡಿ ಮುಗ್ಗಟ್ಟುಗಳಿಂದ ಯಾವುದೇ ದಿನಸಿ ಪದಾರ್ಥಗಳನ್ನು ಕೊಡದೆ ತಡೆ ಒಡ್ಡಿದ್ದಾರೆ. ಪೋಲೀಸ್ ಅಧಿಕಾರಿಗಳು ಊರಿಗೆ ಬಂದುಮಾತುಕತೆ ನಡೆಸಿ ಸಾಮಾಜಿಕ ಬಹಿಷ್ಕಾರ ಮಾಡಬಾರದೆಂದು ಹೇಳಿದ್ದರು. ಆದರೆ ಇದ್ಯಾವುದನ್ನು ಲೆಕ್ಕಿಸದೆ ದಲಿತರ ಮೇಲೆ ಸಾಮಾಜಿಕ ಬಹಿಷ್ಕಾರ ಮುಂದುವರೆದಿದೆ. ಸ್ಥಳಕ್ಕೆ ಬೇಟಿ ನೀಡಿದ ದಲಿತ ಹಕ್ಕುಗಳ ಸಮಿತಿ ಮುಖಂಡರಾದ ನಿತ್ಯಾನಂದಸ್ವಾಮಿ, ಸಿಪಿಐ(ಎಂ) ಮುಖಂಡರಾದ ಸೊಪ್ಪಿನ್ ಹಾಗೂ ಇತರರು ಈ ಸಾಮಾಜಿಕ ಬಹಿಷ್ಕಾರವನ್ನು ಖಂಡಿಸಿದ್ದಾರೆ.


ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ತುರ್ವಿಹಾಳ ಗ್ರಾಮದಲ್ಲಿ ಸವರ್ಣೀಯ ಕುರುಬ ಜನಾಂಗದ ಯುವಕನೊಬ್ಬ ಟೆಂಪೋದಲ್ಲಿ ಬಂದು ಅಂಬೇಡ್ಕರ್ ಫ್ಲೆಕ್ಸ್ ಫಲಕಕ್ಕೆ ಡಿಕ್ಕಿ ಹೊಡೆಯಲು ಪ್ರಯತ್ನಿಸಿದಾಗ ಅದನ್ನು ಪ್ರಶ್ನಿಸಿದ ದಲಿತರ ಮೇಲೆ ದೌರ್ಜನ್ಯವೆಸಗಿದ್ದಾರೆ. ದಲಿತ ಕೇರಿಗೆ ನುಗ್ಗಿ ದಾಂಧಲೆ ನಡೆಸಿದ್ದಾರೆ. 9 ಜನರನ್ನು ಬಂಧಿಸಲಾಗಿದೆ

ಮೌಢ್ಯಾಚರಣೆಗಳ ಕುರಿತು ರಾಜ್ಯವ್ಯಾಪಿ ಜನಜಾಗೃತಿ ಜಾಥಾ

ಮೌಢ್ಯ ಆಚರಣೆಗಳ ದುಷ್ಪರಿಣಾಮಗಳು ಮತ್ತು ಮೂಢನಂಬಿಕೆ ನಿಷೇಧ ಕಾಯಿದೆ ಕುರಿತು ಜಾಗೃತಿ ಮೂಡಿಸಲು ಭಾರತ ಜ್ಞಾನ ವಿಜ್ಞಾನ ಸಮಿತಿಯು ಡಿಸೆಂಬರ್ 12 ರಿಂದ ಜನವರಿ 14 ರವರೆಗೆ ರಾಜ್ಯವ್ಯಾಪಿ ವಾಹನ ಜಾಥಾ ನಡೆಸುತ್ತಿದೆ.

ವಿಚಾರವಾದಿ ನರೇಂದ್ರ ದಾಬೋಲ್ಕರ್ ಮತ್ತು ಹಿರಿಯ ಹೋರಾಟಗಾರ ಗೋವಿಂದ ಪನ್ಸಾರೆಯವರ ಹತ್ಯೆಯ ನಂತರದಲ್ಲಿ ಜರುಗಿದ ಸಂಶೋಧಕರಾದ ಪ್ರೊ. ಎಂ.ಎಂ. ಕಲಬುರ್ಗಿಯವರ ಹತ್ಯೆ ಇಡೀ ದೇಶದಲ್ಲಿ ವ್ಯಾಪಕ ಪ್ರತಿಭಟನೆಗೆ ಕಾರಣವಾಯಿತು. ಆದರೂ, ರಾಜ್ಯದಲ್ಲಿ ಮೌಢ್ಯ ಶಕ್ತಿಗಳ ಆಟಾಟೋಪ ಮತ್ತಷ್ಟು ಗರಿಗೆದರಿದೆ. ಸಮಾಜ ಘಾತುಕ ಶಕ್ತಿಗಳು ಪ್ರತಿ ದಿನ ಒಂದಲ್ಲ ಒಂದು ರೀತಿಯಲ್ಲಿ ವಾತಾವರಣವನ್ನು ಕಲುಷಿತಗೊಳಿಸುತ್ತಿರುವ ಆತಂಕಕಾರಿ ಸನ್ನಿವೇಶದಲಿವೀ ಜಾಥಾ ನಡೆ–ಯುತ್ತಿದೆ.

ನಿಡುಮಾಮಿಡಿ ಸ್ವಾಮೀಜಿಯವರ ನೇತೃತ್ವದಲ್ಲಿ ಜರುಗಿದ "ಮೌಢ್ಯ ಆಚರಣೆಗಳ ನಿಷೇಧಕ್ಕಾಗಿ ಪ್ರತಿಬಂಧಕ ಕಾಯಿದೆ" ಒತ್ತಾಯಿಸುವ ಚಳುವಳಿಯು ಒಂದು ಹಂತದಲ್ಲಿ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ನಡೆಯಿತು. ಇದೀಗ ಭಾರತ ಜ್ಞಾನ ವಿಜ್ಞಾನ ಸಮಿತಿಯ ವತಿಯಿಂದ ನಡೆಯುತ್ತಿರುವ ವಾಹನ ಜಾಥಾವು ಮೌಢ್ಯ ಆಚರಣೆಗಳ ದುಷ್ಪರಿಣಾಮಗಳು ಮತ್ತು ಮೂಢನಂಬಿಕೆ ನಿಷೇಧ ಕಾಯಿದೆ ಕುರಿತು ಶಾಲಾ ಕಾಲೇಜುಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅರಿವು ಮೂಡಿಸುವ ಹಂತಕ್ಕೆ ಕೊಂಡೊಯ್ಯುವಲ್ಲಿ ಯಶಸ್ವಿಯಾಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿರುವ ಮಾನವ ಘನತೆಗೆ ಕುಂದುಂಟು ಮಾಡುವ, ದೈಹಿಕ ಮತ್ತು ಮಾನಸಿಕವಾಗಿ ಹಿಂಸಿಸುವ ಹಾಗೂ ಶೋಷಣೆ ಮಾಡುವಂತಹ ಮೌಢ್ಯ ಆಚರಣೆಗಳ ಕುರಿತು ಹತ್ತಾರು ಪೋಸ್ಟರ್‌ಗಳಲ್ಲಿ ಚಿತ್ರಿಸಿ, ಅವುಗಳಿಗೆ ವಿವರಣೆ ನೀಡುತ್ತಾ ಸುಮಾರು 19 ಜಿಲ್ಲೆಗಳಲ್ಲಿ ಸಾಗುತ್ತಿದೆ. ತಾಲ್ಲೂಕು / ಹೋಬಳಿ ಮಟ್ಟದಲ್ಲಿ, ಶಾಲಾ ಕಾಲೇಜುಗಳಲ್ಲಿ, ಬಸ್‌ಸ್ಟ್ಯಾಂಡ್ ಮತ್ತು ಸರ್ಕಲ್‌ಗಳಲ್ಲಿ ಮೌಢ್ಯಾಚರಣೆ ಕುರಿತ ಪೋಸ್ಟರ್ ಪ್ರದರ್ಶನ ಏರ್ಪಡಿಸುವುದು, ವಿಚಾರ ಸಂಕಿರಣ, ಸಂವಾದ, ಪೋಸ್ಟರ್ ಪ್ರದರ್ಶನ, ಪತ್ರಿಕಾಗೋಷ್ಠಿ ಇತ್ಯಾದಿ ಚಟುವಟಿಕೆಗಳು ಜಾಥಾ ಸಂದರ್ಭದಲ್ಲಿ ಸ್ಥಳೀಯವಾಗಿ ನಡೆಯುತ್ತಿವೆ.



ದಿ: 12.12.2015 ರಂದು ಈ ಜಾಥಾವನ್ನು ಬೆಂಗಳೂರಿನ ಐಐಎಸ್‌ಸಿ ಯಲ್ಲಿ ವಿಜ್ಞಾನಿಗಳು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಖ್ಯಾತ ಇತಿಹಾಸಕಾರರಾದ ಪ್ರೊ. ರಾಜನ್ ಗುರುಕ್ಕಲ್, ಡಾ: ಶಾರದಾ ಮತ್ತು ಇತರೆ ವಿಜ್ಞಾನಿ, ಸಂಶೋಧಕರು ಹಾಜರಿದ್ದರು.

ನಂತರ ಜಾಥಾ ಬೆಂಗಳೂರಿನ ಕೆಲವೆಡೆ ಪೋಸ್ಟರ್ ಪ್ರದರ್ಶನ ನಡೆಸಿತು. ನಂತರ ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ, ಚಾಮರಾಜನಗರ, ಮೈಸೂರು, ಹಾಸನ ಮಾರ್ಗವಾಗಿ ಮಂಗಳೂರು ತಲುಪಿ, ನಂತರ ಹಾವೇರಿ ಮೂಲಕ ಬಳ್ಳಾರಿ, ರಾಯಚೂರು, ಕಲಬುರ್ಗಿ, ಬೀದರ್ ತಲುಪಲಿದೆ. ಮತ್ತೆ ಬೀದರ್ ನಿಂದ ಹೊರಟು ಧಾರವಾಡದಲ್ಲಿ ದಿ: 17.01.2016 ರಂದು ಸಮಾರೋಪಗೊಳ್ಳಲಿದೆ.

ಜಾಥಾ ಸಂದರ್ಭದಲ್ಲಿ ಶಾಲಾ ಕಾಲೇಜುಗಳ ವಿದ್ಯಾರ್ಥಿ ಮತ್ತು ಶಿಕ್ಷಕ ಸಮುದಾಯದ ನಡುವೆ ಒಳ್ಳೆಯ ಸ್ಪಂದನೆ ವ್ಯಕ್ತವಾಗಿದೆ. ಪೋಸ್ಟರ್ ಗಳಲ್ಲಿ ತೋರಿಸುವ ಮೌಢ್ಯ ಆಚರಣೆಗಳು ನಿಜಕ್ಕೂ ಅಮಾನವೀಯವಾಗಿದ್ದು, ಇಂತಹ ಆಚರಣೆಗಳನ್ನು ತೊಡೆಯಬೇಕೆಂಬ ಪ್ರತಿಕ್ರಿಯೆ ಶಾಲಾ ವಿದ್ಯಾರ್ಥಿಗಳಿಂದ ಮೂಡಿಬರುತ್ತಿದೆ. ಬೆಳ್ತಂಗಡಿ ಮತ್ತು ಮಂಗಳೂರಿನಲ್ಲಿ ಜಾಥಾದಲ್ಲಿ ಭಾಗವಹಿಸಿದ್ದ ಹಲವಾರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಮಡೆಸ್ನಾನ ಮತ್ತು ಪಂಕ್ತಿಬೇಧ ದಂತಹ ಆಚರಣೆಗಳನ್ನು ನಿಷೇಧಿಸಬೇಕು ಎಂದು ಅಭಿಪ್ರಾಯ ಹಂಚಿಕೊಂಡಿದ್ದಾರೆ. ಹಲವಾರು ಶಾಲಾ ಕಾಲೇಜುಗಳಲ್ಲಿ ಮೌಢ್ಯ ಆಚರಣೆಗಳ ಕುರಿತ ಪೋಸ್ಟರ್ ಪ್ರದರ್ಶನವನ್ನು ಎರಡು–ಮೂರು ಗಂಟೆಗೆ ಬದಲಾಗಿ ಇಡೀ ದಿನ ಏರ್ಪಡಿಸಿದರೆ ಒಳ್ಳೆಯದೆಂದು ವಿದ್ಯಾರ್ಥಿ ಮತ್ತು ಶಿಕ್ಷಕರು ಕೋರಿಕೊಂಡಿದ್ದಾರೆ. ಸಾರ್ವಜನಿಕರೂ ಸಹ ಅತಿ ಉತ್ಸಾಹದಿಂದ ಮೌಢ್ಯ ಆಚರಣೆಗಳ ಪೋಸ್ಟರ್ ಪ್ರದರ್ಶನದಲ್ಲಿ ಭಾಗವಹಿಸುತ್ತಿದ್ದು ಸಂವಾದದಲ್ಲಿ ತೊಡಗುತ್ತಿದ್ದಾರೆ.

ಇದುವರೆಗೂ ಪ್ರತಿ ಜಿಲ್ಲೆಯಲ್ಲೂ ಸುಮಾರು 2000 ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಮತ್ತು ಕನಿಷ್ಟ 1000 ಜನಸಾಮಾನ್ಯರನ್ನು ಜಾಥಾ ತಲುಪಲು ಸಾಧ್ಯವಾಗಿದೆ. ದಿ: 17.01.2016ರಂದು ಧಾರವಾಡದಲ್ಲಿ ಬೃಹತ್ ಸಮಾರಂಭದೊಂದಿಗೆ ಜನಜಾಗೃತಿ ಜಾಥಾ ಸಮಾರೋಪಗೊಳ್ಳಲಿದೆ.



ಬಿಡದಿ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕ ವಿರೋಧಿ ಧೋರಣೆಗಳ ವಿರುದ್ಧ ಜಿಲ್ಲಾಧಿಕಾರಿ ಕಛೇರಿ ಮುತ್ತಿಗೆ





ಬೆಂಗಳೂರು ಹೊರ ವಲಯದ ಬೆಂಗಳೂರು –ಮೈಸೂರು ರಸ್ತೆಯ ಬಿಡದಿ ಕೈಗಾರಿಕೆ ಪ್ರದೇಶದಲ್ಲಿ 250ಕ್ಕೂ ಹೆಚ್ಚು ಕೈಗಾರಿಕೆಗಳು ಇದ್ದು, ಲಕ್ಷಕ್ಕೂ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದಾರೆ. ಶೇಕಡ 25 ರಿಂದ 30ರಷ್ಟು ಜನ ಖಾಯಂ ನೌಕರರಾಗಿದ್ದು ಉಳಿದ ಕಾರ್ಮಿಕರೆಲ್ಲಾ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ.

ಕಾರ್ಮಿಕರಿಗೆ ಉದ್ಯೋಗದ ಭದ್ರತೆ, ಕನಿಷ್ಠ ಕೂಲಿ, ಕಾನೂನು ಬದ್ಧ ಸೌಲಭ್ಯಗಳನ್ನು ನೀಡದೆ ಕಾರ್ಮಿಕರಿಗೆ ಅನಾವಶ್ಯಕವಾಗಿ ಕಿರುಕುಳ ನೀಡಲಾಗುತ್ತಿದೆ ಎಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಸಂಘಟನೆ ನೇತೃತ್ವದಲ್ಲಿ ನೂರಾರು ಕಾರ್ಮಿಕರು ರಾಜ್ಯ ಕಾರ್ಮಿಕ ಆಯುಕ್ತರ ಕಛೇರಿಗೆ ಮತ್ತು ರಾಮನಗರ ಜಿಲ್ಲಾಧಿಕಾರಿ ಕಛೇರಿ, ಕಂದಾಯ ಭವನಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಸಾವಿರಾರು ಕಾರ್ಮಿಕರು ದುಡಿಯುತ್ತಿರುವ ಟಯೋಟೋ (ಟಿ.ಎಂ.ಕೆ.) ಸಂಸ್ಥೆ ಮತ್ತು ಅಂಗಸಂಸ್ಥೆಯ ಕಾರ್ಮಿಕರು ನಾನಾ ರೀತಿಯ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಅಂಗಸಂಸ್ಥೆಗಳಾದ 1. ಸ್ಟ್ಯಾಂಜೇನ್ ಟೊಯೋಟೆ–ಟ್ಸು ಇಂಡಿಯಾ ಪ್ರೈವೇಟ್ ಲಿಮಿಟೆಡ್(ಎಸ್‌ಟಿಟಿಐ) 2. ಟೊಯೋಟೆಟ್ಸು ಆಟೋಪಾರ್ಟ್ಸ್ ಇಂಡಿ–ಯಾ ಲಿಮಿಟೆಡ್(ಟಿಟಿಐಡಿ) 3. ಮಧರಸನ್ ಆಟೋಮೋಟಿವ್ ಟಕ್ನಾಲಜೀಸ್ ಮತ್ತು ಇಂಜಿನಿಯರಿಂಗ್ (ಮೇಟ್) 4. ಸ್ಟ್ಯಾಂಜೇನ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ (ಎಸ್‌ಇಪಿಎಲ್) ಕಾರ್ಖಾನೆ ಮತ್ತು ಪ್ರಮುಖ ಸಂಸ್ಥೆಗಳಾದ 5. ಸ್ಮೀಟ್ಜ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, 6. ಎಸ್‌ಪಿಎಂ ಇಂಡಿಯಾ ಪ್ರೈವೇಟ್ ಲಿಮಿಟೆಡ್, 7.ಕ್ವಿಕ್ಲಾಕ್ ಪ್ರೈವೇಟ್ ಲಿಮಿಟೆಡ್, 8. ಜಿಡಿಆರ್ ಮೇಕ್ ಟೆಕ್ ಪ್ರೈವೇಟ್ ಲಿಮಿಟೆಡ್, 9. ವಂಡರ್ ಲಾ ಪ್ರೈವೇಟ್ ಲಿಮಿಟೆಡ್‌ನ ಸಂಸ್ಥೆಗಳು ಬಿಡದಿ ಕೈಗಾರಿಕೆ ಪ್ರದೇಶದಲ್ಲಿರುವ ಪ್ರಮುಖ ಕಂಪನಿಗಳು.

ಮೇಲಿನ ಕಾರ್ಖಾನೆಗಳಲ್ಲಿ 700 ಜನ ಖಾಯಂ ನೌಕರರು ಮತ್ತು 2500 ಜನ ಗುತ್ತಿಗೆ ಆಧಾರದಲ್ಲಿ ಕಾರ್ಮಿಕರು ದುಡಿಯುತ್ತಿದ್ದಾರೆ. ಗುತ್ತಿಗೆ ಕಾರ್ಮಿಕ (ಕ್ರಮಿಕರಣ ಮತ್ತು ರದ್ದತಿ) ಕಾಯ್ದೆ, 1970 ಕ್ಕೆ ವಿರುದ್ಧವಾಗಿ ಖಾಯಂ ಸ್ವರೂಪದ ಗುತ್ತಿಗೆ ಕಾರ್ಮಿಕರನ್ನು ಕೆಲಸದಲ್ಲಿ ತೊಡಗಿಸಿ ಅವರಿಂದ ನಿಗದಿತ ಉತ್ಪಾದನೆ ತೆಗೆದುಕೊಳ್ಳುತ್ತಿದ್ದು, ಅವರಿಗೆ ಸರಿಯಾದ ವೇತನ ನೀಡದೆ, ಖಾಯಂ ನೌಕರರನ್ನು ಸೇರಿದಂತೆ ನಾನಾ ತೊಂದರೆ ನೀಡಲಾಗುತ್ತಿದೆ. ಇವರದಲ್ಲಿ ಏಳು ಕಾರ್ಖಾನೆಗಳ 71 ನೌಕರರು ಸಸ್ಪೆಂಡ್, 99 ನೌಕರರನ್ನು ಡಿಸ್‌ಮಿಸ್ ಹಾಗೂ 44 ಜನರನ್ನು ವರ್ಗಾವಣೆ ಮಾಡಿ ದುಡಿಯುವ ಕೈಗಳಿಗೆ ಕೆಲಸ ನಿರಾಕಣೆ ಮಾಡಿದ್ದಾರೆ.

ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಸಾವಿರಾರು ಕೋಟಿ ರೂ.ಗಳ ತೆರಿಗೆ ವಿನಾಯ್ತಿ ಜೊತೆಗೆ ನೆಲ, ಜಲ, ವಿದ್ಯುತ್‌ಶಕ್ತಿಗಳಿಗೂ ಹಲವಾರು ತೆ–ರಿಗೆ ವಿನಾಯ್ತಿಗಳು ಪಡೆದ ಕಂಪನಿಗಳು ಗುತ್ತಿಗೆ ಆಧಾರದಲ್ಲಿ ದುಡಿಸಿಕೊಳ್ಳುತ್ತಿರುವ ಕಾರ್ಮಿಕರಿಗೆ ಕಾನೂನು ಬದ್ಧ ಸೌಲಭ್ಯಗಳನ್ನು ನೀಡುತ್ತಿಲ್ಲ,

ಸ್ಟ್ಯಾಂಜೇನ್ ಟೊಯೋಟೆಟ್ಸು ಇಂಡಿ–ಯಾ :

200 ಖಾಯಂ 400 ಜನ ಗುತ್ತಿಗೆ ಕಾರ್ಮಿಕರಿದ್ದು, 25 ಜನರನ್ನು ಸುಳ್ಳು ಆಪಾದನೆ ಮೇಲೆ ಅಮಾನತು ಮಾಡಿ ಇಬ್ಬರನ್ನು ಡಿಸ್‌ಮಿಸ್ ಮಾಡಲಾಗಿದೆ. ಅನಾಗತ್ಯವಾಗಿ ನೋಟೀಸಿ ನೀಡಿದ್ದು, ಕಾರ್ಮಿಕ ಮುಖಂಡರ ಮೇಲೆ ಸುಳ್ಳು ಪೋಲೀಸ್ ಮೊಕದ್ದಮೆ ಹೂಡಲಾಗಿದೆ. ಕಾರ್ಮಿಕ ಸಂಘಟನೆಗೆ ಮಾನ್ಯತೆ ನೀಡಿದ್ದರೂ ಬೇಡಿಕೆಗಳನ್ನು ಈಡೇರಿಸುತ್ತಿಲ್ಲ.

ಟೊಯೋಟೆಟ್ಸು ಆಟೋಪಾರ್ಟ್ಸ್ ಇಂಡಿಯಾ :

70 ಖಾಯಂ 210 ಜನ ಗುತ್ತಿಗೆ ಕಾರ್ಮಿಕರಿದ್ದು, ಕಾರ್ಮಿಕ ಮುಖಂಡರು ಒಳಗೊಂಡು 11 ಜನರನ್ನು ಕ್ಷುಲ್ಲಕ ಕಾರಣಕ್ಕೆ ಅಮಾನತು ಮಾಡಲಾಗಿದೆ. ಕುಂಟು ನೆಪದಿಂದ ವೇತನ ಕಡಿತದ ಬೆದರಿಕೆ ಹಾಕುತ್ತಿದ್ದಾರೆ.

ಸ್ಟ್ಯಾಂಜೇನ್ ಇಂಜಿನಿಯರಿಂಗ್ :

25 ಖಾಯಂ, 200 ಜನ ಗುತ್ತಿಗೆ ಕಾರ್ಮಿಕರಿದ್ದು, 70ಕ್ಕೂ ಹೆಚ್ಚಿನ ಕಾರ್ಮಿಕರಿಗೆ ಕೆಲಸ ನಿರಾಕರಣೆ ಮಾಡಿದ್ದು, ಕಾರ್ಮಿಕ ಸಂಘಕ್ಕೆ ಮಾನ್ಯತೆ ನೀಡಿಲ್ಲ. ವೇತನ ಹೆಚ್ಚಳವೂ ಮಾಡಿಲ್ಲ.

ಮಧರಸನ್ ಆಟೋಮೋಟಿವ್ ಟಕ್ನಾಲಜೀಸ್ :

70 ಖಾಯಂ, 210 ಜನ ಗುತ್ತಿಗೆ ಕಾರ್ಮಿಕರಿದ್ದು, 20 ಕಾರ್ಮಿಕರ ಅಮಾನತ್ತು, 6 ಜನ ಡಿಸ್‌ಮಿಸ್, 9 ಟರ್ಮಿನೇಷನ್, 10 ಜನರನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ಸಂಘ ಬಿಡದಿದ್ದರೆ, ಇನ್ನಷ್ಟು ಜನರನ್ನು ಅಮಾನತ್ತು ಮಾಡಲಾಗುವುದೆಂದೆ ಬೆದರಿಕೆ ಹಾಕುತ್ತಿದ್ದಾರೆ. 2 ದಿನಗಳ ಮುಷ್ಕರ ಮಾಡಲು ಕಾನೂನು ಬದ್ಧ ನೋಟೀಸ್ ನೀಡಿದ್ದರು, 16 ದಿನಗಳ ವೇತನ ಕಡಿತ ಮಾಡಲಾಗಿದೆ. ಕ್ಯಾಂಟೀನ್ ನಲ್ಲಿನ ಅನೈರ್ಮಲ್ಯದ ಬಗ್ಗೆ ತಿಳಿಸಿದರೆ ಅಮಾನತ್ತು ಮಾಡಲಾಗುತ್ತಿದೆ,

ಸ್ಮೀಟ್ಜ್ ಇಂಡಿಯಾ :

ಕಾನೂನು ಬದ್ಧ ರಜೆ ಇದ್ದರೂ ರಜೆ ತೆಗೆದುಕೊಳ್ಳಲು ಬಿಡುತ್ತಿಲ್ಲ, ಗುತ್ತಿಗೆ ಕಾರ್ಮಿಕರಿಂದ ಖಾಯಂ ಸ್ವರೂಪದ ಉತ್ಪಾದನೆ ಮಾಡಿಸಲಾಗುತ್ತಿದೆ. ರಾತ್ರಿಪಾಳಿಯಲ್ಲಿ ಇಬ್ಬರನ್ನೂ ನಿಯೋಜಿಸಿ ಸುರಕ್ಷ ಕ್ರಮಗಳನ್ನು ಕೈಗೊಂಡಿಲ್ಲ. ಕಾರ್ಮಿಕ ಇಲಾಖೆಯಲ್ಲಿ ಕೈಗಾರಿಕಾ ವಿವಾದ ಹೂಡಿದ್ದರೂ ಸಭೆ ಬರದೆ ಉದ್ಧಟನ ತೋರಲಾಗುತ್ತಿದೆ,

ಎಸ್‌ಪಿಎಂ ಇಂಡಿಯಾ :

ಕಾರ್ಮಿಕ ಸಂಘವನ್ನು ಮಾನ್ಯ ಮಾಡದೇ, ಕಾರ್ಮಿಕ ಮುಖಂಡರಾದ ಪುರುಷೋತ್ತಮ್ ರವರಿಗೆ ಕೆಲಸ ನಿರಾಕರಣೆ ಮಾಡಿದ್ದು, ಉಳಿದ ಮುಖಂಡರನ್ನು ವರ್ಗಾವಣೆ ಹೆಸರಿನಲ್ಲಿ ಕಿರುಕುಳ ನೀಡಲಾಗುತ್ತಿದೆ. 19 ಜನರನ್ನು ಕೆಲಸದಿಂದ ತೆಗೆದು ಹಾಕಿದ್ದು, ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ಕಾನೂನು ರೀತಿಯಲ್ಲಿ ವೇತನ ನೀಡುತ್ತಿಲ್ಲ. ಕೈಗಾರಿಕಾ ವಿವಾದ ಸಭೆಗೂ ಬರುತ್ತಿಲ್ಲ.

ವಂಡರ್ ಲಾ ಪ್ರೈವೇಟ್ ಲಿಮಿಟೆಡ್ :

150 ಖಾಯಂ, 900 ಜನ ಗುತ್ತಿಗೆ ಕಾರ್ಮಿಕರಿದ್ದು, ಸಂಘಕ್ಕೆ ಕಾನೂನು ಬದ್ಧ ಮಾನ್ಯತೆ ನೀಡಿಲ್ಲ, 30 ಜನರನ್ನು ವರ್ಗಾವಣೆ ಮಾಡಿದ್ದು, 35 ಜನರನ್ನು ಅಮಾನತ್ತು, 45 ಜನರನ್ನು ಟರ್ಮಿನೇಷನ್, 20 ಜನರನ್ನು ಡಿಸ್‌ಮಿಸ್ ಮಾಡಲಾಗಿದೆ. 243 ದಿನಗಳಿಂದ ನಿರಂತರ ಧರಣಿ ನಡೆಸಿದರೂ ಸಹ ಕಾರ್ಮಿಕ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ.

ಕಾರ್ಮಿಕರು ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಬನ್ನೇರುಘಟ್ಟ ರಸ್ತೆಯಲ್ಲಿರುವ ಕಾರ್ಮಿಕ ಆಯುಕ್ತರ ಕಛೇರಿ ಮತ್ತು ರಾಮನಗರದ ಕಂದಾಯ ಭವನದಲ್ಲಿರುವ ಜಿಲ್ಲಾಧಿಕಾರಿ ಕಛೇರಿ ಬಳಿ ಸತತವಾಗಿ ಹೋರಾಟವನ್ನು ಹಮ್ಮಿಕೊಂಡು ಗುತ್ತಿಗೆ ಕಾರ್ಮಿಕರ ಮೇಲಿನ ಶೋಷಣೆ ನಿಲ್ಲಿಸಿ ಕಾನೂನು ಬದ್ಧ ಸೌಲಭ್ಯ ನೀಡಬೇಕು, ಸಂಘ ಕಟ್ಟುವ ಹಕ್ಕು ಖಾತ್ರಿ ಮಾಡಬೇಕು. ಸಸ್ಪೆಂಡ್, ಡಿಸ್‌ಮಿಸ್, ಟ್ರಾನ್ಸ್‌ಫರ್, ಹೆಸರಿನಲ್ಲಿ ಕಾರ್ಮಿಕರನ್ನು ಕೆಲಸದಿಂದ ಹೊರಗಿಡುವ ಆದೇಶವನ್ನು ಹಿಂಪಡೆಯಬೇಕು. ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ನಿರಂತರವಾಗಿ ಹೋರಾಟವನ್ನು ಹಮ್ಮಿಕೊಂಡಿದೆ.

ಪ್ರತಿಭಟನೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಎನ್.ಉಮೇಶ್, ಸಿಐಟಿಯು ಬೆಂ.ಉತ್ತರ ಕಾರ್ಯದರ್ಶಿ ಪ್ರತಾಪ್‌ಸಿಂಹ, ಬಿಡದಿ ಕೈಗಾರಿಕಾ ಪ್ರದೇಶ ಕಾರ್ಮಿಕರ ಹೋರಾಟ ಸಮಿತಿ ಅಧ್ಯಕ್ಷರಾದ ಬಿ.ವಿ. ರಾಘವೇಂದ್ರ, ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್, ಮುಖಂಡರಾದ ಸಂತೋಷ್ ಕಟ್ಟಿಮನಿ, ರುದ್ರೇಗೌಡ, ಸತೀಶ್, ಚಂದ್ರಶೇಖರ್ ಡಿ. ಹರೀಶ್, ಮಹಂತೇಶ್, ಕಾಂತರಾಜ್, ಅಶೋಕ್ ಸೇರಿದಂತೆ ಇನ್ನಿತರ ಮುಖಂಡರು ಭಾಗವಹಿಸಿದ್ದರು.



ಚಿತ್ರ ನೋಟ

ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**